# ಇಂದಿನ ಮಕ್ಕಳೇ ಇಂದಿನ ಪ್ರಜೆಗಳು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## "ಸರಕಾರ ಈ ದೇಶದ ಪ್ರತಿಯೊಂದು ಮಗುವಿನ ಹಾಗೂ ಮಕ್ಕಳ ಕಾನೂನಾತ್ಮಕ ಪೋಷಕ"

## ಮಕ್ಕಳ ಶಿಕ್ಷಣ ಮತ್ತು ಸಂರಕ್ಷಣೆ ನಮ್ಮೆಲ್ಲರ ಹೊಣೆ

ದುಡಿಮೆ ಬೇಡ ಶಿಕ್ಷಣ ಬೇಕು

CHILD LINE 1098 NIGHT & DAY

ಸಮಗ್ರ ಶಿಕ್ಷಣ ಕರ್ನಾಟಕ

ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016
# (ಪರಿಷ್ಕರಣೆ –2023)

# ಕರ್ನಾಟಕದಲ್ಲಿ ಹಕ್ಕು ಆಧಾರಿತ ಮಕ್ಕಳ ರಕ್ಷಣೆ

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು

**ಕರ್ನಾಟಕ ಸರಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,**
**ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ),**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,**
**ಸಮಾಜ ಕಲ್ಯಾಣ ಆಯುಕ್ತಾಲಯ (ಸಮಾಜ ಕಲ್ಯಾಣ ಇಲಾಖೆ),**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,**
**ಅಲ್ಪಸಂಖ್ಯಾತರ ನಿರ್ದೇಶನಾಲಯ (ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ),**
**ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

## ಪ್ರತಿಯೊಂದು ಶಾಲೆಯಲ್ಲಿ ಮಕ್ಕಳ ಸಂರಕ್ಷಣೆಗಾಗಿ ಮಾಡಬೇಕಾದ ವ್ಯವಸ್ಥೆಗಳು/ ಕ್ರಮಗಳು

1. ಶಾಲಾ ಮಕ್ಕಳ ರಕ್ಷಣಾ ನೀತಿ
2. ಶಾಲಾ ಮಕ್ಕಳ ರಕ್ಷಣಾ ಸಮಿತಿ
3. ಮಕ್ಕಳ ಹಕ್ಕುಗಳ ಕ್ಲಬ್
4. 1098 ಶಾಶ್ವತ ಫಲಕ
5. ಮಕ್ಕಳ ಬದ್ಧತಾ ಸ್ವೀಕಾರ ಪತ್ರಗಳು
6. ಸಿಬ್ಬಂದಿ ಬದ್ಧತಾ ಸ್ವೀಕಾರ ಪತ್ರಗಳು
7. ಸಲಹಾ ಪೆಟ್ಟಿಗೆ ಅಳವಡಿಸಿರಬೇಕು
8. ಮಕ್ಕಳ ರಕ್ಷಣಾ ನೀತಿಗೆ ಶಾಲೆಯ 20 ಬದ್ಧತೆಗಳನ್ನು ಶಾಲೆಯ ಗೋಡೆಯಲ್ಲಿ ಬರೆಸಿರಬೇಕು.
9. ಕಾಲ ಕಾಲಕ್ಕೆ ಸೂಕ್ತ ರೀತಿಯ ಯೋಜನೆ ತಯಾರಿ, ನಿಗಾವಣೆ, ಪ್ರಗತಿ ಪರಿಶೀಲನೆ, ವರದಿ ತಯಾರಿ ಮತ್ತು ಸಲ್ಲಿಸುವುದು.

# ಪ್ರತಿಯೊಂದು ವಸತಿ ನಿಲಯಗಳಲ್ಲಿ ಮಕ್ಕಳ ಸಂರಕ್ಷಣೆಗಾಗಿ ಮಾಡಬೇಕಾದ ವ್ಯವಸ್ಥೆಗಳು/ ಕ್ರಮಗಳು

1. ಮಕ್ಕಳ ರಕ್ಷಣಾ ನೀತಿ
2. ಮಕ್ಕಳ ರಕ್ಷಣಾ ಸಮಿತಿ
3. ಮಕ್ಕಳ ಹಕ್ಕುಗಳ ಕ್ಲಬ್ (ಶಿಕ್ಷಣ ಸಹಿತ ವಸತಿ ನಿಲಯಗಳಲ್ಲಿ ಮಾತ್ರ)
4. 1098 ಶಾಶ್ವತ ಫಲಕ
5. ಮಕ್ಕಳ ಬದ್ಧತಾ ಸ್ವೀಕಾರ ಪತ್ರಗಳು
6. ಸಿಬ್ಬಂದಿ ಬದ್ಧತಾ ಸ್ವೀಕಾರ ಪತ್ರಗಳು
7. ಸಲಹಾ ಪೆಟ್ಟಿಗೆ ಅಳವಡಿಸಿರಬೇಕು
8. ಮಕ್ಕಳ ರಕ್ಷಣಾ ನೀತಿಗೆ ಶಾಲೆಯ 20 ಬದ್ಧತೆಗಳನ್ನು ಶಾಲೆಯ ಗೋಡೆಯಲ್ಲಿ ಬರೆಸಿರಬೇಕು.
9. ಕಾಲ ಕಾಲಕ್ಕೆ ಸೂಕ್ತ ರೀತಿಯ ಯೋಜನೆ ತಯಾರಿ, ನಿಗಾವಣೆ, ಪ್ರಗತಿ ಪರಿಶೀಲನೆ, ವರದಿ ತಯಾರಿ ಮತ್ತು ಸಲ್ಲಿಸುವುದು.

# ವಿವಿಧ ಹಂತದ ಮಕ್ಕಳ ರಕ್ಷಣಾ ವ್ಯವಸ್ಥೆಗಳು – Different Level Child Protection Structures

**DCPC**

- **District Child Protection Committee**
- ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ.(DC- Chairperson, DCPO- Secretary)

**TCPC**

- **Taluk Child Protection Committee**
- ತಾಲ್ಲೂಕು ಮಕ್ಕಳ ರಕ್ಷಣಾ ಸಮಿತಿ.(Thashildar- Chairperson, CDPO- Secretary)

**WCPC**

- **Gram Panchayath Women and Child Protection Committee**
- ಗ್ರಾಮ ಪಂಚಾಯತಿ ಮಟ್ಟದ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ.
- GP- President- Chairperson, PDO- Secretary)

**VCPC**

- **Village Child Protection Committee**
- ಗ್ರಾಮ ಮಕ್ಕಳ ರಕ್ಷಣಾ ಸಮಿತಿ (VHSNC)
- GP Member Chairperson ,ASHA Worker - Secretary.

## ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಮಕ್ಕಳ ಸಂರಕ್ಷಣೆಗಾಗಿ ಮಾಡಬೇಕಾದ ವ್ಯವಸ್ಥೆಗಳು/ ಕ್ರಮಗಳು

1. 1098/112 ಶಾಶ್ವತ ಫಲಕ ಭಿತ್ತರಿಸುವುದು
2. ಪ್ರತಿ ನವೆಂಬರ್ ಮಾಸದಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಸಿ ಮಕ್ಕಳ ಹಕ್ಕುಗಳು ಮತ್ತು ಸಂರಕ್ಷಣೆಯ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸುವುದು.
3. ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ರಚಿಸಿ ಅನುಷ್ಠಾನಕ್ಕೆ ತರುವುದು

**Women and Child Protection Committee.(WCPC)**

4. ಗ್ರಾಮ ಶಿಕ್ಷಣ ಪಡೆ ರಚಿಸಿ ಅನುಷ್ಠಾನಕ್ಕೆ ತರುವುದು.
5. ಗ್ರಾಮ ಪಂಚಾಯತ್ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿ ರಚಿಸಿ ಅನುಷ್ಠಾನಕ್ಕೆ ತರುವುದು.
6. ಕೆ.ಡಿ.ಪಿ ಯಲ್ಲಿ ಮಕ್ಕಳ ಅಭಿವೃದ್ಧಿ ಕುರಿತು ಕ್ರಮ.
7. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಎಲ್ಲಾ ಗ್ರಾಮಗಳಲ್ಲಿ ಗ್ರಾಮ ಮಕ್ಕಳ ರಕ್ಷಣಾ ಸಮಿತಿ ರಚಿಸಿ ಅನುಷ್ಠಾನಕ್ಕೆ ತರುವುದು.
8. ಶಾಲೆ/ಅಂಗನವಾಡಿ/ವಸತಿನಿಲಯ/ಆಸ್ಪತ್ರೆ ಮುಂತಾದ ಕಡೆ 1098 ಫಲಕ ಹಾಗೂ ವ್ಯವಸ್ಥೆಗಳ ನಿಗಾವಣೆ–ವರದಿ–ಅನುಷ್ಠಾನ
9. ಕಾಲ ಕಾಲಕ್ಕೆ ಸೂಕ್ತ ರೀತಿಯ ಯೋಜನೆ ತಯಾರಿ, ನಿಗಾವಣೆ, ಪ್ರಗತಿ ಪರಿಶೀಲನೆ, ವರದಿ ತಯಾರಿ ಮತ್ತು ಸಲ್ಲಿಸುವುದು.

**ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ “ತೆರದ ಮನೆ” ಕಾರ್ಯಕ್ರಮ:**

ಮಕ್ಕಳ ಜಾಗೃತಿ ಮತು ಅರಿವುಕಾರ್ಯಕ್ರಮ ಪ್ರತೀ ವಾರಕ್ಕೊಂದು ದಿನ (ಗುರುವಾರ) ಬೆಳಗ್ಗಿನ ಅವಧಿ ಅಥವಾ ಶಾಲೆ ಮತ್ತು ಠಾಣೆಯವರು ನಿರ್ಧರಿಸಿದ ಯಾವುದೇ ವಾರ.

**ಅಂಗನವಾಡಿ:**

ಬಾಲವಿಕಾಸ ಸಮಿತಿ.

ಬಾಲಕಿಯರ/ಕಿಶೋರಿ ಸಂಘ

# ನೀತಿ?!

- ನೀತಿ ಎಂದರೇನು?

- ನಿಯಮ ಎಂದರೇನು?

# ನೀತಿ ಎಂದರೆ

- ಸರ್ಕಾರದ ಕ್ರಿಯೆಗಳಿಗೆ ಮಾರ್ಗದರ್ಶನ ನೀಡುವ ಮೌಲ್ಯಾಧಾರಿತ ತತ್ತ್ವಗಳು, ಯೋಜನೆ, ಚಟುವಟಿಕೆಗಳಿಗೆ ಮಾರ್ಗದರ್ಶನ
- ಮಾರ್ಗಸೂಚಿ, ನಿಯಮ, ಕಾನೂನು, ತತ್ತ್ವ
- ಗುರಿ ಮುಟ್ಟಲು ಸರ್ಕಾರ ಒಪ್ಪಿಕೊಂಡಿರುವ ಮಾರ್ಗದರ್ಶಿ ಸೂತ್ರಗಳು
- ಯಾರಿಗಾಗಿ, ಎಲ್ಲಿ, ಯಾಕೆ, ಯಾರಿಂದ, ಹೇಗೆ, ಯಾವಾಗ, ಏನನ್ನು ಮಾಡಬೇಕೆಂದು ನಿರ್ದಿಷ್ಟಪಡಿಸುವ ಮೂಲ ಚಿಂತನೆಗಳು

# ಹಾಗಾದರೆ ಎಂತಹ ವ್ಯವಸ್ಥೆಗಳು ನಮ್ಮಲ್ಲಿವೆ?

| ನೀತಿಗಳು | ತಡೆಯಲು ವ್ಯವಸ್ಥೆಗಳು |
| --- | --- |
| ಕಾಯಿದೆಗಳು | ಗುರುತಿಸಲು ವ್ಯವಸ್ಥೆಗಳು |
| ಕಾರ್ಯಕ್ರಮಗಳು | ದೂರು ನೀಡಲು ವ್ಯವಸ್ಥೆಗಳು |
| ಯೋಜನೆಗಳು | ರಕ್ಷಣೆಗೆ ವ್ಯವಸ್ಥೆಗಳು |
| ಹಣಕಾಸು | ಕಾನೂನು ನೆರವು/ ಆಶ್ರಯ |
| ನಿಯಮಗಳು | ಪುನರ್ವಸತಿ |
| ಕ್ರಿಯಾಯೋಜನೆಗಳು | ಸಮುದಾಯ ಆಧಾರಿತ ವ್ವನಸ್ಥೆ ಮತ್ತು ಅನುಸರಣೆ. |

# ಶಾಲಾ ಮುಖ್ಯಸ್ಥನಿಂದಲೇ ಲೈಂಗಿಕ ದೌರ್ಜನ್ಯ

## ಯಡ್ರಾಮಿ ಸ್ವಯಂ ಘೋಷಿತ ಬಂದ್



ಪ್ರತಿಭಟನೆ ನಂತರ ಕೆಕೆಆರ್‌ಡಿಬಿ ಅಧ್ಯಕ್ಷ, ಶಾಸಕ ಡಾ.ಅಜಯ್‌ಸಿಂಗ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

> **ದೇಶದಲ್ಲಿ ಹಿಂದೂಗಳನ್ನು ಗುರಿಯಾಗಿಸಿ ಲವ್ ಜಿಹಾದ್, ಲ್ಯಾಂಡ್ ಜಿಹಾದ್ ಹಾಗೂ ಬಚ್ಚಖೋರಿ ಕರೋ ಜಿಹಾದ್ ನಡೆಯುತ್ತಿದೆ. ಈ ಕುರಿತು ದೂರು ಸಲ್ಲಿಸಲು ತೆರಳಿದರೆ ರಾಜಕಾರಣಿಗಳು ಪೊಲೀಸರ ಮೇಲೆ ಒತ್ತಡ ಹೇರುತ್ತಿದ್ದಾರೆ. ಇದರಿಂದ ಹಿಂದೂಗಳಿಗೆ ನ್ಯಾಯ ದೊರಕುತ್ತಿಲ್ಲ. ಲೈಂಗಿಕ ದೌರ್ಜನ್ಯ ಆರೋಪಿಯನ್ನು ಎನ್‌ಕೌಂಟರ್ ಮಾಡಬೇಕು ಮತ್ತು ಆಸ್ತಿ ಮುಟ್ಟುಗೋಲು ಹಾಕಬೇಕು.**
>
> **-ಸಿದ್ಧಲಿಂಗ ಸ್ವಾಮೀಜಿ** ಆಂದೋಲ ಗ್ರಾಮ

■ **ವಿಕ ಸುದ್ದಿಲೋಕ** ಯಡ್ರಾಮಿ (ಕಲಬುರಗಿ)

ಹನ್ನೊಂದು ವರ್ಷದ ವಿದ್ಯಾರ್ಥಿನಿ ಮೇಲೆ ಖಾಸಗಿ ಶಾಲಾ ಮುಖ್ಯಸ್ಥನೊಬ್ಬ ಲೈಂಗಿಕ ದೌರ್ಜನ್ಯ ಎಸಗಿದ ಘಟನೆ ಯಡ್ರಾಮಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಆರೋಪಿ ಹಾಜಿಮಲಂಗ್ ಗಣಿಯಾರನನ್ನು ಪೊಲೀಸರು ಸೋಮವಾರ ತಡರಾತ್ರಿ ಬಂಧಿಸಿದ್ದಾರೆ.



ಹಾಜಿಮಲಂಗ್

ಅಪ್ರಾಪ್ತೆ ಮೇಲಿನ ಲೈಂಗಿಕ ದೌರ್ಜನ್ಯ ಖಂಡಿಸಿ ವಿವಿಧ ಸಂಘಟನೆಗಳು ಯಡ್ರಾಮಿ ಬಂದ್ ಮಾಡಿ ಮಂಗಳವಾರ ಪ್ರತಿಭಟನೆ ನಡೆಸಿದವು. ಇದರಿಂದ ಪಟ್ಟಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಪ್ರಾಥಮಿಕ ತರಗತಿಯಲ್ಲಿ ಓದುತ್ತಿರುವ ಬಾಲಕಿ ಮೇಲೆ ಆರೋಪಿ ಎರಡು ದಿನದ ಹಿಂದೆ ಶಾಲೆಯಲ್ಲಿ ರಾತ್ರಿ ವೇಳೆಯಲ್ಲಿ ಜೀವ ಬೆದರಿಕೆ ಹಾಕಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ವಿಷಯವನ್ನು ಮನೆಯಲ್ಲಿ ತಿಳಿಸದಂತೆ ಹೆದರಿಸಿದ್ದ ಎನ್ನಲಾಗಿದೆ. ಬಾಲಕಿಯ ಪಾಲಕರಿಗೆ ಈ ವಿಷಯ ಮತ್ತೊಬ್ಬರಿಂದ ತಿಳಿದು, ಠಾಣೆಗೆ ದೂರು ನೀಡಿದರು. ಪ್ರಕರಣ ದಾಖಲಾಗುತ್ತಿದಂತೆ ಪಿಎಸ್ಐ ವಿಶ್ವನಾಥ ಮುದ್ದರೆಡ್ಡಿ ಆರೋಪಿಯನ್ನು ಬಂಧಿಸಿದರು.

**ಜನಾಕ್ರೋಶ, ಯಡ್ರಾಮಿ ಬಂದ್:** ಈ ವಿಷಯ ತಾಲೂಕಿನಾದ್ಯಂತ ಹರಡುತ್ತಿದ್ದಂತೆ ಮಂಗಳವಾರ ಬೆಳಗ್ಗೆ ಶ್ರೀರಾಮಸೇನೆ ರಾಜ್ಯ ಗೌರವಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ, ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಹಾಗೂ ವಿವಿಧ ಸಮುದಾಯಗಳ ಮುಖಂಡರು ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿ ಹಾಗೂ ಶಾಸಕರು ಸ್ಥಳಕ್ಕೆ ಬರುವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು. ವ್ಯಾಪಾರಸ್ಥರು ಅಂಗಡಿ ಮುಂಗಟ್ಟುಗಳನ್ನು ಸ್ವಯಂ ಬಂದ್ ಮಾಡಿದ್ದರು. ಬಸ್ ಸಂಚಾರ ಸ್ಥಗಿತಗೊಳಿಸಲಾಯಿತು.

ಕೆಕೆಆರ್‌ಡಿಬಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ. ಅಜಯಸಿಂಗ್ ಪ್ರತಿಭಟನೆ ಸ್ಥಳಕ್ಕೆ ಆಗಮಿಸಿ, ''ಆರೋಪಿ ವಿರುದ್ಧ ಕಾನೂನಿನಂತೆ ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿನಿಗೆ ಸೂಕ್ತ ಚಿಕಿತ್ಸೆ ನೀಡಿ ಸರಕಾರದ ಸೌಲಭ್ಯ ನೀಡಲಾಗುವುದು. ನಾನು ವೈಯಕ್ತಿಕವಾಗಿ 2.50 ಲಕ್ಷ ರೂಪಾಯಿ ಧನ ಸಹಾಯ ನೀಡುತ್ತೇನೆ,'' ಎಂದರು.

# ಕೋಲಾರದ ಕಾಮುಕ ಶಿಕ್ಷಕನ ಮೊಬೈಲಲ್ಲಿ ಹೆಣ್ಮಕ್ಕಳ 5000ಕ್ಕೂ ಹೆಚ್ಚು ನಗ್ನ ದೃಶ್ಯಗಳು!

## ಮೊರಾರ್ಜಿ ವಸತಿ ಶಾಲೆಯೊಂದರಲ್ಲಿ ಬಟ್ಟೆ ಬದಲಿಸುವಾಗ ವಿಡಿಯೋ, ಫೋಟೋ ಸೆರೆ

## ಇದು ಭಯಾನಕ, ಅಸಭ್ಯ ಎಂದ ಹೈಕೋರ್ಟ್ | ಶಿಕ್ಷಕನ ವಿರುದ್ಧ ಕೇಸ್ ರದ್ದತಿಗೆ ನಕಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೋಲಾರ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯೊಂದರಲ್ಲಿ ಬಾಲಕಿಯರು ಬಟ್ಟೆ ಬದಲಿಸುವ ಸಮಯದ 5000ಕ್ಕೂ ಹೆಚ್ಚು ಫೋಟೋ ಹಾಗೂ ನೂರಾರು ವಿಡಿಯೋ ಸೆರೆಹಿಡಿದ ಆರೋಪದ ಮೇಲೆ ಪೋಕ್ಸೋ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿಯಲ್ಲಿ ಚಿತ್ರಕಲಾ ಶಿಕ್ಷಕನೊಬ್ಬನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಪ್ರಕರಣ ಸಂಬಂಧ ತನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಚಿತ್ರಕಲಾ ಶಿಕ್ಷಕ ಮುನಿಯಪ್ಪ (46) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಸಾರಾಸಗಟಾಗಿ ತಿರಸ್ಕರಿಸಿ, ಶಿಕ್ಷಕನ ಕೃತ್ಯವು ನಿಜಕ್ಕೂ ಅಸಭ್ಯ ಹಾಗೂ ಭಯಾನಕವಾಗಿದೆ. ಇಂತಹ ಪ್ರಕರಣವನ್ನು ರದ್ದುಪಡಿಸಲಾಗದು ಎಂದಿದೆ.

ಪೋಕ್ಸೋ ಕಾಯ್ದೆ ಸೆಕ್ಷನ್ 11 ಪ್ರಕಾರ, ಮಕ್ಕಳ ದೇಹ ಅಥವಾ ದೇಹದ ಯಾವುದೇ ಭಾಗವನ್ನು ಅಸಭ್ಯ ರೀತಿಯಲ್ಲಿ ಪ್ರದರ್ಶಿಸುವುದು ಲೈಂಗಿಕ ಕಿರುಕುಳವಾಗುತ್ತದೆ. ಈ ಅಪರಾಧವು ಕಾಯ್ದೆಯ ಸೆಕ್ಷನ್ 12ರಡಿ ಶಿಕ್ಷಾರ್ಹವಾಗಿದೆ.

➘ 5

### 5 ಫೋನ್, ಸಾವಿರಾರು ವಿಡಿಯೋ


- ವಸತಿ ಶಾಲೆಯ ಚಿತ್ರಕಲಾ ಶಿಕ್ಷಕ ಮುನಿಯಪ್ಪ ಎಂಬುವನ ವಿರುದ್ಧ ಮಾಸ್ತಿ ಪೊಲೀಸ್ ಠಾಣೆಯಲ್ಲಿ ಕಳೆದ ವರ್ಷ ಎಫ್‌ಐಆರ್ ದಾಖಲು
- ಹೆಣ್ಣುಮಕ್ಕಳು ಬಟ್ಟೆ ಬದಲಿಸುವಾಗ ಫೋಟೋ, ವಿಡಿಯೋ ಸೆರೆಹಿಡಿದ ಬಗ್ಗೆ ದೂರು ನೀಡಿದ್ದ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ
- ಪೋಕ್ಸೋ ಕೇಸ್ ದಾಖಲು: ಪೊಲೀಸ್ ತನಿಖೆಯ ವೇಳೆ ಆರೋಪಿ ಬಳಿ 5 ಮೊಬೈಲ್, ಸಾವಿರಾರು ವಿಡಿಯೋಗಳು ಪತ್ತೆ
- ಎಫ್‌ಐಆರ್ ಹಾಗೂ ಪೋಕ್ಸೋ ವಿಶೇಷ ಕೋರ್ಟ್‌ನ ವಿಚಾರಣೆ ರದ್ದತಿ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಚಿತ್ರ ಕಲಾ ಶಿಕ್ಷಕ

ಕೇಂದ್ರದಿಂದ ಅಂಕಿಅಂಶ ಬಿಡುಗಡೆ

ಪ್ರಜಾವಾಣಿ ಶನಿವಾರ • ಜುಲೈ 20, 2024

## ಶಾಲೆ ಪಕ್ಕದ ಚರಂಡಿಗಳಿಂದ ದುರ್ವಾಸನೆ: ಸ್ವಚ್ಛತೆ ಕಾಪಾಡಲು ಒತ್ತಾಯ

# ಗ್ರಾ.ಪಂ ಎದುರು ಮಕ್ಕಳ ಪ್ರತಿಭಟನೆ



ಅಳವಂಡಿ ಸಮೀಪದ ಬೆಟಗೇರಿ ಗ್ರಾ.ಪಂ ಎದುರು ಶಾಲಾ ಮಕ್ಕಳು ಹಾಗೂ ಪಾಲಕರು ಪ್ರತಿಭಟನೆ ನಡೆಸಿದರು



ಶಾಲಾ ಪಕ್ಕದಲ್ಲಿ ತ್ಯಾಜ್ಯ

ಪ್ರಜಾವಾಣಿ ವಾರ್ತೆ

ಅಳವಂಡಿ: ಸಮೀಪದ ಬೆಟಗೇರಿ ಗ್ರಾಮದ ಎಸ್‌ಸಿ ಕಾಲೊನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪಕ್ಕದಲ್ಲಿ ಚರಂಡಿಗಳಿಂದ ದುರ್ನಾತ ಬೀರುತ್ತಿದೆ. ಹಾಗಾಗಿ ಸ್ವಚ್ಛತೆ ಕಾಪಾಡುವಂತೆ ಅಲ್ಲಿನ ಶಾಲಾ ವಿದ್ಯಾರ್ಥಿಗಳು ಹಾಗೂ ಪಾಲಕರು ಗ್ರಾಮ ಪಂಚಾಯಿತಿ ಎದುರು ಕೆಲ ಕಾಲ ಪ್ರತಿಭಟನೆ ನಡೆಸಿದರು.

‘ಶಾಲೆಯ ಕಾಂಪೌಂಡ್ ಪಕ್ಕದಲ್ಲಿ ಚರಂಡಿ ಇರುವುದರಿಂದ ಚರಂಡಿ ಸಂಪೂರ್ಣ ಹೂಳು ತುಂಬಿಕೊಂಡು ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ. ಇದರಿಂದ ಚರಂಡಿಯ ದುರ್ನಾತಕ್ಕೆ ಅನೇಕ ರೋಗಗಳಿಗೆ ತುತ್ತಾಗುವ ಪರಿಸ್ಥಿತಿ ಎದುರಾಗಿದೆ’ ಎಂದು ವಿದ್ಯಾರ್ಥಿಗಳು ಹಾಗೂ ಪಾಲಕರು ಆರೋಪಿಸಿದರು.

‘ಶಾಲಾ ಮೈದಾನವು ಚರಂಡಿಗಿಂತ ಕೆಳಮಟ್ಟದಲ್ಲಿ ಇರುವುದರಿಂದ ಮಳೆ ಬಂದರೆ ಮಳೆ ನೀರು ಸಂಪೂರ್ಣವಾಗಿ ಮೈದಾನ ಸೇರುತ್ತದೆ. ಇದರಿಂದ ಪರದಾಡುವುದು ಸಾಮಾನ್ಯವಾಗಿದೆ. ಹಲವಾರು ಬಾರಿ ಶಾಲಾ ಮೈದಾನ ಅಭಿವೃದ್ಧಿ ಪಡಿಸಿ ಎಂದು ಮನವಿ ಮಾಡಿದರೂ ಪ್ರಯೋಜನವಾಗಿಲ್ಲ’ ಎಂದರು.

ಇತ್ತೀಚೆಗೆ ಡೆಂಗಿ ವ್ಯಾಪಕವಾಗಿ ಆವರಿಸಿದೆ. ಈ ಶಾಲೆಯ ಪಕ್ಕದಲ್ಲಿ ಸ್ವಚ್ಛತೆ ಇಲ್ಲದಿರುವುದರಿಂದ ರೋಗದ ಭೀತಿ ಹರಡಿದೆ’ ಎಂದು ನಿವಾಸಿಗಳು ದೂರಿದರು.

ಪ್ರಮುಖರಾದ ಭರಮಪ್ಪ ಕಂಬಳಿ, ಶರಣಪ್ಪ, ದುರಗೇಶ, ನಾರಾಯಣಪ್ಪ, ಮಹೇಶ, ಕೋಟೇಶ, ಸಿದ್ದಣ್ಣ, ಸಿದ್ದು ಗುಡಿಮುಂದಿನ, ಸಿದ್ದಪ್ಪ, ಸಂಕಪ್ಪ, ಮಾರುತಿ, ಮೈಲಪ್ಪ, ಗುಂಡಪ್ಪ, ಮರಿಯಪ್ಪ, ವಿದ್ಯಾರ್ಥಿಗಳು ಇತರರು ಇದ್ದರು.

# ಮುದ್ದೇಬಿಹಾಳ: ವಸತಿ ಶಾಲೆ ಮುಂದೆ ವಿದ್ಯಾರ್ಥಿನಿಗೆ ತಾಳಿಕಟ್ಟಿದ ಯುವಕ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ವಸತಿ ಶಾಲೆಯೊಂದರ ಮುಂಭಾಗದಲ್ಲಿ 10ನೇ ತರಗತಿ ವಿದ್ಯಾರ್ಥಿನಿಗೆ ಯುವಕನೊಬ್ಬ ತಾಳಿಕಟ್ಟಿ, ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಘಟನೆಗೆ ಸಂಬಂಧಿಸಿದಂತೆ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಪೋಕ್ಸೊ ಅಡಿ ಬಾಲಕಿ ಪ್ರಕರಣ ದಾಖಲಿಸಿದ್ದಾಳೆ.

**ಘಟನೆ ವಿವರ:** ಶಾಲೆಯ ಮುಂಭಾಗದಲ್ಲಿ ನ.24 ರಂದು ಈ ಘಟನೆ ನಡೆದಿದ್ದು, ಆರೋಪಿಗಳಾದ ನಾಲತವಾಡ ಪಟ್ಟಣದ ಮೌನೇಶ ಹನುಮಂತ ಮಾದರ ಹಾಗೂ ಸಂಗಮೇಶ ಬಡಪ್ಪ ಜುಂಜುವಾರ ವಿರುದ್ಧ ಪೋಕ್ಸೊ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆ ಅನ್ವಯ ನ.28ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ವಸತಿ ಶಾಲೆಗೆ ಅಧಿಕಾರಿಗಳು ಭೇಟಿ ನೀಡಿದ್ದು, ಮಾಹಿತಿ ಕಲೆ ಹಾಕುತ್ತಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ, ನಾಲತವಾಡ ಪಟ್ಟಣದ ಖಾಸಗಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದ ಬಾಲಕಿಗೆ ಚುಡಾಯಿಸಿ ಪ್ರೀತಿಸುವಂತೆ ಬೆನ್ನು ಬಿದ್ದು ಕಿರುಕುಳ ನೀಡಿದ್ದು, ತಡೆಯಲು ಹೋದ ಅವರ ಸಂಬಂಧಿಕರ ಮೇಲೆ ಹಲ್ಲೆಗೈದು ಜೀವ ಬೆದರಿಕೆ ಒಡ್ಡಿದ ಆರೋಪದ ಮೇರೆಗೆ ಸಂಗಮೇಶ ಜುಂಜವಾರ, ಚಿದಾನಂದ ಕಟ್ಟಿಮನಿ ಹಾಗೂ ಮೌನೇಶ ಮಾದರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಅಡಿ ಪ್ರಕರಣ ದಾಖಲಿಸಲಾಗಿದೆ.

ಪ್ರಜಾವಾಣಿ 30-11-2024

ಪ್ರಜಾವಾಣಿ 10-20-2024

# ವಿದ್ಯಾರ್ಥಿಗಳಿಗೆ ಕತ್ತೆ, ಒಂಟೆ ಅನ್ನುವಂತಿಲ್ಲ

ಪ್ರಜಾವಾಣಿ ವಾರ್ತೆ



ಪಟ್ನಾ: ಬಿಹಾರದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ವಿರುದ್ಧ ಕೀಳುಮಟ್ಟದ ಭಾಷೆ ಬಳಸುತ್ತಿರುವ ಬಗ್ಗೆ ಪೋಷಕರಿಂದ ವ್ಯಾಪಕ ದೂರುಗಳು ಬಂದ ಬೆನ್ನಲ್ಲೇ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು ಈ ಕುರಿತು ಕಟ್ಟುನಿಟ್ಟಿನ ಮಾರ್ಗಸೂಚಿಯನ್ನು ಹೊರಡಿಸಿದ್ದು ತಕ್ಷಣದಿಂದಲೇ ಇದು ಪಾಲನೆ ಆಗಬೇಕು ಎಂದು ಸೂಚಿಸಿದೆ.

ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳನ್ನು 'ಕತ್ತೆ', ಎತ್ತರ ಇರುವ ವಿದ್ಯಾರ್ಥಿಗಳನ್ನು 'ಒಂಟೆ' ಎಂದು ನಿಂದಿಸುವಂತಿಲ್ಲ. ಸುಂದರವಾಗಿ ಕಾಣದ ಮಕ್ಕಳನ್ನು 'ಕಪ್ಪು' ವರ್ಣದ ಪದಗಳನ್ನು ಬಳಸಿ ಕೀಳಾಗಿ ನೋಡುವಂತಿಲ್ಲ. ಅಲ್ಲದೆ 'ಮಂದ ಬುದ್ಧಿ' ಎಂಬ ಪದಗಳನ್ನೂ ಬಳಸುವಂತಿಲ್ಲ ಎಂದು ಶಿಕ್ಷಣ ಇಲಾಖೆ ಮಾರ್ಗಸೂಚಿಯಲ್ಲಿ ತಿಳಿಸಿದೆ.

ಶಿಕ್ಷಕರು ತಮ್ಮ ಮಕ್ಕಳನ್ನು ವಿವಿಧ ಅಪಮಾನಕರ ಪದಗಳನ್ನು ಬಳಸಿ ನಿಂದಿಸುತ್ತಿದ್ದ ಕುರಿತು, ಬಿಹಾರದ ವಿವಿಧ ಸರ್ಕಾರಿ ಶಾಲೆಗಳ ಪ್ರಾಂಶುಪಾಲರಿಗೆ ಪೋಷಕರು ಹಲವು ದೂರುಗಳನ್ನು ಸಲ್ಲಿಸಿದ್ದರು. ಆದರೆ, ಪ್ರಾಂಶುಪಾಲರು ಇವುಗಳನ್ನು ನಿರ್ಲಕ್ಷಿಸಿದ್ದ ಕಾರಣ, ಪೋಷಕರ ಆಕ್ರೋಶ ತೀವ್ರಗೊಂಡಿತ್ತು.

ವಿಷಯದ ಗಾಂಭೀರ್ಯ ಅರಿತ ಶಿಕ್ಷಣ ಇಲಾಖೆಯು ಈ ಕುರಿತು ಮಾರ್ಗಸೂಚಿ ಪ್ರಕಟಿಸಿದೆ. ಅಲ್ಲದೆ ವಿದ್ಯಾರ್ಥಿಗಳ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸುವ ಶಿಕ್ಷಕರನ್ನು ಗುರುತಿಸಿ, ಅವುಗಳನ್ನು ಬಳಸದಂತೆ ಎಚ್ಚರಿಕೆ ನೀಡಬೇಕು ಮತ್ತು ಶಾಲಾ ಅವರಣದಲ್ಲಿ ಆರೋಗ್ಯಕರ ವಾತಾವರಣ ಇರುವಂತೆ ನೋಡಿಕೊಳ್ಳಬೇಕು ಎಂದು ಸರ್ಕಾರಿ ಶಾಲೆಗಳ ಪ್ರಾಂಶುಪಾಲರಿಗೆ ಸರ್ಕಾರ ಸೂಚನೆ ನೀಡಿದೆ.

ಶಾಲೆಗಳಲ್ಲಿ ನಡೆಯುವ ಪೋಷಕರು ಮತ್ತು ಶಿಕ್ಷಕರ ಸಭೆಯಲ್ಲಿ ಹೇಗೆ ಶಿಕ್ಷಕರು ಮಕ್ಕಳ ಮೌಲ್ಯಮಾಪನ ಮಾಡುತ್ತಾರೆಯೋ ಹಾಗೆಯೇ ವಿದ್ಯಾರ್ಥಿಗಳೂ ಶಿಕ್ಷಕರ ಮೌಲ್ಯ ನಿರ್ಣಯ ಮಾಡಬೇಕು ಎಂದು ಪ್ರಾಂಶುಪಾಲರಿಗೆ ತಿಳಿಸಲಾಗಿದೆ ಎಂದು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪ್ರತಿಭಾವಂತ ವಿದ್ಯಾರ್ಥಿಗಳನ್ನಷ್ಟೇ ಅಲ್ಲದೆ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೂ ತರಗತಿಯ ನಾಯಕತ್ವ ವಹಿಸಲು ಅವಕಾಶ ಮಾಡಿಕೊಡಬೇಕು. ಇದರಿಂದ ಅವರಲ್ಲೂ ನಾಯಕತ್ವದ ಗುಣಗಳು ಬೆಳೆಯುತ್ತವೆ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ 01-10-2024

# ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಬಾಲಕಿಯರ ಸಾವು

ಜಗಳೂರು (ದಾವಣಗೆರೆ ವರದಿ): ತಾಲ್ಲೂಕಿನ ಅಸಗೋಡು ವಡ್ಡರಹಟ್ಟಿ ಗ್ರಾಮದಲ್ಲಿ ಸೋಮವಾರ ಜಮೀನಿನಲ್ಲಿ ಆಟವಾಡುತ್ತಿದ್ದ ಇಬ್ಬರು ಬಾಲಕಿಯರು ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದು, ಮತ್ತೊಬ್ಬ ಬಾಲಕಿಯನ್ನು ರಕ್ಷಿಸಲಾಗಿದೆ.

ಗ್ರಾಮದ ಕೂಲಿ ಕಾರ್ಮಿಕರಾದ ತಿಮ್ಮಪ್ಪ ಅವರ ಪುತ್ರಿ ತನುಜಾ (11), ರಾಮಚಂದ್ರಪ್ಪ ಅವರ ಪುತ್ರಿ ಗಂಗೋತ್ರಿ (11) ಮೃತಪಟ್ಟವರು. ಮತ್ತೊಬ್ಬ ಬಾಲಕಿ ಖುಷಿ ನೀರಲ್ಲಿ ಮುಳುಗುತ್ತಿದ್ದಾಗ ಗ್ರಾಮಸ್ಥರು ರಕ್ಷಿಸಿದ್ದಾರೆ.

ಶಾಲೆಯಿಂದ ಮನೆಗೆ ಮರಳಿದ್ದ ಈ ಬಾಲಕಿಯರು ಸಮೀಪದಲ್ಲೇ ಇದ್ದ ಜಮೀನೊಂದರಲ್ಲಿನ ಕೃಷಿ ಹೊಂಡದಲ್ಲಿ ಆಟವಾಡಲು ತೆರಳಿದ್ದರು. ಕೃಷಿ ಹೊಂಡ ಭರ್ತಿಯಾಗಿತ್ತು. ಕೃಷಿ ಹೊಂಡದ ಮೇಲೆ ಕುಳಿತು ಆಟ ಆಡುತ್ತಿದ್ದಾಗ ಕಾಲು ಜಾರಿ ಮೂವರೂ ನೀರಲ್ಲಿ ಬಿದ್ದಿದ್ದಾರೆ.

ಮಕ್ಕಳು ಕಿರುಚಿದಾಗ ಕೆರೆಯತ್ತ ಧಾವಿಸಿದ ಗ್ರಾಮಸ್ಥರು ಒಬ್ಬಳನ್ನು ಮಾತ್ರ ರಕ್ಷಿಸಿದ್ದಾರೆ. ಅಷ್ಟು ಹೊತ್ತಿಗಾಗಲೇ ಇಬ್ಬರು ಬಾಲಕಿಯರು ನೀರಿನಲ್ಲಿ ಮುಳುಗಿದ್ದರು. ಪಾಲಕರು ಹೊಟ್ಟೆಪಾಡಿಗಾಗಿ ಗುಳೆ ಹೋಗಿದ್ದರಿಂದ ಈ ಬಾಲಕಿಯರು ಸಂಬಂಧಿಕರ ಮನೆಯಲ್ಲಿ ಇದ್ದರು.

# ಪೋಕ್ಸೊ ಪ್ರಕರಣ: ಮುಖ್ಯ ಶಿಕ್ಷಕಿಗೂ ಶಿಕ್ಷೆ

ಪ್ರಜಾವಾಣಿ 28-09-2024

ಒಂದು ವರ್ಷದ ಹಿಂದೆ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಪೋಕ್ಸೊ ಪ್ರಕರಣದಲ್ಲಿ ಮುಖ್ಯ ಅಪರಾಧಿಗೆ ನೆರವಾದ ಮುಖ್ಯೋಪಧ್ಯಾಯಿನಿಗೂ ಇಲ್ಲಿನ ನ್ಯಾಯಾಲಯವು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಕಳೆದ ವರ್ಷದ ಜನವರಿ 24ರಂದು ಬಾಲಕಿ ಮೇಲೆ ಬೆಳಗಾವಿ ಜಿಲ್ಲೆ ಮುತವಾಡದ ಶಶಿಧರನಾಯ್ಕ ಸಂಗನಾಯಕರ್ ಎಂಬಾತ ಲೈಂಗಿಕ ಕಿರುಕುಳ ನೀಡಿದ ಕುರಿತು ಕೊಪ್ಪಳ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಆಂಜನೇಯ ಡಿ.ಎಸ್. ಅವರು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ. ಆದ್ದರಿಂದ ನ್ಯಾಯಾಲಯವು ಅಪರಾಧಿ ಶಶಿಧರನಾಯ್ಕನಿಗೆ ಮೂರು ವರ್ಷ ಸಾದಾ ಶಿಕ್ಷೆ, ₹10 ಸಾವಿರ ದಂಡ, ಮುಖ್ಯ ಶಿಕ್ಷಕಿ ಬಸಮ್ಮ ರೆಡ್ಡಿಗೆ ಆರು ತಿಂಗಳು ಸಾದಾ ಶಿಕ್ಷೆ ಮತ್ತು ₹50 ಸಾವಿರ ದಂಡ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ವಿಶೇಷ ಸರ್ಕಾರಿ ಅಭಿಯೋಜಕಿ ಗೌರಮ್ಮ ದೇಸಾಯಿ ಅಭಿಯೋಜನಾ ಪರವಾಗಿ ವಾದ ಮಂಡಿಸಿದ್ದರು.

# ನೀತಿ ಯಾಕೆ ಬೇಕು?

- ಮೂಲಭೂತ ಅವಶ್ಯಕತೆಗಳ ಕೊರತೆ
- ಅಸಮರ್ಥ ಕಾನೂನು
- ಅಪಾಯಕಾರಿ ಸನ್ನಿವೇಶಗಳು
- ಸಾರ್ವಜನಿಕರ ಹಿತದೃಷ್ಟಿಯಿಂದ
- ತಾರತಮ್ಯ
- ಅರಾಜಕೀಯ

# ಶಾಲಾ ಕೊಠಡಿ ಗೋಡೆ ಕುಸಿದು ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ



ವಿಶ್ರುತ್ ಬಳಗಲಿ

ಹುಬ್ಬಳ್ಳಿ: ತಾಲ್ಲೂಕಿನ ಕಿರೇಸೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಿರ್ಮಾಣ ಹಂತ ದಲ್ಲಿರುವ ಕೊಠಡಿಯ ಗೋಡೆ ಶುಕ್ರವಾರ ಕುಸಿದು ಮೂರನೇ ತರಗತಿ ವಿದ್ಯಾರ್ಥಿ ವಿಶ್ರುತ್ ಪ್ರಕಾಶ ಬಳಗಲಿ (9) ಮೃತಪಟ್ಟಿದ್ದಾನೆ. ಇನ್ನೊಬ್ಬ ವಿದ್ಯಾರ್ಥಿ ಪ್ರಜ್ವಲ್ ನಾಗಾವಿಗೆ ಗಂಭೀರ ಗಾಯಗಳಾಗಿವೆ.

ನಿರ್ಮಾಣ ಹಂತದ ಕಟ್ಟಡದ ಆವರಣ ದಲ್ಲಿ ಮಕ್ಕಳು ಆಟವಾಡುತ್ತಿದ್ದ ವೇಳೆ ಆಸರೆಗೆ ಇದ್ದ ಕಟ್ಟಿಗೆ ಕಂಬವು ಸರಿದ ಕೂಡಲೇ ಗೋಡೆ ಕುಸಿದಿದೆ. ವಿಶ್ರುತ್ ತಲೆ ಮೇಲೆ ಇಟ್ಟಿಗೆಗಳು ಬಿದ್ದು, ರಕ್ತಸ್ರಾವವಾಗಿದೆ. ಆತನಿಗೆ ಸ್ಥಳೀಯ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಕೊಡಿಸಿ, ಕಿಮ್ಸ್‌ಗೆ ಕರೆದೊಯ್ದುಲಾಯಿತು. ಆದರೆ ಪ್ರಯೋಜನ ವಾಗಲಿಲ್ಲ' ಎಂದು ಗ್ರಾಮೀಣ ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ಗೋಡೆ ಕುಸಿಯಲು ಕಳಪೆ ಕಾಮಗಾರಿಯೇ ಕಾರಣ. ವಿಶ್ರುತ್ ಕುಟುಂಬಕ್ಕೆ ₹25 ಲಕ್ಷ ಪರಿಹಾರ ಕೊಡಬೇಕು. ಅಲ್ಲಿಯವರೆಗೆ ಶವವನ್ನು ಒಯ್ಯುವುದಿಲ್ಲ' ಎಂದು ಗ್ರಾಮಸ್ಥರು ಕಿಮ್ಸ್ ಶವಾಗಾರದ ಎದುರು ಪ್ರತಿಭಟನೆ ನಡೆಸಿದರು.

ಪರಿಹಾರದ ಕುರಿತು ಅಧಿಕಾರಿಗಳು ಭರವಸೆ ನೀಡಿದ ಬಳಿಕ ಗ್ರಾಮಸ್ಥರು ಪ್ರತಿಭಟನೆ ಹಿಂಪಡೆದರು.

'ಕಾಮಗಾರಿ ಗುಣಮಟ್ಟದ ಬಗ್ಗೆ ಎಂಜಿನಿಯರ್ ಕಡೆಯಿಂದ ಪರೀಕ್ಷಿಸಿ, ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎ.ಎಸ್. ಕೆಳದಿಮಠ ಹೇಳಿದರು.

# ಲೈಂಗಿಕ ಕಿರುಕುಳ ಶಾಲಾ ಮುಖ್ಯಸ್ಥನ ಬಂಧನ

ಪ್ರಜಾವಾಣಿ ವಾರ್ತೆ

ಸಾಗರ: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಸಂಬಂಧ ಇಲ್ಲಿನ ವನಶ್ರೀ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಎಚ್.ಪಿ. ಮಂಜಪ್ಪ (ವನಶ್ರೀ ಮಂಜಪ್ಪ) ಅವರನ್ನು ಪೊಲೀಸರು ಪೋಕ್ಸೊ ಪ್ರಕರಣದಡಿ ಭಾನುವಾರ ಬಂಧಿಸಿದ್ದಾರೆ.

ವನಶ್ರೀ ವಸತಿ ವಿದ್ಯಾಲಯದಲ್ಲಿ ವಿದ್ಯಾರ್ಥಿನಿಯೊಬ್ಬಳು ಜೂನ್ 8ರಂದು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಳು. ತಪ್ಪಿತಸ್ಥರನ್ನು ಬಂಧಿಸುವಂತೆ ಒತ್ತಾಯಿಸಿ ಬಾಲಕಿಯ ಪಾಲಕರು ಹಾಗೂ ಸಾರ್ವಜನಿಕರು ಶನಿವಾರ ವಸತಿ ಶಾಲೆಯ ಎದುರು ಪ್ರತಿಭಟನೆ ನಡೆಸಿದ್ದರು.

'ಮಂಜಪ್ಪ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಇದೇ ಸಂದರ್ಭ ಕೆಲವು ವಿದ್ಯಾರ್ಥಿನಿಯರು ಆರೋಪಿಸಿದ್ದರು. ಹೀಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರ ಸಮಕ್ಷಮ ದೂರು ದಾಖಲಿಸಿಕೊಂಡ ಪೊಲೀಸರು, ಶನಿವಾರವೇ ಮಂಜಪ್ಪ ಅವರನ್ನು ವಶಕ್ಕೆ ಪಡೆದಿದ್ದರು.

ಶನಿವಾರ ತಡರಾತ್ರಿ ಮಂಜಪ್ಪ ಮೇಲೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಜಾತಿ ನಿಂದನೆ ಆರೋಪದಡಿಯೂ ಪ್ರಕರಣ ದಾಖಲಾಗಿದೆ. ಭಾನುವಾರ ಅವರನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಶಿವಮೊಗ್ಗದ ಪೋಕ್ಸೊ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

# ವಾಲಿಬಾಲ್ ಆಡುತ್ತಿದ್ದ ವೇಳೆ ಚರಂಡಿಗೆ ಬಿದ್ದು ವಿದ್ಯಾರ್ಥಿ ಸಾವು

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಜವಳಗೇರಾ ಗ್ರಾಮದ ಕೊಪ್ಪಳ ಕ್ಯಾಂಪ್‌ನ ಬಳಿಯಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆವರಣದಲ್ಲಿ ಮಂಗಳವಾರ ವಾಲಿಬಾಲ್ ಆಡುತ್ತಿದ್ದ ವೇಳೆ ಕಾಲು ಜಾರಿ ಚರಂಡಿಯಲ್ಲಿ ಬಿದ್ದು, ಶಾಲೆಯ 7ನೇ ತರಗತಿ ವಿದ್ಯಾರ್ಥಿ ಹನುಮಂತ ನಾರಾಯಣಸ್ವಾಮಿ (13) ಮೃತಪಟ್ಟಿದ್ದಾನೆ. ಆತ ಧುಮತಿ ಗ್ರಾಮದ ನಿವಾಸಿಯಾಗಿದ್ದ.

'ಚರಂಡಿಯಲ್ಲಿ ಬಿದ್ದ ವೇಳೆ ಹನುಮಂತ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ತಕ್ಷಣವೇ ಆತನನ್ನು ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ಆದರೆ, ಪ್ರಯೋಜನವಾಗಲಿಲ್ಲ' ಎಂದು ಬಳಗಾನೂರು ಠಾಣೆಯ ಪೊಲೀಸರು ತಿಳಿಸಿದ್ದಾರೆ.

**ಪ್ರಜಾವಾಣಿ**
**02-02-2023**

# ವಿದ್ಯುತ್ ಸ್ಪರ್ಶ: ಬಾಲಕ ಸಾವು



ಯಮನೂರಪ್ಪ

ಕುಷ್ಟಗಿ: ವಿದ್ಯುತ್ ಸ್ಪರ್ಶಿಸಿ ಬಾಲಕನೊಬ್ಬ ಮೃತಪಟ್ಟಿರುವ ಘಟನೆ ಪಟ್ಟಣದ ಕೃಷ್ಣಗಿರಿ ಕಾಲೊನಿಯಲ್ಲಿ ಮಂಗಳವಾರ ನಡೆದಿದೆ.

ಯಮನೂರಪ್ಪ ಹನುಮಂತಪ್ಪ ಸಂಗಟಿ (15) ಮೃತ ಬಾಲಕ.

ಇಲ್ಲಿನ ಶಿವು ಪೇಪರ್ ಪ್ಲೇಟ್ ಮೇಕರ್ಸ್ ಘಟಕದಲ್ಲಿ ಈ ಬಾಲಕ ಕೆಲಸ ಮಾಡುತ್ತಿದ್ದ. ಯಂತ್ರಕ್ಕೆ ಅಳವಡಿಸಿದ ವಿದ್ಯುತ್ ಪ್ರವಹಿಸುತ್ತಿದ್ದ ವೈರ್ ತಾಗಿ ಅಸ್ವಸ್ಥಗೊಂಡಿದ್ದ. ಅಲ್ಲಿಯೇ ಇದ್ದ ಆತನ ಸಹೋದರ ಕೂಡಲೇ ಆತನನ್ನು ಕರೆದೊಯ್ದು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದ. ಆದರೆ ಬಾಲಕ ಮೃತಪಟ್ಟಿದ್ದನ್ನು ವೈದ್ಯರು ದೃಢಪಡಿಸಿದರು.

ಕೆಲಸದ ವೇಳೆ ಮಾಲೀಕರು ಬಾಲಕನಿಗೆ ಯಾವುದೇ ಜೀವರಕ್ಷಕ ಸಲಕರಣೆ ಒದಗಿಸಿರಲಿಲ್ಲ ಎಂದು ಬಾಲಕನ ದೊಡ್ಡಪ್ಪ ದುರಗಪ್ಪ ಸಂಗಟಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಬಾಲಕ ಕೆಲ ದಿನಗಳಿಂದ ಅಕ್ಕ, ಅಣ್ಣನೊಂದಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದನು.

# ವಿದ್ಯಾರ್ಥಿನಿಯರೊಂದಿಗೆ ಅಸಭ್ಯ ವರ್ತನೆ: ವಿಸ್ತರಣಾಧಿಕಾರಿ ಅಮಾನತು

ಮಡಿಕೇರಿ, ಎ. 9: ವಿದ್ಯಾರ್ಥಿ ನಿಲಯದ ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪದಡಿ ತಾಲೂಕು ಹಿಂದುಳಿದ ವರ್ಗಗಳ ಇಲಾಖೆಯ ವಿಸ್ತರಣಾಧಿಕಾರಿಯನ್ನುಅಮಾನತು ಮಾಡಲಾಗಿದೆ.

ಪೊನ್ನಂಪೇಟೆ ವಿದ್ಯಾರ್ಥಿ ನಿಲಯದ ಉಸ್ತುವಾರಿ ವಹಿಸಿ ಕೊಂಡಿದ್ದಎಸ್. ಟಿ. ಮಲ್ಲಿಕಾರ್ಜುನ ಅಮಾನತುಗೊಂಡಿರುವ ಅಧಿಕಾರಿ.

ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಆಗಾಗ್ಗೆ ಭೇಟಿ ನೀಡಿ, ನಿಲಯದ ಶೌಚಾಲಯಗಳನ್ನು ಬಳಸುವುದಲ್ಲದೆ, ವಿದ್ಯಾರ್ಥಿನಿಯರು ಮಲಗಿರುವ ವೇಳೆ ದಿಢೀರಾಗಿ ಕೋಣೆಗೆ ಭೇಟಿ ನೀಡುತ್ತಿದ್ದರು. ವಿದ್ಯಾರ್ಥಿನಿಯರು ಬಟ್ಟೆ ಬದಲಾಯಿಸುವ ಬಗ್ಗೆ ಟೀಕೆ ವ್ಯಕ್ತಪಡಿಸಿ ಅಸಭ್ಯ ಹಾಗೂ ಅನುಚಿತವಾಗಿ ವರ್ತಿಸುತ್ತಿದ್ದರು ಎಂದು ಆರೋಪಿಸಲಾಗಿದೆ.

ಹಿರಿಯ ಅಧಿಕಾರಿಗಳು ಮೌಖಿಕವಾಗಿ ತಾಲೂಕು ಅಧಿಕಾರಿಯಾಗಿದ್ದ ಮಲ್ಲಿಕಾರ್ಜುನ ಅವರಿಗೆ ತಿಳಿ ಹೇಳಿದರೂ ಪ್ರಯೋಜನವಾಗಿರಲಿಲ್ಲ, ವಿದ್ಯಾರ್ಥಿನಿಯರು ಇದರಿಂದ ನೊಂದು ತಮ್ಮ ನೋವನ್ನು ಸ್ಥಳೀಯ ಪೊನ್ನಂಪೇಟೆ ಜಿಲ್ಲಾ ಪಂಚಾಯಿತಿ ಸದಸ್ಯೆ ಶ್ರೀಜಾ ಸಾಜಿ ಅಚ್ಚುತ್ತನ್ ಬಳಿ ತೋಡಿಕೊಂಡಿದ್ದರು. ಅಲ್ಲದೆ ವಿದ್ಯಾರ್ಥಿನಿಯರು ಲಿಖಿತವಾಗಿ ಪತ್ರ ನೀಡಿದ್ದರು.

ಅಧಿಕಾರಿಯಿಂದ ಆಗುತ್ತಿರುವ ಅನ್ಯಾಯದ ಬಗ್ಗೆ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಆಯುಕ್ತರಿಗೆ ಪತ್ರ ಬರೆದು ಮಾಹಿತಿ ರವಾನಿಸಿದರು.

ಅಧಿಕಾರಿಗಳ ವರದಿಯ ಹಿನ್ನೆಲೆಯಲ್ಲಿ ಆಯುಕ್ತರು ಕರ್ತವ್ಯ ನಿರ್ಲಕ್ಷ್ಯತೆ, ಬೇಜವಾಬ್ದಾರಿತನ, ನಿಲಯಗಳ ಸುಗಮ ನಿರ್ವಹಣೆಯಲ್ಲಿ ವಿಫಲತೆ, ವಿದ್ಯಾರ್ಥಿನಿಲಯದಲ್ಲಿ ಅಸಭ್ಯ ವರ್ತನೆಯ ಕಾರಣ ನೀಡಿ ಮಲ್ಲಿಕಾರ್ಜುನ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

# ಆಟವಾಡಲು ಹೋಗಿ ಹೆಣವಾದ ಬಾಲಕ!

ಕಲಬುರ್ಗಿ: ಇಲ್ಲಿನ ಸೇಡಂ ರಸ್ತೆಯ ಎನ್‌ಜಿಒ ಕಾಲೊನಿಯ ಉದ್ಯಾನಕ್ಕೆ ಆಟವಾಡಲು ಹೋಗಿದ್ದ ಬಾಲಕ, ಹೈಮಾಸ್ಟ್ ದೀಪದ ಕಂಬದ ಕೆಳಭಾಗದಲ್ಲಿರುವ ವಿದ್ಯುತ್ ಪ್ಯಾನೆಲ್ ಬಳಿ ಇದ್ದ ವೈರ್ ಮೇಲೆ ಕೈ ಇಟ್ಟ ಪರಿಣಾಮ ವಿದ್ಯುತ್ ಪ್ರವಹಿಸಿ ಬುಧವಾರ ಸ್ಥಳದಲ್ಲೇ ಸಾವಿಗೀಡಾಗಿದ್ದಾನೆ.

ಮುಗಳನಾಗಾಂವ ಗ್ರಾಮದ ಕೂಲಿಕಾರ್ಮಿಕ ಸುರೇಶ ಕಂಬಾರ ಹಾಗೂ ಮಹಾದೇವಿ ದಂಪತಿಯ ಪುತ್ರ ಸಿದ್ದು ಕಂಬಾರ (7) ಮೃತಪಟ್ಟ ಬಾಲಕ.

ವಾರದಿಂದ ನಗರದಲ್ಲಿ ಮಳೆ ಸುರಿಯುತ್ತಿದ್ದು, ವಿದ್ಯುತ್ ವೈರ್‌ಗಳಲ್ಲಿ ದೋಷ ಕಾಣಿಸಿಕೊಂಡು ವಿದ್ಯುತ್ ಶಾಕ್ ಹೊಡೆಯುತ್ತಿದೆ. ಹೈಮಾಸ್ಟ್ ಕಂಬದ ಬಳಿ ಒಬ್ಬನೇ ಆಟವಾಡಲು ಹೋದ ಬಾಲಕ ಕಂಬದ ಕೆಳಭಾಗದಲ್ಲಿ ಅಳವಡಿಸಲಾದ ವಿದ್ಯುತ್ ಬಾಕ್ಸ್ ಬಳಿ ಕೈ ಇಟ್ಟಿದ್ದರಿಂದ ವಿದ್ಯುತ್ ಶಾಕ್ ಹೊಡೆದಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

'ಪಾಲಿಕೆಯ ಅಧಿಕಾರಿಗಳ ನಿರ್ಲಕ್ಷ್ಯವೇ ಬಾಲಕನ ಸಾವಿಗೆ ಕಾರಣ ಎಂದು ಸ್ಥಳೀಯರು ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿದ್ದೇವೆ' ಎಂದು ಪೊಲೀಸರು ಹೇಳಿದ್ದಾರೆ.

'ನಗರದ ಹೈಮಾಸ್ಟ್ ಕಂಬಗಳ ಬಳಿ ವೈರ್ ಪ್ಯಾನೆಲ್ ಮೇಲ್ಭಾಗದಲ್ಲಿ ಅಳವಡಿಸಬೇಕಿತ್ತು. ಎನ್‌ಜಿಒ ಕಾಲೊನಿ ಉದ್ಯಾನದಲ್ಲಿ ಕೆಳಭಾಗದಲ್ಲಿದೆ. ಉದ್ಯಾನದ ಹೈಮಾಸ್ಟ್ ವಿದ್ಯುತ್ ಕಂಬಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು' ಎಂದು ಮಹಾನಗರ ಪಾಲಿಕೆ ಆಯುಕ್ತ ಸ್ನೇಹಲ್ ಸುಧಾಕರ ಲೋಖಂಡೆ ಹೇಳಿದರು.

# ಊಟದಲ್ಲಿ ಹಲ್ಲಿ; ಮಕ್ಕಳಿಗೆ ವಾಂತಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಾಟಲದಿನ್ನಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಶುಕ್ರವಾರ ಹಲ್ಲಿ ಬಿದ್ದ ಆಹಾರವನ್ನು ಸೇವಿಸಿದ ಕಾರಣ ಐದಾರು ಜನ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದರು. ಅವರಿಗೆ ವಾಂತಿಯಾಗಿತ್ತು ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳಿಗೆ ವಾಂತಿಯಾಗುತ್ತಿದ್ದಂತೆಯೇ ತಕ್ಷಣವೇ ಎಚ್ಚೆತ್ತುಕೊಂಡು ಶಿಕ್ಷಕರು ಆಹಾರ ಪರಿಶೀಲಿಸಿದಾಗ ಅದರಲ್ಲಿ ಹಲ್ಲಿ ಬಿದ್ದಿರುವುದು ಗೊತ್ತಾಗಿದೆ. ಆದ್ದರಿಂದ ಎಲ್ಲ ಆಹಾರವನ್ನು ಚೆಲ್ಲಲಾಯಿತು. ಗುನ್ನಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಸ್ಥಳಕ್ಕೆ ಭೇಟಿ ನೀಡಿ ಚಿಕಿತ್ಸೆ ನೀಡಿದರು. ಕೆಲ ಹೊತ್ತಿನಲ್ಲಿ ವಿದ್ಯಾರ್ಥಿಗಳು ಚೇತರಿಸಿಕೊಂಡರು ಎಂದು ತಿಳಿದುಬಂದಿದೆ. ಅಡುಗೆ ಮಾಡುವವರಿಗೆ ಸ್ವಚ್ಛತೆ ಕಾಯ್ದುಕೊಳ್ಳುವಂತೆ ಎಚ್ಚರಿಕೆ ನೀಡಲಾಗಿದೆ.

## ದೇವದುರ್ಗ ಬಿಇಒ ಅಮಾನತು

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನ ಊಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹಟ್ಟಿ ಚಿನ್ನದ ಗಣಿ ಕಂಪನಿ ನೀಡಿದ ಸಿಎಸ್‌ಆರ್ ಅನುದಾನ ದುರ್ಬಳಕೆ, ಭ್ರಷ್ಟಾಚಾರ, ಕರ್ತವ್ಯ ಲೋಪ ಮತ್ತು ಸೇವಾ ನಿರ್ಲಕ್ಷ್ಯ ಮಾಡಿದ ಆರೋಪ ತನಿಖೆ ವೇಳೆ ಸಾಬೀತಾದ ಕಾರಣದಿಂದ ಕ್ಷೇತ್ರ ಶಿಕ್ಷಣಾಧಿಕಾರಿ ಸುಖದೇವ ಎಚ್. ಅವರನ್ನು ಶನಿವಾರ ಅಮಾನತು ಮಾಡಲಾಗಿದೆ.

ಶಾಲಾ ಶಿಕ್ಷಣ ಮತ್ತು ಮತ್ತು ಸಾಕ್ಷರತೆ ಇಲಾಖೆ ಅಮಾನತು ಆದೇಶ ಹೊರಡಿಸಿದೆ. ₹30 ಲಕ್ಷ ದುರುಪಯೋಗಪಡಿಸಿಕೊಂಡ ಕುರಿತು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪಟ್ಟಣದ ಕಾಂಗ್ರೆಸ್ ಮುಖಂಡ ಟಿ. ಸುರೇಶನಾಯಕ ಅವರು ದೂರು ನೀಡಿದ್ದರು.

ದೂರು ಆಧರಿಸಿ ತನಿಖೆ ಕೈಗೊಂಡು ವರದಿ ನೀಡುವಂತೆ ಕಲಬುರಗಿ ವಿಭಾಗದ ಹೆಚ್ಚುವರಿ ಆಯುಕ್ತರಿಗೆ ಸೂಚಿಸಲಾಗಿತ್ತು. ಪ್ರಾಥಮಿಕ ವಿಚಾರಣೆ ವರದಿಯಲ್ಲಿ ಹಣಕಾಸು ದುರ್ಬಳಕೆ, ಭ್ರಷ್ಟಾಚಾರ, ಕರ್ತವ್ಯ ಲೋಪ ಮತ್ತು ಸೇವಾ ನಿರ್ಲಕ್ಷ್ಯ ಸಾಬೀತಾದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ
9-12-2024

ಇದ್ದರು.

ಪ್ರಜಾವಾಣಿ
23-02-2024

## ವಿದ್ಯಾರ್ಥಿ ಶವ ಪತ್ತೆ

ಹಾಸನ: ನಗರದ ಮಾಸ್ಟರ್ಸ್ ಕಾಲೇಜಿನ ಹಾಸ್ಟೆಲ್ ಕೋಣೆಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿ ವಿಕಾಸ್ (18) ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, 'ಆತನನ್ನು ಕೊಲೆ ಮಾಡಿ ನೇಣು ಬಿಗಿದಿದ್ದಾರೆ' ಎಂದು ಸಂಬಂಧಿಕರು ಆರೋಪಿಸಿದ್ದಾರೆ.



ವಿಕಾಸ್

ಚನ್ನರಾಯಪಟ್ಟಣ ತಾಲ್ಲೂಕಿನ ಬೆಳಗುಲಿ ಗ್ರಾಮದ ಸುರೇಶ್-ಮಮತಾ ದಂಪತಿಯ ಏಕೈಕ ಪುತ್ರ ವಿಕಾಸ್, ದ್ವಿತೀಯ ಪಿಯುಸಿ ಓದುತ್ತಿದ್ದ. ಗುರುವಾರ ಬೆಳಿಗ್ಗೆ 8.30ಕ್ಕೆ ತರಗತಿಗೆ ತೆರಳಿದ್ದ ಆತ, 10 ಗಂಟೆ ವೇಳೆಗೆ ಕಾಲೇಜು ಪಕ್ಕದ ಕನ್ವೆನ್ಷನ್ ಹಾಲ್‌ನಲ್ಲಿರುವ ಹಾಸ್ಟೆಲ್ ಕೊಠಡಿಗೆ ಮರಳಿದ್ದ. ನಂತರ ಈ ಘಟನೆ ನಡೆದಿದ್ದು, 'ಆತನ ಸಾವಿಗೆ ವಾರ್ಡನ್ ಕಾರಣ' ಎಂದು ಸಂಬಂಧಿ ವಿಶ್ವನಾಥ್ ಸೇರಿ ಕೆಲವರು ಆರೋಪಿಸಿದ್ದಾರೆ

'ತನಿಖೆ ನಡೆಸಬೇಕು. ಕಾಲೇಜಿನ ಪರವಾನಗಿ ರದ್ದು ಮಾಡಬೇಕು. ಇಲ್ಲವಾದರೆ ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸುತ್ತೇವೆ' ಎಂದಿದ್ದಾರೆ.

## ವಿದ್ಯಾರ್ಥಿ ಆತ್ಮಹತ್ಯೆ

ಸಿಂಧನೂರು: ನಗರದ ಬಿಎಸ್‌ಎನ್‌ಎಲ್ ಕಚೇರಿ ಮುಂಭಾಗದ ಅಂಬೇಡ್ಕರ್ ಮೆಟ್ರಿಕ್ ನಂತರದ ವಸತಿ ನಿಲಯದಲ್ಲಿ ಗುರುವಾರ ವಿದ್ಯಾರ್ಥಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿ ಹಿರೇಹುಸೇನಪ್ಪ ದೊಡ್ಡ ಖಾಸೀಂಮಪ್ಪ (18) ಆತ್ಮಹತ್ಯೆ ಮಾಡಿಕೊಂಡವರು ಎಂದು ಪೊಲೀಸರು ತಿಳಿಸಿದ್ದಾರೆ.

ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಶಹರ ಪೊಲೀಸ್ ಠಾಣೆಯ ಪಿಎಸ್‌ಐ ಬಸವರಾಜ ತನಿಖೆ ಕೈಗೊಂಡಿದ್ದಾರೆ.

# 'ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣ ಸಿಬಿಐ ತನಿಖೆಗೆ ವಹಿಸಿ'

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯ ಸಿಂಧನೂರು ನಗರ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ಪಿಯುಸಿ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಶಿವರಾಜ ಜಾನೇಕಲ್ ಒತ್ತಾಯಿಸಿದರು.

ವಿದ್ಯಾರ್ಥಿ ಹುಸೇನಪ್ಪ ಸಾವಿಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳೇ ಕಾರಣ. ಸೌಲಭ್ಯ ಕೇಳಿದ್ದಕ್ಕೆ ಬೆದರಿಸಿದ್ದಾರೆ ಎಂಬ ಆರೋಪವಿದೆ. ಇದು ಆತ್ಮಹತ್ಯೆ ಅಲ್ಲ, ಕೊಲೆ ಎಂಬ ಅನುಮಾನ ಉಂಟಾಗಿದೆ ಎಂದು ಶನಿವಾರ ಮಾಧ್ಯಮಗೋಷ್ಠಿಯಲ್ಲಿ ಆರೋಪಿಸಿದರು.

ಸಹಾಯಕ ನಿರ್ದೇಶಕಿ ಮತ್ತು ವಸತಿ ನಿಲಯದ ವಾರ್ಡನ್ ಅವರೇ ಇದಕ್ಕೆ ಹೊಣೆ. ಇಬ್ಬರು ಅಧಿಕಾರಿಗಳು ಸರ್ಕಾರದ ಸೌಲಭ್ಯಗಳನ್ನು ಸರಿಯಾಗಿ ತಲುಪಿಸದೇ ಅವ್ಯವಹಾರ ನಡೆಸುತ್ತಿದ್ದಾರೆ ಎಂದು ದೂರಿದರು.

ಕೂಡಲೇ ತಪ್ಪಿತಸ್ಥ ಅಧಿಕಾರಿಗಳನ್ನು ಬಂಧಿಸಬೇಕು ಹಾಗೂ ವಿದ್ಯಾರ್ಥಿಯ ಕುಟುಂಬಕ್ಕೆ ಸರ್ಕಾರ ₹50 ಲಕ್ಷ ಪರಿಹಾರ ನೀಡಬೇಕು. 5 ಎಕರೆ ಜಮೀನನ್ನು ನೀಡಬೇಕು ಇಲ್ಲವಾದಲ್ಲಿ ಸಂಘಟನೆಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪದಾಧಿಕಾರಿಗಳಾದ ಬಿ.ಕೆ. ಬಾಬು, ಎಂ.ಮಾರೆಪ್ಪ, ತಮ್ಮಣ್ಣ ಇದ್ದರು.

ಕನ್ನಡಪ್ರಭ

# ಬಾಲಕಿಗೆ ಲೈಂಗಿಕ ಕಿರುಕುಳ ಶಿಕ್ಷಕಗೆ ಜೈಲುಶಿಕ್ಷೆ, ದಂಡ

• **ಕನ್ನಡಪ್ರಭ ವಾರ್ತೆ** ಕೊಪ್ಪಳ

ಶಾಲಾ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಶಾಲಾ ಶಿಕ್ಷಕನ ಆರೋಪ ಸಾಬೀತಾಗಿದ್ದು, ಅಪರಾಧಿಗೆ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಧೀಶರ (ಪೋಕ್ಸೊ) ನ್ಯಾಯಾಲಯ ದಂಡಸಹಿತ ಜೈಲು ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ.

ನಾನು ಪಾಟೀಲ ಶಿಕ್ಷೆಗೊಳಗಾದ ಶಾಲಾ ಸಂಗೀತ ಶಿಕ್ಷಕ. ಬಾಲಕಿಗೆ, ತನಗೆ ಕಣ್ಣು ಕಾಣುವುದಿಲ್ಲ. ತನ್ನ ಕೈ ಹಿಡಿದು ಶಾಲೆಯ ಮೇಲಿನ ಕೋಣೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದರಿಂದ ಬಾಲಕಿ ಕೈಹಿಡಿದು ಶಾಲೆಯ ಮೇಲಿನ ಕೋಣೆಗೆ ಕರೆದುಕೊಂಡು ಹೋದಾಗ ಆಕೆಗೆ ಲೈಂಗಿಕ ಕಿರುಕುಳ ನೀಡುವ ಉದ್ದೇಶದಿಂದ ಆಕೆಯ ಎದೆ, ಮೈ, ಕೈ ಸ್ಪರ್ಶಿಸಿದ್ದ.

ಉದ್ದೇಶ ಪೂರ್ವಕವಾಗಿ ಲೈಂಗಿಕ ಕಿರುಕುಳ ನೀಡಿದ ಆರೋಪವು ತನಿಖೆಯಲ್ಲಿ ಸಾಬೀತಾಗಿದ್ದರಿಂದ ಕೊಪ್ಪಳ ಪೊಲೀಸ್ ಉಪಾಧೀಕ್ಷಕ ಶ್ರೀಕಾಂತ ಬಿ. ಕಟ್ಟಿಮನಿ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದಲ್ಲಿ ಆರೋಪ ಸಾಬೀತಾಗಿದೆ. ಸಂಗೀತ ಶಿಕ್ಷಕಗೆ ಮೂರು ವರ್ಷ ಜೈಲುಶಿಕ್ಷೆ, ₹15,000 ದಂಡ ವಿಧಿಸಿ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಧೀಶರು ಕುಮಾರ ಡಿ.ಕೆ. ತೀರ್ಪು ನೀಡಿದ್ದಾರೆ.

ಸರ್ಕಾರದ ಪರವಾಗಿ ಪ್ರಧಾನ ಸರ್ಕಾರಿ ಅಭಿಯೋಜಕ ಬಂಡಿ ಅಪರ್ಣಾ ಮನೋಹರ ಸಮರ್ಥವಾಗಿ ವಾದ ಮಂಡಿಸಿದ್ದರು.

KOPPAL Edition
Nov 4, 2023 Page No. 01
Powered by : eReleGo.com

2
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » GANGAVATI
ಶುಕ್ರವಾರ 8 ಫೆಬ್ರವರಿ 2019
8 FEBRUARY 2019
ಕೊಪ್ಪಳ
ಲೋಕಲ್ ಎಕ್ಸ್‌ಪ್ರೆಸ್

## ಲೈಂಗಿಕ ಕಿರುಕುಳ, ಶಿಕ್ಷಕ ಅಮಾನತು

**ಕೊಪ್ಪಳ:** ಅಳವಂಡಿಯ ಶಾಲೆಯೊಂದರ ಶಿಕ್ಷಕನೊಬ್ಬ 7ನೇ ತರಗತಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಸಂಬಂಧ ವಿದ್ಯಾರ್ಥಿನಿ ಹೇಳಿಕೆ ಆಧರಿಸಿ ಬಿಇಒ ಶೋಭಾ ಬಾಗೇವಾಡಿ ಅಮಾನತುಗೊಳಿಸಿ ಬುಧವಾರ ಆದೇಶಿಸಿದ್ದಾರೆ. ಶಿಕ್ಷಕ ಇಬ್ರಾಹಿಂ ಅಮಾನತುಗೊಂಡಿರುವಾತ. ಕಳೆದ ಕೆಲ ದಿನದಿಂದ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದಲ್ಲದೆ, ಪ್ರೀತಿಸುವಂತೆ ಪೀಡಿಸುತ್ತಿದ್ದ ಎಂದು ಆರೋಪಿಸಲಾಗಿತ್ತು. ಶಿಕ್ಷಕನ ವರ್ತನೆಗೆ ಬೇಸತ್ತ ವಿದ್ಯಾರ್ಥಿನಿ ಕೆಲ ದಿನದಿಂದ ಶಾಲೆಗೆ ಬರುವುದನ್ನೆ ನಿಲ್ಲಿಸಿದ್ದಳು. ಶಾಲಾ ಮುಖ್ಯಶಿಕ್ಷಕ ವಿದ್ಯಾರ್ಥಿನಿ ಶಾಲೆಗೆ ಬಾರದೇ ಇರುವುದನ್ನು ಗಮನಿಸಿ ವಿಚಾರಿಸಿದ ವೇಳೆ ಘಟನೆ ಬೆಳಕಿಗೆ ಬಂದಿದೆ. ಬಳಿಕ ಶಿಕ್ಷಕ ಬಿಇಒ ಗಮನಕ್ಕೆ ತಂದಿದ್ದಾರೆ. ಬಿಇಒ ಶೋಭಾ ಬಾಗೇವಾಡಿ ಶಾಲೆಗೆ ಭೇಟಿ ನೀಡಿ ಪಾಲಕರು ಹಾಗೂ ಎಸ್‌ಡಿಎಂಸಿ ಸಭೆ ನಡೆಸಿ, ವಿದ್ಯಾರ್ಥಿನಿಯಿಂದ ಮಾಹಿತಿ ಪಡೆದು ಶಿಕ್ಷಕನನ್ನು ಅಮಾನತುಗೊಳಿಸಿದ್ದಾರೆ. ಅಳವಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

» ಬಿಇಒ ಶೋಭಾ ಬಾಗೇವಾಡಿ ಆದೇಶ

# ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಶಿಕ್ಷಕನಿಗೆ 10 ವರ್ಷ ಜೈಲು

- ಜಿಲ್ಲೆಯ ಯಲಬುರ್ಗಾ ತಾಲೂಕಿನ ಶಿಕ್ಷಕ ಅಂದಪ್ಪ ನಿಂಗೋಜಿ ಬಾಲಕಿಯನ್ನು ಆಗಾಗ ಸ್ಟಾಫ್ ರೂಮ್‌ಗೆ ಕರೆದು ಲೈಂಗಿಕ ಕಿರುಕುಳ ನೀಡುತ್ತಿದ್ದ.
- ಪ್ರಕರಣದಲ್ಲಿ ಆರೋಪಿತನ ಮೇಲಿನ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ 10 ವರ್ಷ ಜೈಲು ಶಿಕ್ಷೆ ಹಾಗೂ ₹ 30,000 ದಂಡ ವಿಧಿಸಿದ್ದಾರೆ.

• **ಕನ್ನಡಪ್ರಭ ವಾರ್ತೆ** ಕೊಪ್ಪಳ

ತನ್ನ ಶಾಲೆಯ ವಿದ್ಯಾರ್ಥಿನಿ (ಅಪ್ರಾಪ್ತ ಬಾಲಕಿ)ಯ ಮೇಲೆಯೇ ಅತ್ಯಾಚಾರವೆಸಗಿ ಲೈಂಗಿಕ ಕಿರುಕುಳ ನೀಡಿದ್ದ ಶಿಕ್ಷಕರೋರ್ವನ ಮೇಲಿನ ಆರೋಪ ಸಾಬೀತಾಗಿದ್ದು ಶಿಕ್ಷಕ ಅಂದಪ್ಪ ನಿಂಗೋಜಿಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಧೀಶರಾದ (ಪೋಕ್ಸೋ) ಶಂಕರ ಎಂ. ಜಾಲವಾದಿ ತೀರ್ಪು ನೀಡಿದ್ದಾರೆ.

ಜಿಲ್ಲೆಯ ಯಲಬುರ್ಗಾ ತಾಲೂಕಿನ ಶಿಕ್ಷಕ ಅಂದಪ್ಪ ನಿಂಗೋಜಿ ಬಾಲಕಿಯನ್ನು ಆಗಾಗ ಸ್ಟಾಫ್ ರೂಮ್‌ಗೆ ಕರೆದು ಲೈಂಗಿಕ ಕಿರುಕುಳ ನೀಡುತ್ತಿದ್ದ. 2015ರ ಜನವರಿ ತಿಂಗಳಲ್ಲಿ ಬಾಲಕಿ ತನ್ನ ಮನೆಯಲ್ಲಿದ್ದಾಗ ಆರೋಪಿ ತನ್ನ ಸ್ಕೂಟಿ ಮೇಲೆ ಕೂಡಿಸಿಕೊಂಡು ಯಲಬುರ್ಗಾದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ ಲೈಂಗಿಕ ಕ್ರಿಯೆ ನಡೆಸಿದ್ದ. ಅಲ್ಲದೇ 2015ರ ಅ. 12ರಂದು ವಿದ್ಯಾರ್ಥಿನಿ ಮನೆಯ ಹತ್ತಿರ ಬಂದು ಪುನಃ ಸ್ಕೂಟಿ ಮೇಲೆ ಮನೆಗೆ ಕರೆದುಕೊಂಡು ಹೋಗಿ ಮತ್ತೊಮ್ಮೆ ಲೈಂಗಿಕ ಕ್ರಿಯೆ ನಡೆಸಿದ್ದ. ಈ ಕುರಿತು ಆರೋಪ ತನಿಖೆಯಲ್ಲಿ ಸಾಬೀತಾಗಿದ್ದರಿಂದ ಕೊಪ್ಪಳ ಪೊಲೀಸ್ ಉಪಾಧೀಕ್ಷಕರು ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದಲ್ಲಿ ಆರೋಪಿತನ ಮೇಲಿನ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ 10 ವರ್ಷ ಜೈಲು ಶಿಕ್ಷೆ ಹಾಗೂ ₹ 30,000 ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಎಂ.ಎ. ಪಾಟೀಲ, ಕೆ. ನಾಗರಾಜ ಆಚಾರ್ ಹಾಗೂ ಟಿ. ಅಂಬಣ್ಣ ಪ್ರಕರಣ ನಡೆಸಿದ್ದಾರೆ ಎಂದು ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಬಂಡಿ ಅಪರ್ಣಾ ಎಂ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡಪ್ರಭ

# ಪೋಕ್ಸೋ ಕಾಯ್ದೆಯಡಿ ಶಿಕ್ಷಕನ ಬಂಧನ

• **ಕನ್ನಡಪ್ರಭ ವಾರ್ತೆ** ಕೊಪ್ಪಳ

ಯಲಬುರ್ಗಾ ತಾಲೂಕಿನ ಗೆದಗೇರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಶಶಿಧರ ಹಿರೇಮಠ ಅವರನ್ನು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಡಿ ಬುಧವಾರ ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಮಕ್ಕಳ ಕಲ್ಯಾಣ ಸಮಿತಿಯು ಪರಿಶೀಲಿಸಿ ಮಕ್ಕಳ ರಕ್ಷಣಾ ಘಟಕ ಮಕ್ಕಳ ರಕ್ಷಣಾ ಆಯೋಗಕ್ಕೆ ವರದಿ ನೀಡಿತ್ತು. ಬಳಿಕ ಯಲಬುರ್ಗಾ ಬಿಇಒ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಜೈಲಿಗೆ ಅಟ್ಟಿದ್ದಾರೆ. ಸ್ಥಳೀಯರ ದೂರಿನ ಆಧಾರದ ಮೇಲೆ ಮಕ್ಕಳ ಕಲ್ಯಾಣ ಸಮಿತಿ ವರದಿ ನೀಡಿತ್ತು. ಇದರ ಆಧಾರದ ಮೇಲೆ ಶಿಕ್ಷಕನನ್ನು ಅಮಾನತು ಮಾಡಿ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಮಕ್ಕಳ ರಕ್ಷಣಾ ಘಟಕ ಪರಿಶೀಲನೆ ನಡೆಸಿದಾಗ ಪ್ರಕರಣ ಗಂಭೀರವಾಗಿರುವುದು ಗೊತ್ತಾಯಿತು. ತಕ್ಷಣ ಶಿಕ್ಷಣ ಇಲಾಖೆಯ ಮೂಲಕ ಆರೋಪಿ ಶಿಕ್ಷಕ ಶಶಿಧರ ವಿರುದ್ಧ ಯಲಬುರ್ಗಾ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರಿಂದ ಬಂಧಿಸಲಾಗಿದೆ. ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

Koppal Edition
23 Nov, 2018 Page No. 1
Powered by : eReleGo.com

# ವಿದ್ಯಾರ್ಥಿನಿ ಎದೆಯ ಮೇಲೆ ಲವ್ ಸಿಂಬಲ್ ಬರೆದ ಬಿಇಒಗೆ 5 ವರ್ಷ ಜೈಲು ಶಿಕ್ಷೆ!

• **ಕನ್ನಡಪ್ರಭ ವಾರ್ತೆ** ಗದಗ

ಅಪ್ರಾಪ್ತ ವಿದ್ಯಾರ್ಥಿನಿ ಎದೆಯ ಮೇಲೆ ಲವ್ ಸಿಂಬಲ್ ಬರೆದು ತನ್ನನ್ನು ಪ್ರೀತಿಸುವಂತೆ ದುಂಬಾಲು ಬಿದ್ದಿದ್ದ (ಹಿಂದೆ ಮುಂಡರಗಿ ಬಿಇಒ ಆಗಿ ಸೇವೆ ಸಲ್ಲಿಸುತ್ತಿದ್ದ ವೇಳೆ ನಡೆದ ಘಟನೆ) ಹೂವಿನಹಡಗಲಿ ಬಿಇಒ ಶಂಕ್ರಪ್ಪ ಹಳ್ಳಿಗುಡಿ ಅವರಿಗೆ ಇಲ್ಲಿನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 5 ವರ್ಷ ಜೈಲು ಶಿಕ್ಷೆ, ₹25 ಸಾವಿರ ದಂಡ ವಿಧಿಸಿದೆ.

ಈ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಧೀಶ ರಾಜೇಶ್ವರ ಶೆಟ್ಟಿ ಅವರು ಶನಿವಾರ ಲೈಂಗಿಕ ಕಿರುಕುಳ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಈ ತೀರ್ಪು ಪ್ರಕಟಿಸಿದರು. ದಂಡ ಪಾವತಿಸಲು ವಿಫಲವಾದರೆ ಹೆಚ್ಚುವರಿ 6 ತಿಂಗಳು ಜೈಲುವಾಸ ಶಿಕ್ಷೆ ಅನುಭವಿಸಲು ಆದೇಶಿಸಿದ್ದಾರೆ.



ಕ್ಷೇತ್ರ ಶಿಕ್ಷಣಾಧಿಕಾರಿಯೊಬ್ಬ ಹೀಗೆ ವಿದ್ಯಾರ್ಥಿನಿಗೆ ಲೈಂಗಿಕ ನೀಡಿ ಜೈಲು ಶಿಕ್ಷೆಗೆ ಗುರಿಯಾಗಿರುವುದು ಗದಗ ಜಿಲ್ಲೆಯ ಶೈಕ್ಷಣಿಕ ಇತಿಹಾಸದಲ್ಲಿ ಮೊದಲ ಪ್ರಕರಣವಾಗಿದೆ.

**ತೀರ್ಪಿನ ವಿವರ:** 2020ರಲ್ಲಿ ಮುಂಡರಗಿ ಪೊಲೀಸ್ ಠಾಣೆಯಲ್ಲಿ ದಾಖಲಾದ ಪೋಕ್ಸೋ ಪ್ರಕರಣದಂತೆ, ಅಂದು ಮುಂಡರಗಿ ಬಿಇಒ ಆಗಿದ್ದ ಆರೋಪಿ ಶಂಕ್ರಪ್ಪ ಹಳ್ಳಿಗುಡಿ ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚಳಕ್ಕಾಗಿ ರೂಪಿಸಿದ್ದ ಮನೆಗೆ ಭೇಟಿ ಕಾರ್ಯಕ್ರಮದ ಭಾಗವಾಗಿ ನೊಂದ ಬಾಲಕಿ ಮನೆಗೆ ತೆರಳಿದ್ದರು. ಆಗ 'ನೀನು ನನಗೆ ತುಂಬ ಇಷ್ಟ ಆಗಿದ್ದೀಯಾ. ತುಂಬಾ ದಿನದಿಂದ ನಿನ್ನ ಮಾತನಾಡಿಸಬೇಕು ಎಂದುಕೊಂಡಿದ್ದೆ. ನೀನು ಯಾರನ್ನಾದರೂ ಮದುವೆಯಾಗು. ಆದರೆ ನನ್ನನ್ನು ಪ್ರೀತಿಸು ಎನ್ನುತ್ತ ಬಲವಂತವಾಗಿ ಬಾಲಕಿಯ ಎದೆಯ ಮೇಲೆ ಲವ್ ಸಿಂಬಾಲ್ (ಹೃದಯದ ಚಿತ್ರ) ಬಿಡಿಸಿ ನಾನೂ ಯಾವಗಲೂ ಇಲ್ಲೇ ಇರುತ್ತೇನೆ' ಎಂದು ಲೈಂಗಿಕ ಕಿರುಕುಳ ನೀಡಿದ್ದರು.

ಬಾಲಕಿ ಈ ಸಂಗತಿಯನ್ನು ತನ್ನ ಪಾಲಕರಿಗೆ ತಿಳಿಸಿದಾಗ ಅವರು ಮುಂಡರಗಿ ಠಾಣೆಗೆ ದೂರು ಸಲ್ಲಿಸಿದ್ದರು. ಪೊಲೀಸರು ಬಿಇಒ ಶಂಕ್ರಪ್ಪ ಹಳ್ಳಿಗುಡಿ ವಿರುದ್ಧ ಪೋಸ್ಕೋ ಕಾನೂನಿನಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಮಾಡಿದ್ದರು. ಮಾ. 21, 2020ರಂದು ಆರೋಪಿ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಕೆಯಾಗಿತ್ತು. ಎರಡೂವರೆ ವರ್ಷಗಳ ಕಾಲ ವಿಚಾರಣೆ ನಡೆಸಿದ ಜಿಲ್ಲಾ ನ್ಯಾಯಾಲಯ ಈಗ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಬಿಇಒ ಶಂಕ್ರಪ್ಪ ಹಳ್ಳಿಗುಡಿ ಜೈಲುಪಾಲಾಗಿದ್ದಾರೆ.

**ಪ್ರಕರಣ ಸಂಬಂಧ ಜಿಲ್ಲಾ ನ್ಯಾಯಾಲಯ ಶನಿವಾರ ಆದೇಶ ನೀಡಿದೆ. ತಪ್ಪಿತಸ್ಥರಿಗೆ ಇದೊಂದು ತಕ್ಕ ಪಾಠ. ನೊಂದವರಿಗೆ ನ್ಯಾಯ ದೊರಕಿಸಿದ ನೆಮ್ಮದಿ ಇದೆ. ತಪ್ಪು ಮಾಡುವವರಿಗೆ ಈ ತೀರ್ಪು ಒಂದು ಎಚ್ಚರಿಕೆ ಪಾಠವಾಗಿದೆ.**

• **ಅಮರೇಶ ಹಿರೇಮಠ** ಜಿಲ್ಲಾ ಸರ್ಕಾರಿ ಅಭಿಯೋಜಕರು (ಪೋಕ್ಸೋ)

ಬಕ್ರೀದ್ ಶಾಂತಿಯುತವಾಗಿ ಆಚರಿಸಿ

ಕನ್ನಡಪ್ರಭ

# ಕಲಘಟಗಿಯ ಶಾಲೇಲಿ ಮಕ್ಕಳಿಗೆ ಮನಬಂದಂತೆ ಥಳಿಸಿದ ಶಿಕ್ಷಕಿ

**ಕಲಘಟಗಿ:** ಶಿಕ್ಷಕಿಯೊಬ್ಬಳು ಮಕ್ಕಳನ್ನು ಶಾಲಾ ಕೊಠಡಿಯಲ್ಲಿ ಕೂಡಿ ಹಾಕಿ, ಮನಬಂದಂತೆ ಥಳಿಸಿರುವ ಘಟನೆ ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಜುಂಜನಬೈಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಮಧ್ಯಾಹ್ನ ಜರುಗಿದೆ. ಶಿಕ್ಷಕಿ ಸುಜಾತಾ ಸುಣಗಾರ ಎಂಬುವವರು 4ನೇ ಹಾಗೂ 5ನೇ ತರಗತಿ ಮಕ್ಕಳನ್ನು ಕೋಲಿನಿಂದ ಮನಬಂದಂತೆ ಥಳಿಸಿದ್ದಾರೆ. ವಿಷಯ ತಿಳಿದು ಘಟನಾ ಸ್ಥಳಕ್ಕೆ ಕ್ಷೇತ್ರ ಸಮನ್ವಯಾಧಿಕಾರಿ ಕುಮಾರ ಕೆ.ಎಫ್. ಹಾಗೂ ಶಿಕ್ಷಣಸಂಯೋಜಕಪುಟ್ಟಪ್ಪ ಭಜಂತ್ರಿ ಆಗಮಿಸಿ, ಮಕ್ಕಳಿಂದಹಾಗೂಗ್ರಾಮಸ್ಥರಿಂದ ಘಟನೆ ಕುರಿತು ಮಾಹಿತಿ ಪಡೆದರು. ಘಟನೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕುಮಾರ, 'ಶಿಕ್ಷಕಿ ಥಳಿಸಿರುವ ಬಗ್ಗೆ ಮಕ್ಕಳು ಮಾಹಿತಿ ನೀಡಿದ್ದಾರೆ. ಮಕ್ಕಳನ್ನು ಥಳಿಸುವುದು ಅಪರಾಧವಾಗಿದೆ. ಶಿಕ್ಷಕಿ ತಪ್ಪು ಮಾಡಿರುವುದು ಸಾಬೀತಾಗಿದೆ. ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ಶಾಲೆಗೆ ಬರದಂತೆ ಶಿಕ್ಷಕಿಗೆ ಈಗಾಗಲೇ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

BENGALURU Edition
Feb 21, 2024 Page No. 08
Powered by : eReleGo.com

ಕನ್ನಡಪ್ರಭ

# ಮಕ್ಕಳ ಸ್ನಾನದೃಶ್ಯ ಸೆರೆ: ವಸತಿ ಶಾಲೆ ವಿವಾದ

## ಕೋಲಾರ ಶಾಲೆ ಮೇಲೆ ಇನ್ನೊಂದು ದೂರು

## ಬಾಲಕಿ ಆರೋಪ | ತನಿಖೆ ಆಗುತ್ತೆ: ಅಧಿಕಾರಿ

• **ಕನ್ನಡಪ್ರಭ ವಾರ್ತೆ** ಕೋಲಾರ

ಮಾಲೂರು ತಾಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಕ್ಕಳನ್ನು ಶೌಚ ಗುಂಡಿಗೆ ಇಳಿಸಿ ಸ್ವಚ್ಛತೆಗೆ ಬಳಸಿದ ಬೆನ್ನಲ್ಲೇ ಅಲ್ಲಿ ಓದುತ್ತಿರುವ ಬಾಲಕಿಯರ ಖಾಸಗಿ ವಿಡಿಯೋ ಮಾಡಿರುವ ಆರೋಪವೂ ಇದೀಗ ಕೇಳಿಬಂದಿದೆ. 16 ವರ್ಷದ ವಿದ್ಯಾರ್ಥಿನಿಯೊಬ್ಬಳು ಮಾಧ್ಯಮದೆದುರೇ ಈ ಆರೋಪ ಮಾಡಿದ್ದು, ಈ ಸಂಬಂಧ ತನಿಖೆಗೂ ಆದೇಶಿಸಲಾಗಿದೆ.

ವಸತಿ ಶಾಲೆಯಲ್ಲಿ ಹೆಣ್ಣುಮಕ್ಕಳ ಖಾಸಗಿ ಫೋಟೋ ತೆಗೆಯಲಾಗಿದೆ ಎಂಬ ವಿಚಾರ ಪ್ರಾಥಮಿಕ ತನಿಖೆ ವೇಳೆ ನನ್ನ ಗಮನಕ್ಕೆ ಬಂದಿಲ್ಲ.

↘ 6

- ಶಾಲೆ ವಸತಿ ಗೃಹದಲ್ಲಿ ಬಟ್ಟೆ ಬದಲಿಸುವ ದೃಶ್ಯ ಸೆರೆ ಹಿಡಿದಿದ್ದಾರೆ
- ಯಾರು ಈ ವಿಡಿಯೋ ಮಾಡಿದ್ದಾರೆಂದು ನನಗೆ ಮಾಹಿತಿ ಇಲ್ಲ
- ವಿಡಿಯೋ ಇದೆ ಎಂದು ಸಮಾಜ ಕಲ್ಯಾಣ ಅಧಿಕಾರಿ ತಿಳಿಸಿದ್ದಾರೆ
- ಮೊರಾರ್ಜಿ ವಸತಿ ಶಾಲೆಯ 16 ವರ್ಷದ ವಿದ್ಯಾರ್ಥಿನಿ ಕಣ್ಣೀರು
- ಮಕ್ಕಳ ಸ್ನಾನದ ಫೋಟೋ ಕೂಡ ತೆಗೆದಿದ್ದಾರೆ: ಪೋಷಕರು

ಕನ್ನಡಪ್ರಭ

# ಶೌಚಗುಂಡಿಗೆ ಮಕ್ಕಳ ಇಳಿಸಿದ ಶಿಕ್ಷಕರು ಸೆರೆ

## 4 ಶಿಕ್ಷಕರು ಸಸ್ಪೆಂಡ್ | ಬೆನ್ನಲ್ಲೇ ಇಬ್ಬರ ಅರೆಸ್ಟ್

## ಕೋಲಾರ ವಸತಿ ಶಾಲೇಲಿ ನಡೆದಿದ್ದ ಘಟನೆ

• **ಕನ್ನಡಪ್ರಭ ವಾರ್ತೆ** ಕೋಲಾರ

ಶಾಲಾ ಮಕ್ಕಳನ್ನು ಶೌಚ ಗುಂಡಿಗಿಳಿಸಿ ಸ್ವಚ್ಛತಾ ಕಾರ್ಯಕ್ಕೆ ಬಳಸಿದ ಅಮಾನವೀಯ ಘಟನೆ ಮಾಲೂರು ತಾಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದಿದ್ದು, ಪ್ರಾಂಶುಪಾಲೆ ಸೇರಿ ನಾಲ್ವರನ್ನು ಅಮಾನತು ಮಾಡಲಾಗಿದೆ. ಬೆನ್ನಲ್ಲೇ ಪ್ರಿನ್ಸಿಪಾಲ್ ಸೇರಿ ಇಬ್ಬರನ್ನು ಬಂಧಿಸಲಾಗಿದ್ದು, ಮತ್ತಿಬ್ಬರು ನಾಪತ್ತೆಯಾಗಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಸೇರಿ ವಿವಿಧ ಅಧಿ ಕಾರಿಗಳು ಭಾನುವಾರ ಶಾಲೆಗೆ ಭೇಟಿ ಪರಿಶೀಲನೆ ನಡೆಸಿದ್ದಾರೆ. ಶಾಲಾ ಸಿಬ್ಬಂದಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

↘ 6



### ಚುರುಕುಗೊಂಡ ಅಧಿಕಾರಿಗಳ ತಂಡ, ಸಾರ್ವಜನಿಕರ ಸಹಭಾಗಿತ್ವದ ಬಲ

# ಐದು ವರ್ಷಗಳಲ್ಲಿ 453 ಬಾಲ್ಯ ವಿವಾಹ ತಡೆ

• ಪ್ರಮೋದ

ಕೊಪ್ಪಳ: ಸರ್ಕಾರ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗ ಮತ್ತು ಸಾರ್ವಜನಿಕರ ಸಹಭಾಗಿತ್ವದ ಪರಿಣಾಮದಿಂದಾಗಿ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿ 453 ಬಾಲ್ಯವಿವಾಹಕ್ಕೆ ತಡೆಯೊಡ್ಡಲಾಗಿದೆ. ಹಿಂದಿನ ಒಂದು ತಿಂಗಳ ಅವಧಿಯಲ್ಲಿಯೇ 20ಕ್ಕೂ ಹೆಚ್ಚು ಪ್ರಕರಣಗಳು ಜಿಲ್ಲೆಯಲ್ಲಿ ಕಂಡು ಬಂದಿದ್ದು ಬಾಲ್ಯ ವಿವಾಹಗಳನ್ನು ಅಧಿಕಾರಿಗಳು ತಡೆದಿದ್ದಾರೆ.

ಕೊಪ್ಪಳ ತಾಲ್ಲೂಕಿನ ಜಿನ್ನಾಪುರ ತಾಂಡದ ಮರಿಯಮ್ಮ ದೇವಿ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ನಿಗದಿಯಾಗಿದ್ದ ಐದು ಬಾಲ್ಯವಿವಾಹವನ್ನು ಒಂದೇ ದಿನದಲ್ಲಿ ತಡೆಯಲಾಗಿದೆ. ಬಳಿಕ ಮಕ್ಕಳ ಪೋಷಣೆ ಮತ್ತು ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲಾಗಿದೆ.

ಯಲಬುರ್ಗಾ ತಾಲ್ಲೂಕು, ಕೊಪ್ಪಳ ತಾಲ್ಲೂಕಿನ ಹಿರೇಬೊಮ್ಮನಾಳ ಗ್ರಾಮದಲ್ಲಿ ಶರಣಬಸವೇಶ್ವರ ಜಾತ್ರೆ ಹೀಗೆ ಹಲವು ಕಡೆ ಸರ್ಕಾರ ನಿಗದಿ ಪಡಿಸಿದ ವಯಸ್ಸಿಗೂ ಮೊದಲೇ ಮದುವೆ ಮಾಡಲು ಪೋಷಕರು ಮುಂದಾಗಿದ್ದರಿಂದ ಅವುಗಳಿಗೆ ಅಧಿಕಾರಿಗಳು ಕಡಿವಾಣ ಹಾಕಿದ್ದಾರೆ. ಮಕ್ಕಳ ರಕ್ಷಣಾ ಘಟಕದ ಅಂಕಿಅಂಶದ ಪ್ರಕಾರ 2019-20ರಲ್ಲಿ 144 ಬಾಲ್ಯವಿವಾಹಗಳಿಗೆ ಬ್ರೇಕ್ ಹಾಕಲಾಗಿದ್ದು, 12 ಎಫ್‌ಐಆರ್ ದಾಖಲಿಸಲಾಗಿದೆ.

ಬಾಲ್ಯ ವಿವಾಹ ನಿಗದಿಯಾಗಿದೆ ಅಥವಾ ನಡೆಯುತ್ತಿದೆ ಎನ್ನುವ ಮಾಹಿತಿಯನ್ನು ಸಾರ್ವಜನಿಕರು ಮಕ್ಕಳ ಸಹಾಯವಾಣಿಗೆ 1098/112 ಕರೆ ಮಾಡಿ ಮಾಹಿತಿ ನೀಡುತ್ತಿದ್ದಾರೆ. ಆಗ ಗ್ರಾಮ ಮಟ್ಟದಲ್ಲಿರುವ ಬಾಲ್ಯ ವಿವಾಹ ತಡೆಗಟ್ಟುವ ಅಧಿಕಾರಿಗಳ ತಂಡದವರು ಬಾಲಕಿ ಅಥವಾ ಬಾಲಕನ ಮನೆಗೆ ತೆರಳಿ ದಾಖಲೆ ಸಮೇತ ಮಕ್ಕಳ ಕಲ್ಯಾಣ ಸಮಿತಿಗೆ ವಹಿಸುತ್ತಾರೆ.


> ಹಳ್ಳಿಗಳ ಮಟ್ಟದಿಂದಲೇ ಬಾಲ್ಯವಿವಾಹ ತಡೆಗೆ ನಮ್ಮ ತಂಡ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಕಾರಣ ನಿರಂತರವಾಗಿ ಪ್ರಕರಣಗಳು ಪತ್ತೆಯಾಗುತ್ತಿವೆ. ತಪ್ಪಿತಸ್ಥರಿಗೆ ಕಾನೂನಿನ ಪ್ರಕಾರ ಶಿಕ್ಷೆಯೂ ಆಗುತ್ತಿದೆ.
>
> ಮಹಾಂತಸ್ವಾಮಿ ಪೂಜಾರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಕೊಪ್ಪಳ

ಪ್ರಜಾವಾಣಿ ವಿಶೇಷ

ಜಿಲ್ಲೆಯಲ್ಲಿ ಮೊದಲು ಮಕ್ಕಳ ಸಹಾಯವಾಣಿಯನ್ನು ಖಾಸಗಿಯಾಗಿ ನಿರ್ವಹಣೆ ಮಾಡಲಾಗುತ್ತಿತ್ತು. 2023ರ ಸೆಪ್ಟೆಂಬರ್‌ನಿಂದ ಮಕ್ಕಳ ರಕ್ಷಣಾ ಘಟಕದ ಸುಪರ್ದಿಯಲ್ಲಿಯೇ ಸಹಾಯವಾಣಿ ನಿರ್ವಹಣೆಯಾಗುತ್ತಿರುವ ಕಾರಣ ಅಧಿಕಾರಿಗಳಿಗೆ ವೇಗವಾಗಿ ಮಾಹಿತಿಯೂ ಲಭಿಸುತ್ತಿದೆ.

ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಬಾಲ್ಯವಿವಾಹ ತಡೆ ಸಮಿತಿ ತಂಡದವರು ಮದುವೆ ನಿಲ್ಲಿಸಿ ಅವರನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸುತ್ತಾರೆ, ಕಲ್ಯಾಣ ಸಮಿತಿ ಮುಂದೆ ಬಂದವರಿಗೆ ಕಾನೂನು ಬಗ್ಗೆ ತಿಳಿವಳಿಕೆ ನೀಡುವ ಅಧಿಕಾರಿಗಳಿಗೆ ಮಕ್ಕಳು ಮತ್ತು ಅವರ ಪೋಷಕರಿಗೆ ಬಾಲ್ಯವಿವಾಹದ ಅಪಾಯದ ಕುರಿತು ಜಾಗೃತಿ ಮೂಡಿಸುತ್ತಾರೆ.

ಪೋಷಕರಿಗೂ ಇದರ ಬಗ್ಗೆ ತಿಳಿಹೇಳಲಾಗುತ್ತದೆ. ಮಕ್ಕಳಿಗೆ 18 ವರ್ಷವಾಗುವ ತನಕ ಅಧಿಕಾರಿಗಳೇ ನಿಗಾ ವಹಿಸಿ ಮಕ್ಕಳು ನಿರಂತರವಾಗಿ ಕಲ್ಯಾಣ ಸಮಿತಿಗೆ ಬಂದು ಹೋಗುವಂತೆ ಕ್ರಮ ವಹಿಸುತ್ತಿದ್ದಾರೆ. ಹೀಗಾಗಿ ಬಾಲ್ಯವಿವಾಹ ಪ್ರಕರಣಗಳು ವೇಗವಾಗಿ ಪತ್ತೆಯಾಗುತ್ತಿವೆ. ತಪ್ಪಿತಸ್ಥರಿಗೆ ಕಾನೂನು ರೀತಿಯ ಕ್ರಮವೂ ಆಗುತ್ತಿವೆ.




## ಮದುವೆ ಮೇಲೆ ನಿಗಾ ವಹಿಸಲು ಸೂಚನೆ

ಕೊಪ್ಪಳ: ಅಕ್ಷಯ ತೃತೀಯ, ಇತರ ದಿನಗಳಂದು ಸಾಮೂಹಿಕ, ವೈಯಕ್ತಿಕ ಮತ್ತು ಬಾಲ್ಯವಿವಾಹ ಜರುಗುವ ಸಾಧ್ಯತೆ ಅಧಿಕವಾಗಿರುವುದರಿಂದ ಇವುಗಳ ಮೇಲೆ ಕಣ್ಗಾವಲು ವಹಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಸೂಚಿಸಿದ್ದಾರೆ.

ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಯಲ್ಲಿದ್ದು, ಮದುವೆಯ ಹೆಸರಿನಲ್ಲಿ ಮಕ್ಕಳ ಮೇಲಾಗುವ ದೌರ್ಜನ್ಯಗಳನ್ನು ತಡೆಗಟ್ಟಲು ಹಾಗೂ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲಾ ಹಂತಗಳಲ್ಲಿ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಬಾಲ್ಯವಿವಾಹ ತಡೆಗಟ್ಟಲು ಕ್ರಮ ವಹಿಸಬೇಕು. ಅರಿವು ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಬೇಕು ಎಂದು ಅವರು ಹೇಳಿದ್ದಾರೆ. ಮೇ 10ರಂದು ಅಕ್ಷಯ ತೃತೀಯವಿದೆ.

# ಟಿಸಿ ನೀಡಲು 30 ಶಾಲೆಗಳ ಹಿಂದೇಟು

## ಬಾಕಿ ಶುಲ್ಕ ನೀಡುವಂತೆ ಖಾಸಗಿ ಶಾಲೆಗಳ ಒತ್ತಾಯ | ಶಾಲೆಗಳಿಗೆ ಆಯೋಗ ನೋಟಿಸ್

■ **ದೇವರಾಜ್ ಕನಕಪುರ** ಬೆಂಗಳೂರು
devaraj.l@timesgroup.com

ರಾಜ್ಯದಲ್ಲಿರುವ ಖಾಸಗಿ ಶಾಲೆಗಳು ವಿದ್ಯಾರ್ಥಿಗಳಿಗೆ 'ವರ್ಗಾವಣೆ ಪತ್ರ (ಟಿಸಿ)' ನೀಡಲು ಅನಗತ್ಯ ತೊಂದರೆ ನೀಡಿದರೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮಧ್ಯ ಪ್ರವೇಶ ಮಾಡಲಿದೆ. ಈ ಶೈಕ್ಷಣಿಕ ವರ್ಷದಲ್ಲಿ ಟಿಸಿ ನೀಡಲು ನಿರಾಕರಿಸಿದ 30 ಶಾಲೆಗಳಿಗೆ ಆಯೋಗ ನೋಟಿಸ್ ಜಾರಿ ಮಾಡಿದೆ.

ಮೊದಲು ಶುಲ್ಕ ಪಾವತಿಸಿ ಆನಂತರವಷ್ಟೇ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ನೀಡುತ್ತೇವೆ ಎಂದು ಪೋಷಕರಿಗೆ ಸೂಚಿಸಿವೆ. ಈ ಹಿನ್ನೆಲೆಯಲ್ಲಿ ಪಾಲಕರು ಆಯೋಗಕ್ಕೆ ದೂರು ನೀಡಿದ್ದು, ಆಯೋಗವು ಇಂತಹ ಶಾಲೆಗಳ ವಿರುದ್ಧ ನೋಟಿಸ್ ಜಾರಿ ಮಾಡಿದೆ. ವರ್ಗಾವಣೆ ಪತ್ರವನ್ನು ಮಾನದಂಡವಾಗಿಟ್ಟುಕೊಂಡು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಹಿಂಸೆ ನೀಡುವುದು ಸರಿಯಲ್ಲ. ತಕ್ಷಣ ಅವರಿಗೆ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಯನ್ನು ಬಿಡುಗಡೆ ಮಾಡಬೇಕೆಂದು ಸೂಚಿಸಿದೆ.

ಈ ಹಿಂದೆ ಕೊರೊನಾ ವರ್ಷಗಳಲ್ಲೂ ಶಾಲೆಗಳು ವರ್ಗಾವಣೆ ಪತ್ರ ನೀಡದೇ ವಿದ್ಯಾರ್ಥಿಗಳಿಗೆ ಹಿಂಸೆ ನೀಡುತ್ತಿದ್ದವು. ಈ ವೇಳೆಯೂ ಶಾಲೆಗಳಿಗೆ ನೋಟಿಸ್ ಜಾರಿ ಮಾಡಿ ತಕ್ಷಣ ಬಿಡುಗಡೆ ಮಾಡಬೇಕೆಂದು ಸೂಚಿಸಲಾಗಿತ್ತು. ಈ ವೇಳೆ ಶಾಲೆಗಳು ಟಿಸಿ ನೀಡಿದ್ದವು. ಕೊರೊನಾ ವೇಳೆ ಬಹುತೇಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರಿಂದ ಶುಲ್ಕ ಪಾವತಿಸಲು ಹಿಂದೇಟು ಹಾಕಿದ್ದರು.

### ಶುಲ್ಕ ವಸೂಲಿ ಅಸ್ತ್ರ

ಖಾಸಗಿ ಶಾಲೆಗಳು ಮನಸೋ-ಇಚ್ಛೆ ಶುಲ್ಕ ನಿಗದಿ ಮಾಡಿಕೊಂಡು ಪೋಷಕರಿಂದ ವಸೂಲಿ ಮಾಡುತ್ತಿವೆ. ಒಂದು ವೇಳೆ ಶುಲ್ಕ ಪಾವತಿಸಲು ಸಾಧ್ಯವಾಗದೇ ಇದ್ದಾಗ ಅಥವಾ ಅನ್ಯ ಕಾರಣಗಳಿಂದ ಬೇರೆ ಶಾಲೆಗಳಿಗೆ ಪ್ರವೇಶ ಪಡೆಯಲು ಮುಂದಾದಾಗ ವರ್ಗಾವಣೆ ಪತ್ರವನ್ನು ಶುಲ್ಕ ವಸೂಲಿಯ ಅಸ್ತ್ರವಾಗಿ ಬಳಕೆ ಮಾಡುತ್ತವೆ. ಉಳಿಕೆಯಾಗಿರುವ ಅಥವಾ ಮುಂದಿನ ಶೈಕ್ಷಣಿಕ ವರ್ಷದ ಶುಲ್ಕ ಪಾವತಿಸದೇ ಇದ್ದರೆ ಟಿಸಿ ನೀಡುವುದಿಲ್ಲ ಎಂದು ಪೋಷಕರನ್ನು ಹೊರಹಾಕುತ್ತಿವೆ.

ಸಾಂದರ್ಭಿಕ ಚಿತ್ರ



**46.81** ಲಕ್ಷ ವಿದ್ಯಾರ್ಥಿಗಳು

**17,236** ರಾಜ್ಯದಲ್ಲಿರುವ ಶಾಲೆಗಳು

**19** ಶಾಲೆ ನೋಟಿಸ್‌ಗೆ ಕ್ಯಾರೇ ಅನ್ನದ ಶಾಲೆಗಳು

**ವರ್ಗಾವಣೆ ಪತ್ರ ನೀಡಲು ವಿರೋಧ ವ್ಯಕ್ತಪಡಿಸುವುದು, ಶುಲ್ಕ ಪಾವತಿಸುವಂತೆ ಖಾಸಗಿ ಶಾಲೆಗಳು ವಿದ್ಯಾರ್ಥಿಗಳಿಗೆ ಸೂಚಿಸುವ ಬಗ್ಗೆ ಹಲವು ಪೋಷಕರು ದೂರು ಸಲ್ಲಿಸಿದ್ದಾರೆ. ಇವುಗಳನ್ನು ಪರಿಶೀಲಿಸಿ ಶಾಲೆಗಳಿಗೆ ನೋಟಿಸ್ ನೀಡಿ ಸಾಧ್ಯವಾದಷ್ಟು ಪ್ರಕರಣ ಇತ್ಯರ್ಥ ಮಾಡುತ್ತಿದ್ದೇವೆ.**

- **ಕೆ.ನಾಗಣ್ಣಗೌಡ** ಅಧ್ಯಕ್ಷರು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

**ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ಸೇರಿಸುವ ಮುಖ್ಯ ಉದ್ದೇಶ ಅಲ್ಲಿ ಮಕ್ಕಳು ಸುರಕ್ಷಿತವಾಗಿಲ್ಲ, ಇಲ್ಲವೇ ಗುಣಮಟ್ಟ ಶಿಕ್ಷಣ ಬೋಧಿಸುತ್ತಿಲ್ಲ ಎಂಬುದು. ಇಂತಹ ವೇಳೆಯಲ್ಲಿ ಶಾಲೆಗಳು ಮಕ್ಕಳಿಗೆ ಟಿಸಿ ನೀಡಬೇಕು. ಇಲ್ಲವೇ ಸರಕಾರ ಮಧ್ಯಪ್ರವೇಶ ಮಾಡಿ ಟಿಸಿ ಕೊಡಿಸಬೇಕು.**

- **ನಾಗಸಿಂಹ ಜಿ. ರಾವ್** ನಿರ್ದೇಶಕ, ಚೈಲ್ಡ್ ರೈಟ್ಸ್ ಸಂಘಟನೆ

**11 ಪ್ರಕರಣ ಇತ್ಯರ್ಥ:** 30 ಪ್ರಕರಣಗಳ ಪೈಕಿ 11 ಪ್ರಕರಣಗಳನ್ನು ಆಯೋಗ ಮಧ್ಯಪ್ರವೇಶಿಸಿ ಇತ್ಯರ್ಥ ಮಾಡಿದೆ. ಪೋಷಕರ ದೂರುಗಳು ಬಂದ ತಕ್ಷಣ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಶಾಲೆಗಳಿಗೆ ನೋಟಿಸ್ ಜಾರಿ ಮಾಡಿದೆ. ಈ ವೇಳೆ ಬಹುತೇಕ ಶಾಲೆಗಳು ಇದಕ್ಕೆ ಬೆಲೆ ನೀಡಿ ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರವನ್ನು ನೀಡಿವೆ.

ಇನ್ನುಳಿದ 19 ಶಾಲೆಗಳು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನೋಟಿಸ್‌ಗೂ ಕ್ಯಾರೇ ಅಂದಿಲ್ಲ. ಆಯೋಗವು ಶಾಲಾ ಶಿಕ್ಷಣ ಇಲಾಖೆಗೂ ಪತ್ರ ಬರೆದು ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಎಚ್ಚರ ವಹಿಸಿ ಟಿಸಿ ಬಿಡುಗಡೆ ಮಾಡಿಕೊಡುವಂತೆ ಮನವಿ ಮಾಡಿದೆ.

**ಅಮಾನವೀಯ** | ಭಾಲ್ಕಿಯ ನಿಟ್ಟೂರ (ಬಿ) ಗ್ರಾಮದ ವೀರಭದ್ರೇಶ್ವರ ಪ್ರೌಢ ಶಾಲೆಯಲ್ಲಿ ಘಟನೆ | ಕನ್ನಡ ಭಾಷೆಯ ಮನೆ ಪಾಠ ಮಾಡಿಲ್ಲ ಎಂದು ಥಳಿತ

# ಹೋಮ್‌ವರ್ಕ್ ಮಾಡದ್ದಕ್ಕೆ ವಿದ್ಯಾರ್ಥಿಗೆ ಥಳಿಸಿದ ಶಿಕ್ಷಕ

• **ಕನ್ನಡಪ್ರಭ ವಾರ್ತೆ** ಬೀದರ್

ಇತ್ತೀಚೆಗೆ ವಿದ್ಯಾರ್ಥಿಗಳಿಗೆ ಬೆತ್ತದೇಟು ನೀಡಿ ದಂಡಿಸುವ ಪ್ರವೃತ್ತಿ ಕಡಿಮೆಯಾಗಿದ್ದರೂ, ಶಾಲೆಗೆ ಬರುವಾಗ ಮನೆಯಲ್ಲಿ ಹೋಮ್ ವರ್ಕ್ ನೋಟ್ ಬುಕ್ ಬಿಟ್ಟು ಬಂದಿದ್ದಕ್ಕೆ ವಿದ್ಯಾರ್ಥಿಯೋರ್ವನಿಗೆ ಬೆನ್ನು, ಕೈ, ತೊಡೆ, ಕಾಲುಗಳಿಗೆ ಬಾಸುಂಡೆ ಅಷ್ಟೇ ಅಲ್ಲ, ರಕ್ತ ಚಿಮ್ಮುವಂತೆ ಹೊಡೆಯಲಾಗಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ತವರಲ್ಲಿಯೇ ಈ ಅಮಾನವೀಯತೆ ಮೆರೆದಿದೆ. ಭಾಲ್ಕಿ ತಾಲೂಕಿನ ನಿಟ್ಟೂರು (ಬಿ) ಗ್ರಾಮದಶ್ರೀ ವೀರಭದ್ರೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿಗೆ ಹೊಡೆಯಲಾಗಿದೆ. (ಹೆಸರು ಗೌಪ್ಯವಾಗಿಡಲಾಗಿದೆ) ಗುರುವಾರ ಮಧ್ಯಾಹ್ನ ಶಾಲೆಯ ಕೊನೆಯ ತರಗತಿಯಲ್ಲಿ ಈ ಅಮಾನವೀಯ ಕೃತ್ಯ ನಡೆದಿದೆ. ಕನ್ನಡ ಭಾಷೆ ಮನೆ ಪಾಠವನ್ನು ಮಾಡಿಕೊಂಡು ಬಂದಿಲ್ಲ, ಆ ನೋಟ್‌ಬುಕ್ ತಂದಿಲ್ಲ ಎಂದು ಕೋಪೋದ್ರಿಕ್ತನಾಗಿ ಶಾಲೆ ಪ್ರಭಾರಿ ಮುಖ್ಯಶಿಕ್ಷಕನಾಗಿದ್ದ ಜೈಶಂಕರ ಎಂಬ ಸಹ ಶಿಕ್ಷಕ ಇಂಥ ಅಮಾನವೀಯ ಕೃತ್ಯ ಎಸಗಿದ್ದಾನೆ.

ಈ ಕುರಿತಂತೆ ಸಾಮಾಜಿಕ ಜಾಲತಾಣದಲ್ಲಿ ಬಂದ ವಿಡಿಯೋ ಎಲ್ಲೆಡೆ ವೈರಲ್ ಆಗುತ್ತಿದ್ದಂತೆ ಶಿಕ್ಷಣ ಇಲಾಖೆ ಎಚ್ಚೆತ್ತುಕೊಂಡಿದೆ. ಡಿಡಿಪಿಐ ಸೂಚನೆ ಮೇರೆಗೆ ಶಾಲೆಗೆ ಭೇಟಿ ನೀಡಿದ ಬಿಇಒ ಮಜರ್ ಹುಸೇನಿ ಶಾಲಾ ಆಡಳಿತ ಮಂಡಳಿಗೆ ನೋಟಿಸ್ ಜಾರಿ ಮಾಡಿದ್ದು, ಮೂರು ದಿನಗಳ ಒಳಗಾಗಿ ಸಹ ಶಿಕ್ಷಕನ ಮೇಲೆ ಕ್ರಮ ಕೈಗೊಂಡು, ಘಟನೆಯ ಬಗ್ಗೆ ವಿವರ ನೀಡುವಂತೆ ಸೂಚಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೋದಲ್ಲಿ ಕಂಡುಬಂದಂತೆ, ಇನ್ನೂ 8ನೇ ತರಗತಿ ಮುಗಿಯದ ಮುಗ್ಧ ಮನಸ್ಸಿನ ಹುಡುಗ, ಮೈತುಂಬ ರಕ್ತದ ಕಲೆಗಳುಳ್ಳ ಬಾಸುಂಡೆ ತೋರಿಸುತ್ತ ಮನೆಯಲ್ಲಿ ನೋಟ್ ಬುಕ್ ಬಿಟ್ಟು ಬಂದಿದ್ದಕ್ಕೆ ಸರ್ ಹೊಡೆದಾರ ಎಂದು ಹೇಳುತ್ತಿರುವುದನ್ನು ಕೇಳುಗರ ಕಣ್ಣಂಚಿನಲ್ಲಿಯೂ ನೀರು ತಡೆಯಲಾಗದಂತಿದೆ.

**ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಎಸ್‌ಪಿ ಸೂಚನೆ:** ಜೈಶಂಕರ್ ಎಂಬ ಶಿಕ್ಷಕನೇ ವಿದ್ಯಾರ್ಥಿಗೆ ರಕ್ತ, ಬಾಸುಂಡೆ ಬರುವಂತೆ ಹೊಡೆದಿರೋದು ಎಂಬುವದನ್ನು ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸಿರುವ ಎಸ್‌ಪಿ ಚನ್ನಬಸವಣ್ಣ ಎಸ್‌ಎಲ್ ಧನ್ನೂರ ಠಾಣೆಯ ಪಿಎಸ್‌ಐಗೆ ತನಿಖೆ ನಡೆಸಿ ತಕ್ಷಣ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ.

- ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ತವರಲ್ಲೇ ಈ ಅಮಾನವೀಯತೆ
- ಶಾಲಾ ಆಡಳಿತಕ್ಕೆ ನೋಟಿಸ್, ತನಿಖೆಗೆ ಎಸ್‌ಪಿ ಸೂಚನೆ

ಈ ಘಟನೆ ಜಿಲ್ಲೆಯ ಶೈಕ್ಷಣಿಕ ವಲಯಕ್ಕೆ ಕಪ್ಪು ಚುಕ್ಕೆ. ಇಂತಹ ಘಟನೆಗಳು ಜಿಲ್ಲೆಯ ಇತರೆ ಶಾಲೆಗಳಲ್ಲಿಯೂ ನಡೆಯದಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಎಚ್ಚರಿಕೆ ವಹಿಸಬೇಕು. ಈಗಾಗಲೇ ಸರ್ಕಾರದ ಸುತ್ತೋಲೆ ಇದ್ದರೂ ಈ ಕುರಿತಂತೆ ಎಲ್ಲ ಶಾಲಾ ಆಡಳಿತ ಮಂಡಳಿಗಳಿಗೆ ಮತ್ತೊಮ್ಮೆ ಸೂಚಿಸಿ ಇಲಾಖೆ ಪತ್ರ ಬರೆಯಬೇಕಿದೆ. ಮಕ್ಕಳ ಹಕ್ಕುಗಳ ಆಯೋಗದವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಲ್ಲ ಶಾಲೆಗಳಲ್ಲಿ ಈ ಕುರಿತು ಅರಿವು ಮೂಡಿಸುವ ಕಾರ್ಯ ಮಾಡಲಿ.



ರಕ್ತ, ಬಾಸುಂಡೆ ಬರುವಂತೆ ಥಳಿಸಿಕೊಂಡಿರುವ ವಿದ್ಯಾರ್ಥಿ ದೇಹದ ಹಿಂಭಾಗ



ಥಳಿತಕ್ಕೊಳಗಾದ ವಿದ್ಯಾರ್ಥಿಯ ತೊಡೆಯ ಮೇಲೆ ಮೂಡಿರುವ ರಕ್ತಸಿಕ್ತ ಬಾಸುಂಡೆ

## ಶಿಕ್ಷಣ ಇಲಾಖೆಯಲ್ಲಿ 62,569 ಮಕ್ಕಳ ಲೆಕ್ಕವೇ ಸಿಗುತ್ತಿಲ್ಲ। ಮಾಹಿತಿ ಕಲೆ ಹಾಕಲು ಅಧಿಕಾರಿಗಳ ನಿಷ್ಕಾಳಜಿ

# ಕಲ್ಯಾಣದ ಅರ್ಧ ಲಕ್ಷ ಮಕ್ಕಳು ಎಲ್ಲಿ?

■ ವೆಂಕಟೇಶ ವಗನೂರು ಕಲಬುರಗಿ
Venkatesh.narasappa@timesgroup.com

ಪ್ರಸಕ್ತ ಶೈಕ್ಷಣಿಕ ವರ್ಷ ಮುಗಿಯುವ ಹಂತಕ್ಕೆ ಬಂದಿದ್ದರೂ ಕಲ್ಯಾಣ ಕರ್ನಾಟಕ ಭಾಗದ 62,569 ಸರಕಾರಿ ಶಾಲಾ ಮಕ್ಕಳ ಮಾಹಿತಿಯೇ ಶಿಕ್ಷಣ ಇಲಾಖೆಯಲ್ಲಿ ಇಲ್ಲದೇ ಇರುವುದು ಕಳವಳ ಉಂಟು ಮಾಡಿದೆ.

ಸರಕಾರಿ ಶಾಲೆಗಳಲ್ಲಿ ಪ್ರತಿ ವರ್ಷ ದಾಖಲಾತಿ ನಡೆಯುತ್ತದೆ. ಆದರೆ, ಪ್ರತಿ ವರ್ಷದ ದಾಖಲಾತಿಯಲ್ಲಿ ಹೋಲಿಕೆ ನೋಡಿದರೆ ಸಾವಿರಾರು ವಿದ್ಯಾರ್ಥಿಗಳ ಮಾಹಿತಿಯೇ ಲಭ್ಯವಾಗುತ್ತಿಲ್ಲ. ಕಳೆದ ವರ್ಷ ದಾಖಲಾತಿಯಲ್ಲಿ ಇದ್ದ ಮಕ್ಕಳು ಮುಂದಿನ ವರ್ಷದಲ್ಲಿ ಎಲ್ಲಿಗೆ ಹೋದರು ಎಂಬುದೇ ಅಚ್ಚರಿ. ಆದರೆ, ಈ ಮಕ್ಕಳ ಹುಡುಕಾಟಕ್ಕೆ, ದಾಖಲಾತಿಯ ವಾಸ್ತವಾಂಶ ಅಂಕಿ ಸಂಖ್ಯೆ ಮಾಹಿತಿ ತಿಳಿಯಲು ಇಲಾಖೆ ಮನಸ್ಸಿಗೆ ಹಚ್ಚಿಕೊಳ್ಳದೆ ಕೈ ಚೆಲ್ಲಿ ಕುಳಿತಿದೆ.

**62 ಸಾವಿರ ಮಕ್ಕಳ ಮಾಹಿತಿಯೇ ಇಲ್ಲ**

ಕಲ್ಯಾಣ ಕರ್ನಾಟಕದಲ್ಲಿ 62,569 ಮಕ್ಕಳ ದಾಖಲಾತಿ ಮಾಹಿತಿಯೇ ಸಿಗುತ್ತಿಲ್ಲ. ಕಲಬುರಗಿ ಜಿಲ್ಲೆಯಲ್ಲಿ 12,735, ಬಳ್ಳಾರಿಯಲ್ಲಿ 6,461, ಕೊಪ್ಪಳದಲ್ಲಿ 6,560, ವಿಜಯನಗರದಲ್ಲಿ 10,041, ಯಾದಗಿರಿಯಲ್ಲಿ 10,210, ಬೀದರ್‌ನಲ್ಲಿ 7,356 ಹಾಗೂ ರಾಯಚೂರಿನಲ್ಲಿ 9,152 ಮಕ್ಕಳ ದಾಖಲಾತಿ ಮಾಹಿತಿ ಇಲ್ಲ.

**ಎಲ್ಲಿಗೆ ಹೋದರು ?**

ಈ ವರ್ಷ ದಾಖಲಾತಿಯಾದ ನಂತರ ಮುಂದಿನ ವರ್ಷ ಇಷ್ಟು ಮಕ್ಕಳು ದಾಖಲಾತಿಯಲ್ಲಿ ಕಡಿಮೆ ಆದರೆ, ತಕ್ಷಣವೇ ಮಕ್ಕಳನ್ನು ಗುರುತಿಸಬಹುದು. ಒಂದು ಖಾಸಗಿ ಶಾಲೆಗಳಿಗೆ ದಾಖಲಾತಿ ಪಡೆದರೆ ವರ್ಗಾವಣೆ ಪ್ರಮಾಣ ಪತ್ರ ಪಡೆದೇ ಹೋಗಿರುತ್ತಾರೆ. ಇದರಿಂದ ಮಕ್ಕಳ ಟ್ರ್ಯಾಕಿಂಗ್ ಮಾಡಲು ಕಷ್ಟವೇನು ಆಗಲ್ಲ. ಆದರೆ, ಸರಕಾರಿಯಲ್ಲಿ ನೋಂದಣಿ ಮಾಡಿಸಿ, ಖಾಸಗಿಯಲ್ಲೂ ನೋಂದಣಿ ಮಾಡಿಸಲಾಗಿದೆಯಾ ಎಂಬುದೂ ತಿಳಿಯಬೇಕಿದೆ. ಜತೆಗೆ ಇದರಲ್ಲಿ ಡ್ರಾಪ್‌ಔಟ್ ಕೆಲ ಮಕ್ಕಳೂ ಇರಬಹುದು. ಆದರೆ, ನಿಖರ ಸಂಖ್ಯೆಗಳನ್ನು ತಿಳಿಯಲು ಶಿಕ್ಷಣ ಇಲಾಖೆ ಮನಸ್ಸು ಮಾಡಬೇಕು ಎಂಬ ಮಾತುಗಳು ಕೇಳಿ ಬಂದಿವೆ.



### ಬಿಸಿಯೂಟಕ್ಕಾಗಿ ಹೆಚ್ಚು ತೋರಿಸಲಾಯಿತೇ ?

ಇಷ್ಟು ಬಿಸಿಯೂಟದಲ್ಲಿ ಹೆಚ್ಚು ಮಕ್ಕಳ ಹಾಜರಾತಿ ತೋರಿಸಿದರೆ ಶಾಲೆಗೆ ಹೆಚ್ಚುವರಿಯಾಗಿ ಬಿಸಿಯೂಟ ಸಾಮಗ್ರಿ ಸಿಗುತ್ತದೆ ಎಂಬ ಕಾರಣಕ್ಕಾಗಿ ಹೆಚ್ಚುವರಿ ತೋರಿಸಲಾಗುತ್ತಿದೆಯಾ ? ಇದರಲ್ಲಿ ಶಾಲೆಗಳ ಮುಖ್ಯಶಿಕ್ಷಕರ ಪಾತ್ರ ಏನಾದರು ಇದೆಯಾ ಎಂಬ ಹಲವಾರು ಅನುಮಾನಗಳಿದ್ದು, ಈ ಬಗ್ಗೆ ಶಿಕ್ಷಣ ಇಲಾಖೆಯೇ ತನಿಖೆ ನಡೆಸಬೇಕಿದೆ.

### ಕಲ್ಯಾಣ ಮಕ್ಕಳ ದಾಖಲಾತಿ ವ್ಯತ್ಯಾಸ

| ಜಿಲ್ಲೆ | 2022-23 ಟಾರ್ಗೆಟ್ | 2023-24 ದಾಖಲಾತಿ | ಪೆಂಡಿಂಗ್ |
|---|---|---|---|
| ಕಲಬುರಗಿ | 2,59,783 | 2,47,048 | 12,735 |
| ಬಳ್ಳಾರಿ | 1,41,978 | 1,35,517 | 06461 |
| ಕೊಪ್ಪಳ | 2,16,460 | 2,09,900 | 06560 |
| ವಿಜಯನಗರ | 1,61,198 | 1,51,157 | 10,041 |
| ಯಾದಗಿರಿ | 1,80,487 | 1,70,277 | 10,210 |
| ಬೀದರ್ | 1,24,895 | 1,17,539 | 07,356 |
| ರಾಯಚೂರು | 2,69,111 | 2,59,959 | 09,152 |
| ಒಟ್ಟು | 13,53,912 | 12,91,397 | 62,515 |



ಕಲ್ಯಾಣ ಕರ್ನಾಟಕ ಭಾಗದ ಶಾಲಾ ಮಕ್ಕಳ ಮಾಹಿತಿಯನ್ನು ಎಸ್‌ಎಟಿಎಸ್‌ನಲ್ಲಿ ಅಪ್ಡೇಟ್ ಮಾಡಲಾಗುತ್ತಿದೆ. ಮೇಲಧಿಕಾರಿಗಳು ಸಹ ಆದಷ್ಟು ಬೇಗ ಮಕ್ಕಳ ಗುರುತಿಸುವ ಕಾರ್ಯ ಮಾಡಬೇಕು ಎಂದು ಸೂಚಿಸಿದ್ದಾರೆ. ಆದ್ದರಿಂದ ಎಲ್ಲ ಜಿಲ್ಲೆಗಳ ಡಿಡಿಪಿಐಗಳಿಗೆ, ಬಿಇಒಗಳಿಗೆ, ಎಚ್‌ಎಂಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

- ಡಾ.ಆಕಾಶ ಶಂಕರ್, ಅಪರ ಆಯುಕ್ತ, ಶಿಕ್ಷಣ ಇಲಾಖೆ ಕಲಬುರಗಿ

### 6ನೇ ತರಗತಿಯಿಂದ ಹೆಚ್ಚು ವ್ಯತ್ಯಾಸ

ಒಂದನೇ ತರಗತಿಯಿಂದ 5ನೇ ತರಗತಿವರೆಗೆ ಬಹುತೇಕ ಸರಕಾರಿ ಮಕ್ಕಳ ದಾಖಲಾತಿ ಪ್ರತಿ ವರ್ಷ ಸರಾಸರಿ ಸರಿಯಾಗಿಯೇ ಇರುತ್ತದೆ. ಆದರೆ, 6ನೇ ತರಗತಿಯಿಂದ 10ನೇ ತರಗತಿವರೆಗೆ ಪ್ರತಿ ವರ್ಷ ಸಾವಿರಾರು ಮಕ್ಕಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿದೆ.

**ತರಬೇತಿಗಾಗಿ ದಾಖಲಾತಿಯೇ ?**

ಕೆಲವರು ಸರಕಾರಿ ಶಾಲೆಗಳಲ್ಲಿ ದಾಖಲಾತಿ ಮಾಡಿಸಿ ಸೈನಿಕ ಶಾಲೆ, ನವೋದಯ, ಕಿತ್ತೂರು ರಾಣಿ ಚನ್ನಮ್ಮ, ಮೊರಾರ್ಜಿ ಶಾಲೆಗಳ ತರಬೇತಿಗೆ ಹಾಕಲಾಗುತ್ತದೆ. ಸರಕಾರಿ ಶಾಲೆಯಲ್ಲಾದರೆ ಹಾಜರಾತಿ ಸಿಗುತ್ತದೆ. ಈ ಕಾರಣಕ್ಕೆ 8 ತಿಂಗಳಿಂದ ಒಂದು ವರ್ಷದವರೆಗೆ ಈ ತರಬೇತಿಗೆ ಮಗು ಹೋದರೆ, ಸರಕಾರಿ ಶಾಲೆಗಳಲ್ಲಿ ಹಾಜರಾತಿ ಸಿಗುತ್ತದೆ ಎಂಬ ಕಾರಣಕ್ಕೆ ದಾಖಲಾತಿ ಮಾಡಿರುತ್ತಾರೆ. ಆದರೆ, ವಾಸ್ತವದಲ್ಲಿ ಮಕ್ಕಳು ಬೇರೆ ಕಡೆ ಹೋಗಿರುತ್ತಾರೆ ಎಂಬ ಸಂಶಯಗಳೂ ಕೆಲ ಅಧಿಕಾರಿಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಕನ್ನಡಪ್ರಭ

# ಕತ್ತಲೆಯಾಗುತ್ತಿದ್ದಂತೆ ಬಾರ್ ಆಗಿ ಬದಲಾಗುವ ಶಾಲಾ ಮೈದಾನ!

## ಬೂದುಗುಂಪಾ ಪ್ರೌಢಶಾಲೆಯಲ್ಲಿ ರಾತ್ರಿ ಕುಡುಕರ ಕಾಟ | ತರಗತಿ ಬಹಿಷ್ಕರಿಸಿ ಮಕ್ಕಳ ಪ್ರತಿಭಟನೆ ಸುಮಾರು 50ರಿಂದ 60 ಮದ್ಯದ ಖಾಲಿ ಬಾಟಲ್ ಪತ್ತೆ



ಕಾರಟಗಿ ತಾಲೂಕಿನ ಬೂದುಗುಂಪಾ ಸರ್ಕಾರಿ ಪ್ರೌಢಶಾಲಾ ಶಿಕ್ಷಕಿ ಶಾಲಾ ಮೈದಾನದಲ್ಲಿ ಬಿದ್ದಿದ್ದ ಬಿಯರ್ ಬಾಟಲಿಗಳನ್ನು ಒಂದೆಡೆ ಕೂಡಿ ಹಾಕಿದರು.



ಬೂದುಗುಂಪಾ ಪ್ರೌಢಶಾಲೆ ವಿದ್ಯಾರ್ಥಿಗಳು ಬುಧವಾರ ತರಗತಿ ಬಹಿಷ್ಕರಿಸಿ ಶಾಲೆಯ ಮುಂಭಾಗ ಪ್ರತಿಭಟನೆ ನಡೆಸಿದರು.

• **ಕನ್ನಡಪ್ರಭ ವಾರ್ತೆ** ಕಾರಟಗಿ

ನಿತ್ಯ ಬೆಳಗ್ಗೆ ಶುಭ್ರವಾಗಿ ಶಾಲೆಗೆ ಕಲಿಯಲು ಬರುವ ವಿದ್ಯಾರ್ಥಿಗಳಿಗೆ ಕೊಠಡಿಗಳಿಗೆ ತೆರಳುವ ಮೊದಲು ಶಾಲೆಯ ಮೈದಾನ ಸ್ವಚ್ಛಗೊಳಿಸಬೇಕಿದೆ.

ಶಾಲೆಯ ಮೈದಾನವನ್ನೇನೋ ವಿದ್ಯಾರ್ಥಿಗಳು ಸ್ವಚ್ಛಗೊಳಿಸಲು ಅಡ್ಡಿ ಇಲ್ಲ, ಮೈದಾನದಲ್ಲಿ ಕಸ ಕಡ್ಡಿ, ಗಿಡಗಂಟಿ ಸ್ವಚ್ಛಗೊಳಿಸಬಹುದು. ಆದರೆ, ಶಾಲೆಯ ಮೈದಾನ ನಿತ್ಯ ರಾತ್ರೋರಾತ್ರಿ ಬಾರ್ ಆದರೆ, ಮಕ್ಕಳ ಪರಿಸ್ಥಿತಿ ಅಧೋಗತಿ. ಇದು ಮೇಲ್ನೋಟಕ್ಕೆ ಹಗಲಿನಲ್ಲಿ ಮಕ್ಕಳಿಗೆ ಪಾಠ ರಾತ್ರಿ ಕುಡುಕರಿಗೆ ಆಟದ ಮೈದಾನವಾಗಿದೆ.

ಇಂಥ ಪರಿಸ್ಥಿತಿಯನ್ನು ತಾಲೂಕಿನ ಬೂದುಗುಂಪಾ ಗ್ರಾಮದ ಹೊರವಲಯದ ಸರ್ಕಾರಿ ಪ್ರೌಢಶಾಲೆ ಮಕ್ಕಳನ್ನು ಕಾಡುತ್ತಿದೆ. ಮಕ್ಕಳು ದಿನಂಪ್ರತಿ ಬೆಳಗ್ಗೆ ಪ್ರಾರ್ಥನೆ, ತರಗತಿ ಪ್ರಾರಂಭಕ್ಕೂ ಮುನ್ನ ಖಾಲಿ ಬಾಟಲಿ, ದೇಸೀ ಮದ್ಯದ ಟೆಟ್ರಾ ಪಾಕೇಟ್, ನೀರಿನ ಬಾಟಲಿಗಳನ್ನು ಆರಿಸಿ, ಗೂಡಿಸಬೇಕಾಗಿದೆ.

ಈ ಪರಿಸ್ಥಿತಿಯನ್ನು ತಪ್ಪಿಸಿ, ಶಾಲೆಗೆ ಮೂಲ ಸೌಲಭ್ಯ ಕಲ್ಪಿಸಿ ಮತ್ತು ಪ್ರತಿಯೊಂದು ವಿಷಯಕ್ಕೆ ಶಿಕ್ಷಕರನ್ನು ನೇಮಕ ಮಾಡಲು ಒತ್ತಾಯಿಸಿ ಶಾಲೆಯ ವಿದ್ಯಾರ್ಥಿಗಳು ಬುಧವಾರ ತರಗತಿ ಬಹಿಷ್ಕರಿಸಿ ಪ್ರತಿಭಟನೆ ಮಾಡಿದ ಘಟನೆ ಸಹ ನಡೆದಿದೆ.

ವಿಚಿತ್ರ ಎಂದರೆ ಬುಧವಾರ ಬೆಳಗ್ಗೆ ಶಾಲೆ ದೈಹಿಕ ಶಿಕ್ಷಕಿಯೊಬ್ಬರು ಮೈದಾನದಲ್ಲಿ ಬಿದ್ದಿದ್ದ ಬಾಟಲಿಗಳನ್ನು ಕೂಡಿಸಿ ಒಂದೆಡೆ ಹಾಕಿದ್ದಾರೆ. ಒಟ್ಟು 57 ಬಿಯರ್‌ನ ಖಾಲಿ ಬಾಟಲಿಗಳು ಪತ್ತೆಯಾಗಿವೆ. ಇದು ಮಕ್ಕಳನ್ನು ಮತ್ತಷ್ಟು ಚಿಂತೆಗೀಡು ಮಾಡಿದೆ. ಮಕ್ಕಳು ತಪ್ಪಿದರೆ ಶಾಲೆ ಶಿಕ್ಷಕರಿಗೆ ಬಾಟಲಿ ಆರಿಸುವ ಕೆಲಸ ತಪ್ಪಿದಲ್ಲ ಎನ್ನುವ ವಿಷಯ ಶಿಕ್ಷಣ ಇಲಾಖೆಗೂ ಗೊತ್ತಿದ್ದರೂ ಮೌನವಾಗಿದೆ.

> ಶಾಲಾ ಮೈದಾನದಲ್ಲಿ ಕುಡುಕರ ಹಾವಳಿ ಮಿತಿ ಮೀರಿದ ವಿಚಾರ ಗಮನಕ್ಕೆ ಬಂದಿದೆ. ಕುಡುಕರ ಉಪಟಳಕ್ಕೆ ಕಡಿವಾಣ ಹಾಕಲು ಗ್ರಾಮಸ್ಥರ ಜತೆ ಸಭೆ ನಡೆಸಲಾಗುವುದು. ಜತೆಗೆ ಶಾಲೆಗೆ ತ್ವರಿತವಾಗಿ ವಾರದೊಳಗೆ ಹಿಂದಿ ಶಿಕ್ಷಕರ ವ್ಯವಸ್ಥೆ ಮಾಡಲಾಗುವುದು.
>
> • **ವೆಂಕಟೇಶ ಆರ್.** ಗಂಗಾವತಿ ಬಿಇಒ

ಈ ಎಲ್ಲ ಪರಿಸ್ಥಿತಿ ನೋಡಿಕೊಂಡು ಬೂದುಗುಂಪಾ, ಹಾಲಸಮುದ್ರ, ತಿಮ್ಮಾಪುರ ತ್ರಿವಳಿ ಗ್ರಾಮಗಳ 150ಕ್ಕೂ ಹೆಚ್ಚು ಮಕ್ಕಳ ವಿದ್ಯಾಭ್ಯಾಸ ಮಾಡುವ ಏಕೈಕ ಪ್ರೌಢಶಾಲೆಯನ್ನು ಅಧಿಕಾರಿಗಳು ಸಂರಕ್ಷಿಸಬೇಕು. ಮೂಲಸೌಲಭ್ಯ ಒದಗಿಸಬೇಕೆಂದು ಬುಧವಾರ ತರಗತಿ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ ಪ್ರತಿಭಟನೆ ನಡೆಯಿತು. ಪ್ರೌಢಶಾಲೆ ಮೈದಾನವು ಕುಡುಕರ ಅಡ್ಡೆಯಾಗಿದ್ದು, ಇದನ್ನು ರಕ್ಷಿಸಬೇಕು. ನಿತ್ಯ ಕುಡಿದು ಬಾಟಲಿ ಗಾಜು ಪುಡಿ ಮಾಡಿ ಬೀಸಾಡುತ್ತಾರೆ. ಮಕ್ಕಳು ಬೆಳಗ್ಗೆ ನಿತ್ಯ ಗಾಜುಗಳನ್ನು ಆರಿಸಿ ಸ್ವಚ್ಛಗೊಳಿಸುತ್ತಾರೆ. ಈ ಸ್ಥಿತಿಯನ್ನು ತಪ್ಪಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು.

**ಸಮಸ್ಯೆ ಹಲವು:** ಕಳೆದ 7 ತಿಂಗಳಿನಿಂದ ಹಿಂದಿ ವಿಷಯಕ್ಕೆ ಶಿಕ್ಷಕರಿಲ್ಲ. ಇನ್ನು ಮಾರ್ಚ್‌ನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಿಗದಿಯಾಗಿದೆ. 80 ವಿದ್ಯಾರ್ಥಿಗಳು ಈ ಬಾರಿ 10ನೇ ತರಗತಿಯಲ್ಲಿದ್ದಾರೆ. ಅವರ ಮುಂದಿನ ಪರಿಸ್ಥಿತಿ ಏನು? ಇದಕ್ಕೆ ಯಾರು ಜವಾಬ್ದಾರಿ? ಎಂದು ವಿದ್ಯಾರ್ಥಿಗಳು ಪ್ರಶ್ನಿಸಿದ್ದಾರೆ. ಶಿಕ್ಷಕರ ನೇಮಕಕ್ಕೆ ಹೋರಾಟ ನಡೆಸಿದ್ದರೂ ಶಿಕ್ಷಣ ಇಲಾಖೆ ನಿರ್ಲಕ್ಷಿಸಿದೆ ಎಂದು ಆರೋಪಿಸಿದರು. ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಗಂಗಾವತಿ ಬಿಇಒ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಜತೆಗೆ ಕಾರಟಗಿ ಪೊಲೀಸರು, ಅಬಕಾರಿ ಅಧಿಕಾರಿಗಳು ಶಾಲೆ ಮತ್ತು ಗ್ರಾಮದ ಎಲ್ಲೆಡೆ ಹರಡಿದ ಅಕ್ರಮ ಮದ್ಯದ ತಾಣ, ಅಕ್ರಮ ಮದ್ಯ ತಡೆಗೆ ಮುಂದಾಗಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಶಿವಕುಮಾರಗೌಡ ತೆಕ್ಕಲಕೋಟೆ ಪ್ರತಿಭಟನೆ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶರಣಗೌಡ ಮಾಲಿಪಾಟೀಲ್, ಕಾರ್ಯದರ್ಶಿ ಮಲ್ಲಿಕಾರ್ಜುನ, ಎನ್‌ಎಸ್‌ಯುಐ ಕಾರ್ಯಕರ್ತರು ಶಾಲೆ ವಿದ್ಯಾರ್ಥಿಗಳು ಇದ್ದರು.

KOPPAL Edition
Jan 4, 2024 Page No. 02
Powered by : eReleGo.com

ವಿಜಯ ಕರ್ನಾಟಕ VK
ಸೋಮವಾರ,18 ಡಿಸೆಂಬರ್ 2023, ಕಲಬುರಗಿ

## ಬುದ್ಧಿ ಬೆಳೆಯುವ ಮುನ್ನವೇ ಗರ್ಭಧಾರಣೆ | 2023ರಲ್ಲೇ 28,657 ಅಪ್ರಾಪ್ತ ಗರ್ಭಿಣಿಯರು ಪತ್ತೆ

# ಬಾಲ ಗರ್ಭಿಣಿಯರು ಹೆಚ್ಚಳ

■ **ದೇವಯ್ಯ ಗುತ್ತೇದಾರ್** ಕಲಬುರಗಿ
devayya.guttedar@timesgroup.com

ಇದು ರಾಜ್ಯವೇ ಬೆಚ್ಚಿ ಬೀಳಿಸುವ ಸಂಗತಿ. ರಾಜ್ಯದಲ್ಲಿ ಅಪ್ರಾಪ್ತ ವಯಸ್ಸಿನಲ್ಲೇ ಗರ್ಭ ಧರಿಸುವವರ ಸಂಖ್ಯೆ ಏರುಗತಿಯಲ್ಲಿದೆ. ಸರಕಾರವೇ ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ, ಈ ವರ್ಷ 28,657 ಬಾಲ ಗರ್ಭಿಣಿಯರು ಪತ್ತೆಯಾಗಿದ್ದಾರೆ. ಇನ್ನೂ ಕಳವಳಕಾರಿ ಸಂಗತಿ ಎಂದರೆ 14, 15 ವರ್ಷದ ಕಿಶೋರಿಯರೂ ಗರ್ಭವತಿಯಾಗಿದ್ದಾರೆ.

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಇಲಾಖೆ (ಆರ್‌ಸಿಎಚ್) ನೀಡಿರುವ ಮಾಹಿತಿಯಿದು. 2023ರ ಜನವರಿಯಿಂದ ನವೆಂಬರ್‌ವರೆಗಿನ ದತ್ತಾಂಶದ ಪ್ರಕಾರ, ರಾಜ್ಯದ ರಾಜಧಾನಿಯಲ್ಲೇ ಅಂದರೆ ಬೆಂಗಳೂರು ನಗರ ಜಿಲ್ಲೆಯಲ್ಲೇ ಅತೀ ಹೆಚ್ಚು - 2,815 ಬಾಲ ಗರ್ಭಿಣಿಯರಿದ್ದಾರೆ. ವಿಜಯಪುರ ಎರಡನೇ ಸ್ಥಾನದಲ್ಲಿದೆ (2,004). ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಉಡುಪಿ ಜಿಲ್ಲೆಯಲ್ಲಿ 56 ಬಾಲಗರ್ಭಿಣಿಯರು ಪತ್ತೆಯಾಗಿದ್ದಾರೆ. ನೆನಪಿರಲಿ, ಇವು ಅಧಿಕೃತವಾಗಿ ಬೆಳಕಿಗೆ ಬಂದಿರುವ ಪ್ರಕರಣಗಳು ಮಾತ್ರ.

**ಬಾಲ್ಯ ವಿವಾಹಕ್ಕೆ ಬ್ರೇಕ್ ಇಲ್ಲ:** ಬಾಲಕಿಯರು ಗರ್ಭಿಣಿಯರಾಗುತ್ತಿರುವುದಕ್ಕೆ ಬಾಲ್ಯ ವಿವಾಹವೇ ಪ್ರಮುಖ ಕಾರಣ ಎನ್ನುವುದು ಅಧಿಕಾರಿಗಳ ಅಂಬೋಣ. ಆದರೆ ಇದಕ್ಕೆ ಬ್ರೇಕ್ ಹಾಕುವಲ್ಲಿ ಸರಕಾರ, ಪೊಲೀಸ್ ಮತ್ತು ಸಮುದಾಯ ಸೋತಿವೆ. ಹಳ್ಳಿಯಿಂದ ದಿಲ್ಲಿವರೆಗೆ ಬಾಲ್ಯವಿವಾಹ ತಡೆಯುವ ಅಧಿಕಾರಿಗಳು, ಸಂಘ ಸಂಸ್ಥೆಗಳಿವೆ. ಆದರೂ ಬ್ರೇಕ್ ಬಿದ್ದಿಲ್ಲ. ಶಾಲೆಯ ಮುಖ್ಯಗುರು, ಗ್ರಾಮ ಆಡಳಿತ ಅಧಿಕಾರಿ, ಪಿಡಿಒ, ಬಾಲ್ಯವಿವಾಹ ನಿಷೇಧ ಅಧಿಕಾರಿಗಳು, ಬಾಲ್ಯವಿವಾಹ ತಡೆ ಕಾವಲು ಸಮಿತಿ, ಬಾಲ ರಕ್ಷಣಾ ಸಮಿತಿ, ಮಕ್ಕಳ ರಕ್ಷಣಾ ಅಧಿಕಾರಿ, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಬಾಲ್ಯ ವಿವಾಹ ತಡೆಗೆ ಆಡಳಿತದ ಒಂದು ದಂಡೇ ಇದೆ. ಆದರೂ ಬಾಲ್ಯ ವಿವಾಹಕ್ಕೆ ಬ್ರೇಕ್ ಬೀಳುತ್ತಿಲ್ಲ ಎನ್ನುವುದು ಕಳವಳಕಾರಿ ಸಂಗತಿ. ಮುಖ್ಯವಾಗಿ ಶಾಲೆಗಳಲ್ಲಿ ಡ್ರಾಪೌಟ್ ಆದ ಮಕ್ಕಳು ಎಲ್ಲಿದ್ದಾರೆ ಎನ್ನುವುದು ಪತ್ತೆ ಹಚ್ಚಿದರೆ ಬಾಲ್ಯ ವಿವಾಹಕ್ಕೆ ತಕ್ಕ ಮಟ್ಟಿಗೆ ಬ್ರೇಕ್ ಹಾಕಬಹುದು. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಕರ ಪಾತ್ರ ಹಿರಿದು ಎನ್ನುತ್ತಾರೆ ಅಧಿಕಾರಿಗಳು.




### ಅಪ್ರಾಪ್ತರ ಗರ್ಭಧಾರಣೆಗೆ ಕಾರಣ?

- ಬಾಲ್ಯ ವಿವಾಹ ಹೆಚ್ಚಾಗುತ್ತಿರುವುದು
- ಆಕ್ರಮ /ಕುತೂಹಲದ ದೈಹಿಕ ಸಂಪರ್ಕ
- ಲೈಂಗಿಕ ದೌರ್ಜನ್ಯ



ಬಾಲಕಿಯರು ಗರ್ಭಿಣಿಯರಾಗುತ್ತಿರುವುದನ್ನು ತಡೆಯಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿದ್ದು, ಸಮುದಾಯದ ಸಹಭಾಗಿತ್ವ ಇದ್ದರೆ ಇದು ಸಾಧ್ಯ.

**- ಡಾ. ಶರಣಪ್ಪ ಕ್ಯಾತನಾಳ್**
ಆರ್‌ಸಿಎಚ್ ಅಧಿಕಾರಿ, ಕಲಬುರಗಿ

### ಪೋಕ್ಸೊ ಎಫ್‌ಐಆರ್ ಇಲ್ಲ

ಬಾಲ್ಯ ವಿವಾಹ ನಿರಾತಂಕವಾಗಿ ನಡೆಯುತ್ತಿದ್ದು, ಪೋಕ್ಸೊ ಅಡಿ ಪ್ರಕರಣ ದಾಖಲಿಸುತ್ತಿಲ್ಲ. ಅಪ್ರಾಪ್ತೆ ಗರ್ಭಿಣಿಯಾದರೆ ಆರೋಗ್ಯ ಇಲಾಖೆ ಅಧಿಕಾರಿಗಳು ಪೊಲೀಸ್ ಠಾಣೆಗೆ ದೂರು ಕೊಡಬೇಕು. ತಾಯಿ ಕಾರ್ಡ್ ಕೊಡುವಾಗಲಾದರೂ ಎಚ್ಚೆತ್ತುಕೊಳ್ಳಬೇಕು. ಆದರೆ ಅದು ಆಗುತ್ತಿಲ್ಲ, ಹಾಗಾಗಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಆಗುತ್ತಿಲ್ಲ.

### ಜಿಲ್ಲಾವಾರು ಬಾಲ ಗರ್ಭಿಣಿಯರ ವಿವರ

| ಜಿಲ್ಲೆ | ಗರ್ಭಿಣಿ ಬಾಲಕಿಯರು |
|---|---|
| ಬಾಗಲಕೋಟೆ | 1193 |
| ಬಳ್ಳಾರಿ | 1896 |
| ಬೆಳಗಾವಿ | 2754 |
| ಬೆಂಗಳೂರು ಗ್ರಾ | 466 |
| ಬೆಂಗಳೂರು ನಗರ | 2815 |
| ಬೀದರ್ | 1143 |
| ಚಾಮರಾಜನಗರ | 363 |
| ಚಿಕ್ಕಬಳ್ಳಾಪುರ | 567 |
| ಚಿಕ್ಕಮಗಳೂರು | 435 |
| ಚಿತ್ರದುರ್ಗ | 1412 |
| ದಕ್ಷಿಣ ಕನ್ನಡ | 135 |
| ದಾವಣಗೆರೆ | 857 |
| ಧಾರವಾಡ | 489 |
| ಗದಗ | 303 |
| ಹಾಸನ | 859 |
| ಹಾವೇರಿ | 713 |
| ಕಲಬುರಗಿ | 1511 |
| ಕೊಡಗು | 270 |
| ಕೋಲಾರ | 869 |
| ಕೊಪ್ಪಳ | 571 |
| ಮಂಡ್ಯ | 846 |
| ಮೈಸೂರು | 1370 |
| ರಾಯಚೂರ | 1252 |
| ರಾಮನಗರ | 432 |
| ಶಿವಮೊಗ್ಗ | 596 |
| ತುಮಕೂರು | 1375 |
| ಉಡುಪಿ | 56 |
| ಉತ್ತರ ಕನ್ನಡ | 184 |
| ವಿಜಯಪುರ | 2004 |
| ಯಾದಗಿರಿ | 921 |



ಬಾಲ ಗರ್ಭಿಣಿಯರ ಸಂಖ್ಯೆ ತೀರಾ ಕಳವಳ ಉಂಟು ಮಾಡಿದೆ. ಇದು ಪ್ರಗತಿಪರ ಸಮಾಜಕ್ಕೆ ಬಹುದೊಡ್ಡ ಕಳಂಕ. ಮೊದಲು ಬಾಲ್ಯ ವಿವಾಹ ತಡೆಯಬೇಕು. ಎಲ್ಲ ಇಲಾಖೆಗಳು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು, ಸಾರ್ವಜನಿಕ ಸಹಭಾಗಿತ್ವ ಪಡೆದರೆ ಇದಕ್ಕೆ ಬ್ರೇಕ್ ಹಾಕಬಹುದು.

**- ಶಶಿಧರ ಕೋಸಂಬೆ,** ಸದಸ್ಯ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ



# ಜಡೆ ಹಾಕದ ವಿದ್ಯಾರ್ಥಿನಿ ತಲೆಗೂದಲಿಗೆ ಕತ್ತರಿ

ಪ್ರಜಾವಾಣಿ ವಾರ್ತೆ

Published 28 ಜುಲೈ 2024, 0:58 IST
Last Updated 28 ಜುಲೈ 2024, 0:58 IST

ಅಕ್ಷರ ಗಾತ್ರ ಅ ಅ ಅ



ಅತಿಥಿ ಶಿಕ್ಷಕಿ ಕತ್ತರಿಸಿರುವ ವಿದ್ಯಾರ್ಥಿನಿಯ ಕೂದಲು

**ಚನ್ನಪಟ್ಟಣ:** ಅರಳಾಳುಸಂದ್ರದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲೆಯ ವಿದ್ಯಾರ್ಥಿನಿ ಜಡೆ ಹಾಕಿಲ್ಲ ಎಂದು ಸಿಟ್ಟಿಗೆದ್ದ ಅತಿಥಿ ಶಿಕ್ಷಕಿಯೊಬ್ಬರು ವಿದ್ಯಾರ್ಥಿನಿಯ ತಲೆಗೂದಲು ಕತ್ತರಿಸಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ
ನಿಮ್ಮ ಜಿಲ್ಲೆ ಸುದ್ದಿ ಸಿನಿಮಾ ಜಗತ್ತು ಅಭಿಮತ

ವಿಷಯ ತಿಳಿಯುತ್ತಿದ್ದಂತೆಯೇ ಶಾಲೆಗೆ ಭೇಟಿ ನೀಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎನ್. ಮರಿಗೌಡ ಅವರು ಶಿಕ್ಷಕಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಘಟನೆ ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ಶಿಕ್ಷಕಿಯು ತನ್ನಿಂದ ತಪ್ಪಾಗಿದೆ ಎಂದು ವಿದ್ಯಾರ್ಥಿನಿಯ ಪೋಷಕರು ಮತ್ತು ಶಾಲಾ ಮೇಲ್ವಿಚಾರಣೆ ಮತ್ತು ಅಭಿವೃದ್ಧಿ ಸಮಿತಿಯ (ಎಸ್‌ಡಿಎಂಸಿ) ಕ್ಷಮೆ ಕೇಳಿದ್ದಾರೆ.

ಸೂಚನೆಯ ನಂತರವೂ ವಿದ್ಯಾರ್ಥಿನಿ ಜಡೆ ಹಾಕಿಕೊಂಡು ಬಂದಿಲ್ಲ ಎಂದು ಕೋಪಗೊಂಡ ಶಿಕ್ಷಕಿ, ಒಂಬತ್ತನೇ ತರಗತಿ ವಿದ್ಯಾರ್ಥಿನಿಯ ಸ್ವಲ್ಪ ತಲೆಗೂದಲು ಕತ್ತರಿಸಿದ್ದಾರೆ. ಈ ಘಟನೆಯ ನಂತರ ಮಂಕಾಗಿದ್ದ ವಿದ್ಯಾರ್ಥಿನಿಯಿಂದ ವಿಷಯ ತಿಳಿದುಕೊಂಡ ಪೋಷಕರು ಶನಿವಾರ ಶಾಲೆಗೆ ತೆರಳಿ ಶಿಕ್ಷಕಿ ಹಾಗೂ ಎಸ್‌ಡಿಎಂಸಿ ಸದಸ್ಯರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಪ್ರತಿದಿನ ಶಾಲೆಗೆ ಎರಡು ಜಡೆ ಹಾಕಿಕೊಂಡು ಬರುವಂತೆ ಎಲ್ಲ ವಿದ್ಯಾರ್ಥಿನಿಯರಿಗೆ ಸೂಚಿಸಲಾಗಿತ್ತು. ಆದರೂ, ಈ ವಿದ್ಯಾರ್ಥಿನಿ ಜಡೆ ಹಾಕಿಕೊಳ್ಳದೆ ಕೂದಲು ಹಾಗೆ ಬಿಟ್ಟುಕೊಂಡು ಬರುತ್ತಿದ್ದಳು. ಆಕೆಗೆ ಬುದ್ಧಿ ಕಲಿಸಲು ಸ್ವಲ್ಪ ತಲೆಗೂದಲು ಕತ್ತರಿಸಿದ್ದೇನೆಯೇ ಹೊರತು ಬೇರೆ ಯಾವ ದುರುದ್ದೇಶದಿಂದ ಅಲ್ಲ. ಇದರಿಂದ ಯಾರಿಗಾದರೂ ನೋವಾಗಿದ್ದಾರೆ ಕ್ಷಮೆ ಕೇಳುತ್ತೇನೆ’ ಎಂದು ಶಿಕ್ಷಕಿ ಸಮಜಾಯಿಷಿ ನೀಡಿದರು.

ಶಿಕ್ಷಕಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಪೋಷಕರು ಮತ್ತೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರಿಕೆ ನೀಡಿ ತೆರಳಿದರು. ಘಟನೆ ನಂತರ ಸಭೆ ನಡೆಸಿದ ಎಸ್‌ಡಿಎಂಸಿ ಸದಸ್ಯರು, ಶಾಲೆಗೆ ಇದೊಂದು ಕಪ್ಪುಚುಕ್ಕೆಯಾಗಿದ್ದು ವಿಷಯ ಬೆಳೆಸುವುದು ಬೇಡ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ
ನಿಮ್ಮ ಜಿಲ್ಲೆ ಸುದ್ದಿ ಸಿನಿಮಾ ಜಗತ್ತು ಅಭಿಮತ

ಒಂದು ವರ್ಷದಿಂದ ಅತಿಥಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವ ಪಿಯು ಕಾಲೇಜಿನ ಪ್ರಭಾರ ಪಾಂಶುಪಾಲರ ಪತ್ನಿ, ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಆರಿಸಿಕೊಂಡ ಮಾರ್ಗ ದಿಗ್ಭ್ರಮೆ ಮೂಡಿಸಿದೆ. ಇಂಥ ಘಟನೆಗಳು ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಮಕ್ಕಳೊಂದಿಗೆ ಹೇಗೆ ವರ್ತಿಸಬೇಕು ಎಂದು ಸಂಬಂಧಿಸಿದವರು ಶಿಕ್ಷಕಿಗೆ ಬುದ್ಧಿ ಹೇಳುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

**ವಿದ್ಯಾರ್ಥಿನಿ ತಲೆಗೂದಲು ಕತ್ತರಿಸಿರುವ ಘಟನೆಗೆ ಸಂಬಂಧಿಸಿದಂತೆ ಕೆಪಿಎಸ್ ಶಾಲೆಯ ಅತಿಥಿ ಶಿಕ್ಷಕಿಯನ್ನು ಕೆಲಸದಿಂದ ತೆಗೆಯಲಾಗುವುದು. ಜೊತೆಗೆ ಮುಖ್ಯ ಶಿಕ್ಷಕರನ್ನು ಸಹ ಅಮಾನತು ಮಾಡಲಾಗುವುದು**

**– ವಿ.ಸಿ. ಬಸವರಾಜೇಗೌಡ ಉಪ ನಿರ್ದೇಶಕ ಶಾಲಾ ಶಿಕ್ಷಣ ಇಲಾಖೆ**

# ಹಾಸ್ಟೆಲ್ ವಿದ್ಯಾರ್ಥಿಗಳು ಅಸ್ವಸ್ಥ ನಿಲಯ ಮೇಲ್ವಿಚಾರಕಿ ಅಮಾನತು

ಚಿತ್ರದುರ್ಗ: ತಾಲ್ಲೂಕಿನ ಅನ್ನೇಹಾಳ್, ಜಂಪಯ್ಯನ ಹಟ್ಟಿಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಊಟ ಸೇವಿಸಿ ಅಸ್ವಸ್ಥಗೊಂಡ ಘಟನೆಗೆ ಸಂಬಂಧಿಸಿದಂತೆ ವಿದ್ಯಾರ್ಥಿನಿಲಯದ ಮೇಲ್ವಿಚಾರಕರಾದ (ಜೂನಿಯರ್ ವಾರ್ಡನ್) ಮರಾಠಿ ಲಕ್ಷ್ಮೀದೇವಿ ಅವರನ್ನು ಅಮಾನತುಗೊಳಿಸಿ ಜಿ.ಪಂ. ಸಿಇಒ ಎಸ್.ಜೆ. ಸೋಮಶೇಖರ್ ಆದೇಶಿಸಿದ್ದಾರೆ.

ಜುಲೈ 12ರಂದು ರಾತ್ರಿ ಊಟ ಸೇವನೆ ಬಳಿಕ ಸುಮಾರು 8 ರಿಂದ 9 ಮಕ್ಕಳಿಗೆ ಎದೆ ಉರಿ, ಹೊಟ್ಟೆಯಲ್ಲಿ ಉರಿ ಹಾಗೂ ವಾಂತಿ ಆಗಿ ಅಸ್ವಸ್ಥಗೊಂಡಿದ್ದರು. ಬಳಿಕ ಇವರಿಗೆ ಸಮೀಪದ ಗೊಡಬನಾಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಂದ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಚಿಕಿತ್ಸೆ ಬಳಿಕ ಮಕ್ಕಳು ಗುಣಮುಖರಾಗಿದ್ದರು. ಆರೋಗ್ಯ ಸುರಕ್ಷತಾ ಅಧಿಕಾರಿಗಳು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಕ್ಕಳಿಗೆ ಶುದ್ಧ ಕುಡಿಯುವ ನೀರು, ಕಾಯಿಸಿ ಆರಿಸಿದ ನೀರನ್ನು ಕೊಡಬೇಕು, ನಿಲಯದಲ್ಲಿ ಕೆಟ್ಟಿರುವ ವಾಟರ್ ಪ್ಯೂರಿಫೈಯರ್ ದುರಸ್ತಿಪಡಿಸಲು ಸೂಚನೆ ನೀಡಿದ್ದರು. ಘಟನೆ ಬಗ್ಗೆ ನಿಲಯದ ವಾರ್ಡನ್‌ರವರಿಗೆ ಸಮಾಜಾಯಿಷಿ ನೀಡುವಂತೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿತ್ತು.

ನಂತರ ಪುನಃ ಕಳೆದ ಆ. 4ರಂದು ಕೂಡ ಐದು ಮಕ್ಕಳು ರಾತ್ರಿ ಊಟ ಸೇವಿಸಿ ಅಸ್ವಸ್ಥಗೊಂಡಿದ್ದರಿಂದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಗುಣಮುಖರಾಗಿರುತ್ತಾರೆ. ಹಾಸ್ಟೆಲ್‌ನಲ್ಲಿ ಈ ರೀತಿ ಪದೇ ಪದೇ ಮಕ್ಕಳು ಊಟ ಸೇವನೆಯಿಂದ ಅಸ್ವಸ್ಥಗೊಂಡ ಪ್ರಕರಣ ನಡೆದರೂ, ಇಲಾಖಾ ಮೇಲಧಿಕಾರಿಗಳಿಗೆ ಮಾಹಿತಿ ನೀಡಿಲ್ಲ, ಮಕ್ಕಳ ಊಟೋಪಚಾರದ ವ್ಯವಸ್ಥೆಯಲ್ಲಿ ಗಮನಹರಿಸದೆ ಕರ್ತವ್ಯ ನಿರ್ಲಕ್ಷ್ಯ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಲಕ್ಷ್ಮೀದೇವಿ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ವರದಿ ಸಲ್ಲಿಸಿದ್ದರು.

ಅಮ್ಮನಲ್ಲೂರು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಘಟನೆ

# ದೋಸೆ ತಿಂದು 18 ಮಕ್ಕಳು ಅಸ್ವಸ್ಥ

ಪ್ರಜಾವಾಣಿ ವಾರ್ತೆ

**ವೇಮಗಲ್ (ಕೋಲಾರ):** ವೇಮಗಲ್ ಹೋಬಳಿ ಅಮ್ಮನಲ್ಲೂರು ಗ್ರಾಮದ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಶುಕ್ರವಾರ ಬೆಳಿಗ್ಗೆ ತಿಂಡಿ ತಿಂದಿದ್ದ 18 ಮಕ್ಕಳು ಅಸ್ವಸ್ಥಗೊಂಡಿದ್ದಾರೆ.

ದೋಸೆ ಚಟ್ನಿ ತಿಂದ ಐವರು ವಾಂತಿ ಮಾಡಿಕೊಂಡಿದ್ದಾರೆ. ಇನ್ನು ಕೆಲವರು ಹೊಟ್ಟೆ ನೋವಿನಿಂದ ಬಳಲಿದ್ದಾರೆ. ವಾಂತಿ ಮಾಡಿಕೊಂಡ ಐವರನ್ನು ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆ ಹಾಗೂ ಉಳಿದ 13 ಮಂದಿಯನ್ನು ಅಮ್ಮನಲ್ಲೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

‘ಎಲ್ಲ ಮಕ್ಕಳು ಚೇತರಿಸಿಕೊಳ್ಳುತ್ತಿದ್ದು ಯಾವುದೇ ಅಪಾಯ ಇಲ್ಲ’ ಎಂದು ಮದ್ದೇರಿ ಪ್ರಾಥಮಿಕ ಅರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಅಕ್ಷಯ್ ಕುಮಾರ್ ಹಾಗೂ ಅಮ್ಮನಲ್ಲೂರು ಆಸ್ಪತ್ರೆ ವೈದ್ಯಾಧಿಕಾರಿ ಡಾ.ನಾಗೇಶ್ ತಿಳಿಸಿದ್ದಾರೆ.

ಇವರೆಲ್ಲ ಶ್ರೀಚೌಡೇಶ್ವರಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗೆ ಸೇರಿದ 5ರಿಂದ 10ನೇ ತರಗತಿ ವಿದ್ಯಾರ್ಥಿಗಳು. ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಓದುತ್ತಿದ್ದಾರೆ.

‘ಐದು ಮಂದಿಗೆ ವಾಂತಿಯಾಗಿದೆ. ಉಳಿದವರು ಹೊಟ್ಟೆ ನೋವು, ಸುಸ್ತಾಗುತ್ತಿದೆ ಎಂದು ಹೇಳಿದ್ದರಿಂದ ಆಸ್ಪತ್ರೆಗೆ ದಾಖಲಿಸಿದ್ದೇವೆ. ಹಾಸ್ಟೆಲ್‌ನಲ್ಲಿ ಒಟ್ಟು 54 ಮಕ್ಕಳು ಇದ್ದಾರೆ. ಬೇರೆ ಬೇರೆ ಶಾಲೆಗಳಿಗೆ ಹೋಗುತ್ತಾರೆ. ಒಬ್ಬ ವಾರ್ಡನ್, ಒಬ್ಬ ಅಡುಗೆ ಸಿಬ್ಬಂದಿ ಹಾಗೂ ಇಬ್ಬರು ಸಹಾಯಕರು ಇದ್ದಾರೆ. ಘಟನೆ ಗೊತ್ತಾಗುತ್ತಿದ್ದಂತೆಯೇ ಹಾಸ್ಟೆಲ್, ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದೇನೆ’ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸನ್ ತಿಳಿಸಿದರು.

ಕೋಲಾರ ತಹಶೀಲ್ದಾರ್ ಡಾ.ನಯನಾ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಚನ್ನಬಸಪ್ಪ ಹಾಗೂ ವೇಮಗಲ್ ಪೊಲೀಸರು ಭೇಟಿ ನೀಡಿ ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಿದರು.



ಅಸ್ವಸ್ಥರಾದ ವಿದ್ಯಾರ್ಥಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ

**ಮುಖ್ಯಾಂಶಗಳು**

- **ವಾಂತಿ, ಹೊಟ್ಟೆ ನೋವಿನಿಂದ ಬಳಲಿದ ವಿದ್ಯಾರ್ಥಿಗಳು**
- **ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆ, ಅಮ್ಮನಲ್ಲೂರಿನ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ**

**ವಿದ್ಯಾರ್ಥಿಗಳು ಈಗ ಚೇತರಿಸಿಕೊಳ್ಳುತ್ತಿದ್ದಾರೆ. ಆಹಾರದ ಮಾದರಿ ಸಂಗ್ರಹಿಸಿದ್ದು, ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ**

**ಆರ್.ಶ್ರೀನಿವಾಸನ್,** ಜಂಟಿ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ, ಕೋಲಾರ

**ದೋಸೆ ಚಟ್ನಿ ತಿಂದು ಶಾಲೆಗೆ ಹೊರಡಲು ಶೂ ಹಾಕಿಕೊಳ್ಳುತ್ತಿದ್ದಾಗ ಸುಸ್ತಾಗಿ ವಾಂತಿಯಾಯಿತು. ಎರಡು ದಿನದ ಹಿಂದಿನ ಅನ್ನವನ್ನು ದೋಸೆ ಹಿಟ್ಟಿಗೆ ಬೆರೆಸಿದ್ದಾರೆ**

**ಅಸ್ವಸ್ಥ ವಿದ್ಯಾರ್ಥಿಗಳು**

# ಹಾಸ್ಟೆಲ್ ಸಮಸ್ಯೆ: ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಹನುಮಸಾಗರ: ಸಮೀಪದ ಹೂಲಗೇರಾ ಗ್ರಾಮದ ದೇವರಾಜ ಅರಸು ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಬ್ಬಂದಿಗೆ ಕಠಿಣ ಕ್ರಮದ ಎಚ್ಚರಿಕೆ ನೀಡಿದರು.

ವಸತಿ ನಿಲಯಕ್ಕೆ ಭೇಟಿ ನೀಡಿದ ನ್ಯಾಯಾಧೀಶ ಮಹಾಂತೇಶ ದರಗದ ಮತ್ತು ಕಾನೂನು ಸೇವಾ ಪ್ರಾಧಿಕಾರದ ತಂಡದ ಮುಂದೆ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು. 'ಬೆಳಗಿನ ಉಪಾಹಾರಕ್ಕೆ ನಿತ್ಯ ಉಪ್ಪಿಟ್ಟು ಮಾತ್ರ, ಅದು ಕೂಡ ಹೊಟ್ಟೆ ತುಂಬ ನೀಡುವುದಿಲ್ಲ. ಮಧ್ಯಾಹ್ನ ಕೆಲವೊಮ್ಮೆ ಊಟವೇ ಇಲ್ಲ. ಚಳಿಯ ದಿನಗಳಲ್ಲೂ ತಣ್ಣೀರು ಸ್ನಾನ, ಹಾಸಿಗೆಗಳ ಕೊರತೆ, ಓದುವ ಸ್ಥಳದ ಕೊರತೆ ಇದೆ' ಎಂದು ಅಳಲು ವ್ಯಕ್ತವಾಯಿತು. ಸಮಸ್ಯೆ ಹೇಳಿದಾಗ ಹೊರಗಿನವರಿಂದ ಬೆದರಿಕೆ ಹಾಕಿಸುತ್ತಾರೆ ಎಂದು ಮಕ್ಕಳು ದೂರಿದರು.

**ನ್ಯಾಯಾಧೀಶರ ಆಕ್ರೋಶ:** 'ಮಕ್ಕಳು ದೇವರ ಸಮಾನ. ಅವರ ಸಮಸ್ಯೆಗಳನ್ನು ನಿರ್ಲಕ್ಷ್ಯ ಮಾಡುವುದೇನು? ಜೈಲಿನಲ್ಲಿಯೂ ಹೊಟ್ಟೆ ತುಂಬಾ ಊಟ ನೀಡುತ್ತಾರೆ. ಸರ್ಕಾರ ಮಕ್ಕಳಿಗೆ ನೀಡುವ ಸೌಲಭ್ಯಗಳನ್ನು ತಲುಪಿಸಲು ನಿರ್ಲಕ್ಷ್ಯಮಾಡಿದರೆ ಗಂಭೀರ ಕಾನೂನು ಕ್ರಮ ಕೈಗೊಳ್ಳಲಾಗುವುದು: ಎಂದು ಮಹಾಂತೇಶ ಎಚ್ಚರಿಕೆ ನೀಡಿದರು.

ಮಕ್ಕಳಿಗೆ ಸಮರ್ಪಕ ಆಹಾರ ಮತ್ತು ಓದುವ ಸ್ಥಳ ಒದಗಿಸಲು, ಹಾಸ್ಟೆಲ್ ಆವರಣಕ್ಕೆ ಗೇಟ್ ಅಳವಡಿಸಿ, ಹೊರಗಿನವರ ಪ್ರವೇಶವನ್ನು ನಿರ್ಬಂಧಿಸುವಂತೆ ಸೂಚಿಸಲಾಯಿತು. ಶೌಚಾಲಯ ಮತ್ತು ಇತರ ಮೂಲ ಸೌಕರ್ಯಗಳನ್ನು ತಕ್ಷಣ ದುರಸ್ತಿಪಡಿಸಲು ಆದೇಶಿಸಿದರು.

**ಸಿಬ್ಬಂದಿ ಮತ್ತು ಪೊಲೀಸ್ ಇಲಾಖೆಗಳಿಗೆ ಸೂಚನೆ:** ನಿಲಯದ ಸಿಬ್ಬಂದಿಯ ವರ್ತನೆ ಮೇಲೆ ನಿಗಾ ಇಡಲು ಮತ್ತು ಮಕ್ಕಳ ಮೇಲೆ ದೌರ್ಜನ್ಯ ಮಾಡುವವರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದರು.

ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಎಲ್. ಪೂಜೇರಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮಹಾಂತೇಶ ಚೌಳಗಿ ಹಾಜರಿದ್ದರು.

ರಾಮ್ ಎಲ್. ಅರಸಿದ್ದಿ, ಸಿಪಿಐ

ಪ್ರಜಾವಾಣಿ 7-12-2024

120 ಹಂದಿ ಕಳವು

## ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ 5 ಕಡತಗಳು ಹಾಗೂ 5 ರಿಜಿಸ್ಟರ್ ಅಥವಾ ನಡಾವಳಿ ಪುಸ್ತಕಗಳು.

1. ಶಾಲಾ ಮಕ್ಕಳ ರಕ್ಷಣಾ ನೀತಿ ರಚಿಸಿ ಅನುಮೋದನೆ ಪಡೆದ ಕಡತ
2. ಮಕ್ಕಳ ಬದ್ದತಾ ಸ್ವೀಕಾರ ಪತ್ರದ ಕಡತ
3. ಸಿಬ್ಬಂದಿ ಬದ್ದತಾ ಸ್ವೀಕಾರ ಪತ್ರದ ಕಡತ
4. ಮಕ್ಕಳ ಹಕ್ಕುಗಳ ಕ್ಲಬ್ ರಚನೆ ಕಡತ
5. ಸಲಹಾ ಪಟ್ಟಿಗೆ ಮಕ್ಕಳ ಚೀಟಿಗಳ ಕಡತ

## 5 ರಿಜಿಸ್ಟರ್‌ಗಳು

1. ಮಕ್ಕಳ ರಕ್ಷಣಾ ಸಮಿತಿಯ ಸಭೆ ನಡಾವಳಿ ಪುಸ್ತಕ
2. ಮಕ್ಕಳ ಹಕ್ಕುಗಳ ಕ್ಲಬ್ ಸಭೆ ನಡಾವಳಿ ಪುಸ್ತಕ
3. ಮಕ್ಕಳ ಸಲಹಾ ಪೆಟ್ಟಿಗೆಗೆ ಬಂದ ಸಲಹೆಗಳ ಪರಿಹಾರ ನಡಾವಳಿ
4. ಮಕ್ಕಳ ಹಕ್ಕುಗಳ ಜಾಗೃತಿ.ಅರಿವು ಕಾರ್ಯಕ್ರಮಗಳ ವರದಿ ಪುಸ್ತಕ.
5. ಪೋಷಕರ ಸಭೆ ನಡಾವಾಳಿ ಪುಸ್ತಕ.

ಸಮಗ್ರ ಶಿಕ್ಷಣ ಕರ್ನಾಟಕ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ




## ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ):

18 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಸಂಕಷ್ಟ, ತೊಂದರೆ, ದೈಹಿಕ/ಮಾನಸಿಕ ಶಿಕ್ಷೆ, ಹಿಂಸೆ/ನಿರ್ಲಕ್ಷ್ಯ/ತಾರತಮ್ಯ ಹಾಗೂ ಲೈಂಗಿಕ ಆಧಾರಿತ ಯಾವುದೇ ರೀತಿಯ ಶೋಷಣೆಗೆ ಒಳಗಾದರೆ ತಕ್ಷಣ

**ಚೈಲ್ಡ್ ಲೈನ್‌ಗೆ ಕರೆ ಮಾಡಿ: 1098 ಅಥವಾ 112.**

ಯಾವುದೇ ಮಕ್ಕಳು ಓಡಿಹೋದರೆ, ಕಳ್ಳ ಸಾಗಾಣಿಕೆಗೆ ಒಳಪಟ್ಟರೆ, ದೌರ್ಜನ್ಯಕ್ಕೊಳಗಾದರೆ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿಯಲ್ಲಿದ್ದರೆ, ಬಾಲ್ಯ ವಿವಾಹಕ್ಕೆ ಬಲಿಯಾದರೆ, ಭಿಕ್ಷಾಟನೆಯಲ್ಲಿದ್ದರೆ, ಬೀದಿಯಲ್ಲಿದ್ದರೆ, ನಿರಂತರ ಶಾಲೆಗೆ ಗೈರು ಹಾಜರಾದರೆ, ಯಾವುದೇ ವಿಪತ್ತಿಗೆ ಒಳಗಾದರೆ ಹಾಗೂ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದ್ದರೆ, ಕಾನೂನು ಸಂಘರ್ಷಕ್ಕೆ ಒಳಗಾದರೆ ಹಾಗೂ ಯಾವುದೇ ರೀತಿಯ ವ್ಯಸನಕ್ಕೆ ಒಳಗಾದರೆ ಅವರ ಸಂರಕ್ಷಣೆಗಾಗಿ

**ತಕ್ಷಣ ಕರೆ ಮಾಡಿ; 1098 ಅಥವಾ 112**

(ಈ ದೂರವಾಣಿ ಉಚಿತ ಹಾಗೂ ದೂರು ನೀಡಿದವರ ವಿವರ ಖಂಡಿತ ಬಹಿರಂಗವಾಗುವುದಿಲ್ಲ, ಗೌಪ್ಯತೆಯನ್ನು ಕಾಪಾಡಲಾಗುವುದು. ಮಕ್ಕಳೂ ಸೇರಿದಂತೆ ಈ ಸಂಸ್ಥೆಗೆ ಯಾವುದೇ ನಾಗರಿಕರು ಕರೆ ಮಾಡಬಹುದು)

**ಈ ರೀತಿ ನಿಮ್ಮ ಶಾಲೆಯಲ್ಲಿ/ ವಸತಿ ನಿಲಯದಲ್ಲಿ ಬೋರ್ಡ್ ಇದೆಯಾ?**

# ವಿವಿದ ಇಲಾಖೆಗಳ 5 ಸ, 1 ಭಾ

## ಸಹಕಾರ, ಸಹಯೋಗ, ಸಹಭಾಗಿತ್ವ, ಸಮನ್ವಯತೆ ಸಂಯೋಜನೆ. ಭಾಗವಹಿಸುವಿಕೆ.

1. ಮಹಿಳೆ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ.
2. ಶಿಕ್ಷಣ ಇಲಾಖೆ
3. ಪೊಲೀಸ್ ಇಲಾಖೆ
4. ಕರ್ನಾಟಕ ನ್ಯಾಯಾಂಗ ಸೇವೆಗಳ ಪ್ರಾಧಿಕಾರ
5. ಪಂಚಾಯತ್ ರಾಜ್ ಸಂಸ್ಥೆಗಳು (ಗ್ರಾಮ ಪಂಚಾಯತಿಗಳು ಮತ್ತು ವಾರ್ಡ್‌ಗಳು ಸೇರಿದಂತೆ)
6. ಸಮಾಜ ಕಲ್ಯಾಣ, ಬುಡಕಟ್ಟು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ.
7. ಕಾರ್ಮಿಕ ಇಲಾಖೆ
8. ಜಿಲ್ಲಾ ಆಡಳಿತ
9. ಸಾರಿಗೆ ಇಲಾಖೆ
10. ವಾರ್ತಾ ಇಲಾಖೆ



# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ: ಅಧ್ಯಾಯಗಳು

1. ಪರಿಚಯ
2. ರಾಜ್ಯದ ದೃಷ್ಟಿಕೋನ
3. ರಾಜ್ಯದ ಧ್ಯೇಯ
4. ಪ್ರಮುಖ ಸವಾಲುಗಳು
5. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ತತ್ವಗಳು
6. ಪ್ರಮುಖ ಉದ್ದೇಶಗಳು
7. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ವ್ಯಾಪ್ತಿ
8. ಮಕ್ಕಳ ರಕ್ಷಣೆಗಾಗಿ ನೀತಿಯ ಚೌಕಟ್ಟು
9. ಮೇಲುಸ್ತುವಾರಿ ಮತ್ತು ಮೌಲ್ಯ ಮಾಪನ
10. ಸಂಪನ್ಮೂಲ ಒದಗಿಸುವುದು ಮತ್ತು ಬಳಕೆ
11. ಹೊಣೆಗಾರಿಕೆ ಮತ್ತು ಪಾರದರ್ಶಕತೆ
12. ನೀತಿಯ ಪರಾಮರ್ಶೆ
13. ಅನುಸರಣೆ

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ: ಪರಿಚಯ

- ಕರ್ನಾಟಕ ರಾಜ್ಯವು 2016ರಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೊಳಿಸಿತು, ಅದರ ಪರಾಮರ್ಶೆ ಹಾಗೂ ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಸಂಖ್ಯೆ 10208/2018ರ ತನ್ನ ಆದೇಶ ದಿನಾಂಕ 22/07/2020ರ ನಿರ್ದೇಶನದಂತೆ **ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಪರಿಷ್ಕರಿಸಿ ದಿನಾಂಕ 14.12.2023ರಲ್ಲಿ ಜಾರಿಗೊಳಿಸಲಾಯಿತು**.
- **18 ವರ್ಷದ ಎಲ್ಲಾ ಮಕ್ಕಳಿಗಾಗಿ** ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016ನ್ನು ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ ರಕ್ಷಣೆ) ಕಾಯ್ದೆ – 2015 ತಿದ್ದುಪಡಿ 2021 ಹಾಗೂ ಸಂಬಂಧಿಸಿದ ಇತರೇ ಕಾನೂನುಗಳಿಗೆ ಪೂರಕವಾಗಿ ಪರಿಷ್ಕರಿಸಲಾಗಿದೆ.
- ಈ ನೀತಿಯು **ಕರ್ನಾಟಕದಲ್ಲಿ ಮಕ್ಕಳ ರಕ್ಷಣೆಯ ಅಗತ್ಯಗಳಿಗೆ ಎಲ್ಲಾ ಸಮಯದಲ್ಲೂ ಪ್ರಸ್ತುತವಾಗಿದೆ** ಎಂದು ಖಚಿತಪಡಿಸಿಕೊಳ್ಳಲು ಕಾಲಕಾಲಕ್ಕೆ ಪರಿಶೀಲಿಸಲಾಗುವುದು.
- ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಶಿಕ್ಷಣ ಇಲಾಖೆ, ಪೊಲೀಸ್, ಸಾಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಜಿಲ್ಲಾಡಳಿತಗಳು ಮತ್ತು ಸಂಬಂಧಿಸಿದ **ಎಲ್ಲಾ ಇಲಾಖೆಗಳು ಮತ್ತು ಸಂಸ್ಥೆಗಳು ಅಳವಡಿಸಿಕೊಳ್ಳುವುದು ಮತ್ತು ಅನುಷ್ಠಾನಗೊಳಿಸುವುದು**.

# ರಾಜ್ಯದ ದೃಷ್ಟಿಕೋನ

- ಎಲ್ಲಾ **ಮಕ್ಕಳ ಎಲ್ಲಾ ಹಕ್ಕುಗಳನ್ನು ಗುರುತಿಸುವುದು ಮತ್ತು ಎತ್ತಿಹಿಡಿಯುವುದರಿಂದ ದೇಶದ ಅಭಿವೃದ್ಧಿ ಸಾಧ್ಯ** ಎಂದು ಕರ್ನಾಟಕ ಸರ್ಕಾರವು ನಂಬುತ್ತದೆ.
- **ಹಕ್ಕು ಆಧಾರಿತ ಪರಿಕಲ್ಪನೆಯೊಂದಿಗೆ ಮಕ್ಕಳ ರಕ್ಷಣೆಗಾಗಿ ರಾಜ್ಯವು ಬದ್ಧವಾಗಿದೆ** ಮತ್ತು ಮಕ್ಕಳ ಭಾಗವಹಿಸುವ ಹಕ್ಕನ್ನೂ ಒಳಗೊಂಡಂತೆ ಅವರ ಎಲ್ಲಾ ಹಕ್ಕುಗಳು, ಸುರಕ್ಷತೆ ಮತ್ತು ಭದ್ರತೆಯನ್ನು ಕಾನೂನಿನ ಚೌಕಟ್ಟಿನೊಳಗೆ ಉತ್ತೇಜಿಸುತ್ತದೆ.
- ರಾಜ್ಯದಲ್ಲಿರುವ ಪ್ರತೀ ಮಗುವೂ ಅವನ/ಅವಳ ಲಿಂಗ, ಪೌರತ್ವ, ಧರ್ಮ, ಜಾತಿ, ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಬೌಗೋಳಿಕ ಹಿನ್ನಲೆಯನ್ನು ಗಣನೆಗೆ ತೆಗೆದುಕೊಳ್ಳದೇ **ಹಿಂಸೆ, ಶೋಷಣೆ, ನಿರ್ಲಕ್ಷ್ಯಗಳಿಂದ ರಕ್ಷಣೆ ಪಡೆಯುವುದು ಮತ್ತು ಮಕ್ಕಳ ರಕ್ಷಣಾ ಸೇವೆಗಳು** ವಿಶೇಷವಾಗಿ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಭದ್ರತೆ ಮತ್ತು ನ್ಯಾಯ ಮುಂತಾದ ಸಾಮಾಜಿಕ ಕ್ಷೇತ್ರಗಳು ಅವರಿಗೆ ತಲುಪುವಂತೆ/ಸಿಗುವಂತೆ ಮಾಡುವುದು.



- ಕರ್ನಾಟಕ ಸರ್ಕಾರವು **ಎಲ್ಲಾ ಮಕ್ಕಳು ಸಮಾನತೆ, ಘನತೆ, ಭದ್ರತೆ ಮತ್ತು ಸ್ವತಂತ್ರ್ಯದೊಂದಿಗೆ ಬದುಕಲು ಮತ್ತು ಬೆಳೆಯಲು, ಅವರ ಹಕ್ಕುಗಳ ರಕ್ಷಣೆಗಾಗಿ ಮಕ್ಕಳ ಕೇಂದ್ರಿತ ಶಾಸನ, ನೀತಿ, ಸಂಸ್ಥೆ ಮತ್ತು ಕಾರ್ಯವಿಧಾನಗಳನ್ನು ರೂಪಿಸಿ** ಅವಗಳನ್ನು ಅನುಷ್ಠಾನಗೊಳಿಸುತದೆ. ಆ ಮೂಲಕ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶದೊಂದಿಗೆ ಜೀವಿಸುವಂತೆ, ಯಾವುದೇ ಪದ್ಧತಿ, ಸಂಪ್ರದಾಯ, ಸಾಂಸ್ಕೃತಿಕ ಅಥವಾ ಧಾರ್ಮಿಕ ಆಚರಣೆಗಳು ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುವುದನ್ನು ಮತ್ತು ನಿರ್ಬಂಧಿಸುವುದನ್ನು ತಡೆಯುತ್ತದೆ.

# ರಾಜ್ಯದ ಧ್ಯೇಯ

- **ಮಕ್ಕಳ ಕಾನೂನು ಬದ್ದ ಹಕ್ಕುಗಳ ಸಂರಕ್ಷಣೆಗೆ ರಾಜ್ಯವು ಬದ್ದವಾಗಿದೆ**. ಅಪಾಯದ ಅಂಚಿನಲ್ಲಿರುವ ಮಕ್ಕಳು, ಹೆಣ್ಣು ಮಕ್ಕಳು, ಲೈಂಗಿಕ ಅಲ್ಪಸಂಖ್ಯಾತ ಮಕ್ಕಳು, ವಿಶೇಷ ಚೇತನ ಮಕ್ಕಳು, ಅಲ್ಪಸಂಖ್ಯಾತ ಮಕ್ಕಳು, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು, ವಲಸೆ ಮಕ್ಕಳು, ನೈಸರ್ಗಿಕ ವಿಕೋಪಗಳಿಗೆ ಮತ್ತು ಮಾರಕ ರೋಗಗಳಿಗೆ ಬಾಧಿತರಾದ ಮಕ್ಕಳ, ಮಂತಾದ ಮಕ್ಕಳ ಬಗ್ಗೆ ವಿಶೇಷ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.
- **ಮಕ್ಕಳು ತಮ್ಮ ಅಭಿಪ್ರಾಯ/ಧ್ವನಿಯನ್ನು ವ್ಯಕ್ತಪಡಿಸಲು ಸೂಕ್ತ ವ್ಯವಸ್ಥೆಗಳನ್ನು ರಾಜ್ಯವು ಕಲ್ಪಿಸುತ್ತದೆ**. ಮಕ್ಕಳು ಮತ್ತು ವಯಸ್ಕರ ನಡುವೆ ಸಂಹನವನ್ನು ಉತ್ತೇಜಿಸಲು ಕ್ರಮ ಕೈಗೊಳ್ಳುತ್ತದೆ.
- **ಮಕ್ಕಳ ರಕ್ಷಣೆಗಾಗಿ ಕಾನೂನು/ನೀತಿ ಸುಧಾರಣಾ ಕ್ರಮಗಳನ್ನು ಕೈಗೆತ್ತಿಕೊಳ್ಳುತ್ತದೆ** ಮತ್ತು ಕೌಶಲ್ಯ ಅಭಿವೃದ್ಧಿ, ಯೋಜನೆ, ಆಯವ್ಯಯ, ಮೇಲುಸ್ತುವಾರಿಗಳಿಗಾಗಿ ಆಧುನಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸುತ್ತದೆ.
- **ಯಾವುದೇ ಮಕ್ಕಳು ಯಾವುದೇ ರೀತಿಯ ದೈಹಿಕ, ಮಾನಸಿಕ, ದೌರ್ಜನ್ಯ, ಹಿಂಸೆ, ಶೋಷಣೆ, ನಿರ್ಲಕ್ಷ್ಯಕ್ಕೆ ಒಳಗಾಗದಂತೆ ತಡೆಗಟ್ಟಲು ಮಕ್ಕಳ ರಕ್ಷಣಾ ನೀತಿಯ ಮೂಲಕ ರಾಜ್ಯವು ಕ್ರಮ ಕೈಗೊಳ್ಳುತ್ತದೆ.** ಈ ಹಿನ್ನೆಲೆಯಲ್ಲಿ:-
  - **ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿ ಪ್ರಸ್ತುತವಿರುವ ಸವಾಲುಗಳನ್ನು ಗುರುತಿಸಿ ನಿವಾರಿಸುವುದು.**
  - **ಸಾಂಸ್ಥಿಕ ಮತ್ತು ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸುವುದು.**
  - **ಇಲಾಖೆಗಳು, ಸಂಸ್ಥೆಗಳು, ಮತ್ತು ಬಹುಸ್ಥರ ವ್ಯವಸ್ಥೆಗಳ ನಡುವೆ ಸಹಭಾಗಿತ್ವವನ್ನು ಹೆಚ್ಚಿಸುವುದು.**

# ಪ್ರಮುಖ ಸವಾಲುಗಳು

- ಮಕ್ಕಳ ರಕ್ಷಣಾ ವ್ಯವಸ್ಥೆಗಳು, ವಿವಿಧ ಭಾಗೀದಾರರ ಪಾತ್ರ, ಅಂತರಾಷ್ಟ್ರೀಯ ಒಪ್ಪಂದಗಳು ಇವುಗಳ ಬಗ್ಗೆ ಜ್ಞಾನದ ಕೊರತೆ.
- ಮನೆ ಮತ್ತು ಅದರ ಸುತ್ತಮುತ್ತ ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಮಾಹಿತಿಯ ಕೊರತೆ.
- ಮಕ್ಕಳ ವಿವಿಧ ಅವಶ್ಯಕತೆಗಳಿಗೆ ತಕ್ಕಂತೆ ಮಕ್ಕಳ ರಕ್ಷಣೆಯನ್ನು ಮಾಡಬೇಕಾಗಿದೆ ಎನ್ನುವುದನ್ನು ಗುರುತಿಸುವಲ್ಲಿ ವಿಫಲತೆ.
- ಮಕ್ಕಳ ಮೇಲೆ ಒದಗುವ ಅಪಾಯಗಳನ್ನು ಎದುರಿಸಲು ತಯಾರಿ ಇಲ್ಲದೇ ಇರುವುದು.
- ದೊಡ್ಡ ಮಟ್ಟಿನ ವಲಸೆ/ಗುಳೆ, ಪ್ರಾಕೃತಿಕ/ಮನುಷ್ಯ ನಿರ್ಮಿತ ವಿಕೋಪಗಳಿಂದಾಗಿ ಮಕ್ಕಳು ಮತ್ತು ಅವರ ಪರಿಸರದ ಸ್ಥಳಾಂತರ.
- ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿ ಅನುಭವ ಹೊಂದಿದ, ನುರಿತ, ತರಬೇತಿ ಹೊಂದಿದ ಮಾನವ ಸಂಪನ್ಮೂಲದ ಕೊರತೆ.
- ಅಸಮರ್ಪಕ ಸಂಪನ್ಮೂಲ ಒದಗಿಸುವುದು ಮತ್ತು ವೆಚ್ಚಗಳು.
- ಮಗುಸ್ನೇಹಿ ಕಾನೂನು ವ್ಯವಸ್ಥೆಗಳ ಕೊರತೆ.
- ಅಂತರ್ಜಾಲ ಮತ್ತು ಡಿಜಿಟಲ್ ವ್ಯವಸ್ಥೆಗಳು ಅನಿಯಂತ್ರಿತ ಮತ್ತು ಹೆಚ್ಚಿನ ಬಳಕೆ ಮಕ್ಕಳ ಮೇಲಿನ ದೌರ್ಜನ್ಯವನ್ನು ಹೆಚ್ಚಿಸಿರುವುದು.

ರಾಜ್ಯವು ಈ ಸವಾಲುಗಳನ್ನು ಅಂತರ್ ಇಲಾಖೆಗಳ ಸಹಭಾಗಿತ್ವ ಮತ್ತು ಅಂತರ್ ಸಂಸ್ಥೆಗಳ ಜಾಲ ವ್ಯವಸ್ಥೆಗಳನ್ನು ಬಲಪಡಿಸುವ ಮೂಲಕ ನಿವಾರಿಸುತ್ತದೆ.

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಮೂಲ ತತ್ವಗಳು

1. ಪ್ರತಿ ಮಗುವೂ **ಸಾರ್ವತ್ರಿಕ, ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಮಾನವ ಹಕ್ಕುಗಳನ್ನು ಹೊಂದಿದೆ.**
2. **ಘನತೆ ಮತ್ತು ಸ್ವಾತಂತ್ರ್ಯದ** ತತ್ವ.
3. ಮಕ್ಕಳ ಹಕ್ಕುಗಳು ಪರಸ್ಪರ ಅವಲಂಬಿತ ಮತ್ತು ಸಂಬಂಧವನ್ನು ಹೊಂದಿದೆ.
4. ಪ್ರತಿ ಮಗುವಿಗೂ **ಬದುಕುವ, ಅಭಿವೃದ್ಧಿ ಹೊಂದುವ, ರಕ್ಷಣೆ ಮತ್ತು ಭಾಗವಹಿಸುವ ಹಕ್ಕನ್ನು** ಹೊಂದಿದೆ.
5. ಈ ಹಕ್ಕುಗಳು **ಭೌತಿಕ ಅಸ್ತಿತ್ವವನ್ನು ಮೀರಿ ಜಾರಿಯಾಗಬೇಕು.**
6. **ಮಗುವಿನ ಮಾನಸಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ಒಟ್ಟಾರೆ ನಿಭಾಯಿಸಬೇಕು.**
7. ಮಕ್ಕಳೊಂದಿಗಿನ ಚಟುವಟಿಕೆಗಳು ಮತ್ತು ಅವರ **ಗುರುತಿಗೆ ಸಂಬಂಧಿಸಿದ** ಮಾಹಿತಿಯ ಗೌಪ್ಯತೆಯನ್ನು ಕಾಪಾಡಬೇಕು.
8. ಎಲ್ಲಾ ಮಕ್ಕಳಿಗೂ **ಸಮಾನ ಹಕ್ಕುಗಳಿವೆ** ಯಾವುದೇ ತಾರತಮ್ಯ ಮಾಡುವಂತಿಲ್ಲ.
9. **ಮಗುವಿನ ಉತ್ತಮ ಹಿತಾಸಕ್ತಿಯ** ತತ್ವ.
10. ಮಗುವಿನ ಪೋಷಣೆಯ ಪ್ರಥಮ ಜವಾಬ್ದಾರಿ ಪೋಷಕರದ್ದೇ ಆಗಿರುತ್ತದೆ.
11. **ಕುಟುಂಬ/ಕೌಟುಂಬಿಕ ವಾತಾವರಣದಲ್ಲಿ ಮಗು ಬೆಳೆಯುವ** ತತ್ವ.
12. **ಮುಗ್ಧತೆಯ** ತತ್ವ.
13. ಹೊಸತನದೊಂದಿಗೆ ಪ್ರಾರಂಬಿಸುವ ತತ್ವ.
14. **ಸಾಂಸ್ಥೀಕರಣವು ಕೊನೆಯ ಆಸರೆಯ ತತ್ವ**
15. **ಹಕ್ಕುಗಳನ್ನು** ನಿರಾಕರಿಸುವಂತಿಲ್ಲ
16. **ಸುರಕ್ಷತೆ ಮತ್ತು ರಕ್ಷಣೆಗೆ ಪ್ರಥಮ ಆದ್ಯತೆ**
17. ಮಕ್ಕಳ **ಭಾಗವಹಿಸುವಿಕೆಯ ತತ್ವ**
18. **ನೈಸರ್ಗಿಕ ನ್ಯಾಯದ ತತ್ವ**
19. **ಹಾನಿಕಾರಕ ಪದಗಳನ್ನು ಬಳಸುವಂತಿಲ್ಲ**
20. **ಎಲ್ಲಾ ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆಯ ತತ್ವ**

# ಪ್ರಮುಖ ಉದ್ದೇಶಗಳು

- ಮಗು ಕೇಂದ್ರಿತವಾಗಿ ಪರಿಣಾಮಕಾರಿ ಮಕ್ಕಳ ರಕ್ಷಣಾ ನೀತಿ/ವ್ಯವಸ್ಥೆಗಳನ್ನು ನಿರ್ಮಿಸುವುದು.
- ಮಕ್ಕಳ ಪಾಲನಾ ಸಂಸ್ಥೆಗಳು, ಕಾನೂನು ಅನುಷ್ಠಾನ ಆಧಿಕಾರಿಗಳ ಮತ್ತು ಸಂಸ್ಥೆಗಳು ಮಗು ಸ್ನೇಹಿಯಾದ ಪೋಷಣೆ ಮತ್ತು ರಕ್ಷಣೆಯನ್ನು ಒದಗಿಸಲು ಬಲವರ್ಧನೆ ಮಾಡುವುದು.
- ಅಂತರ್ ಇಲಾಖೆ, ಸಂಸ್ಥೆಗಳು ಮತ್ತು ವ್ಯವಸ್ಥೆಗಳ ಸಹಭಾಗಿತ್ವ ಮತ್ತು ಪಾರದರ್ಶಕತೆಯನ್ನು ಉತ್ತೇಜಿಸುವುದು.
- ಅಗತ್ಯ ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಅದರ ಸದ್ಬಳಕೆಯನ್ನು ಉತ್ತೇಜಿಸುವುದು.
- ನೀತಿಯ ಅನುಷ್ಠಾನಕ್ಕಾಗಿ ಸೂಕ್ತ ತಂತ್ರಜ್ಞಾನದ ಬಳಕೆಯನ್ನು ಮಾಡುವುದು.

ಮಕ್ಕಳ ಮೇಲೆ ಯಾವುದೇ ರೀತಿಯ ಹಿಂಸೆ/ಶೋಷಣೆ/ನಿರ್ಲಕ್ಷ/ತಾರತಮ್ಯವನ್ನು ನಡೆಯದಂತೆ ತಡೆಗಟ್ಟವ ಕ್ರಮ ಕೈಗೊಳ್ಳುವುದು **ಸರ್ಕಾರದ ಪ್ರಥಮ ಕರ್ತವ್ಯ.** ಎಲ್ಲಾ ಮಕ್ಕಳ ಸುತ್ತ ಸುರಕ್ಷತೆಯ ಬೇಲಿಯನ್ನು ನಿರ್ಮಿಸುವುದನ್ನು ಉತ್ತೇಜಿಸುವುದು.

# ಮಕ್ಕಳ ರಕ್ಷಣಾ ನೀತಿಯ ವ್ಯಾಪ್ತಿ

- ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯು **ಮಕ್ಕಳೊಂದಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಕೆಲಸ ಮಾಡುವ ಸರ್ಕಾರಿ, ಅರೆಸರ್ಕಾರಿ ಇಲಾಖೆ, ಅಧಿಕಾರಿ, ಸಿಬ್ಬಂದಿ ವ್ಯಕ್ತಿ, ಸಂಸ್ಥೆ, ಕಾನೂನು ಬದ್ಧ ವ್ಯವಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಇತರೇ ಎಲ್ಲರಿಗೂ ಅನ್ವಯಿಸುತ್ತದೆ.**
- ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯು **ಸರ್ಕಾರದ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವವನ್ನು ಒಳಗೊಂಡಿದ್ದು, ಇದರನ್ವಯ ಎಲ್ಲಾ ಮಕ್ಕಳ ಅಂದರೆ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆ/ಶೈಕ್ಷಣಿಕ ಕೇಂದ್ರದಲ್ಲಿರುವ ಅಥವಾ ಯಾವುದೇ ಸ್ಥಿತಿಯಲ್ಲಿರುವ ಮಕ್ಕಳ ಸುರಕ್ಷತೆ ಮತ್ತ ರಕ್ಷಣೆಯ ಜವಾಬ್ದಾರಿಯು ಸರ್ಕಾರದ್ದಾಗಿದೆ.**

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಅನುಷ್ಠಾನ ಯೋಜನೆ

- ಕರ್ನಾಟಕ ರಾಜ್ಯ **ಮಕ್ಕಳ ರಕ್ಷಣಾ ಕ್ರಿಯಾ ಯೋಜನೆ ತಯಾರಿ.**
- **ರಾಜ್ಯ ನೋಡಲ್ ಅಧಿಕಾರಿಯ** ನೇಮಕ.
- **ಮಾನವ ಸಂಪನ್ಮೂಲದ** ಬಲವರ್ದನೆ
- **ಅಂತರ್ ಇಲಾಖೆಗಳ ಸಮನ್ವಯಕ್ಕಾಗಿ** ಪೋರ್ಟಲ್ ಸ್ಥಾಪನೆ.
- **ಮಕ್ಕಳ ರಕ್ಷಣಾ ಆಯವ್ಯಯ**
- ಮಕ್ಕಳ ರಕ್ಷಣಾ ನೀತಿ, ಎಸ್.ಒ.ಪಿ, ಇತ್ಯಾದಿಗಳ ಭಾಷಾಂತರ.

# ಮಕ್ಕಳ ರಕ್ಷಣೆಗಾಗಿ ನೀತಿಯ ಚೌಕಟ್ಟು

- ಕುಟುಂಬದಲ್ಲಿರುವ ಮಗುವಿನ ಪೋಷಣಾ ಮತ್ತು ರಕ್ಷಣಾ ಅಂಶಗಳು
- ಶೈಕ್ಷಣಿಕ ಸಂಸ್ಥೆಯಲ್ಲಿರುವ ಮಕ್ಕಳ ಪೋಷಣೆ ಮತ್ತು ರಕ್ಷಣಾ ಅಂಶಗಳು
  - ಎಲ್ಲಾ ಮಕ್ಕಳಿಗೂ ಗುಣಮಟ್ಟದ, ಉಚಿತ, ಸಮಾನ ಶಿಕ್ಷಣ ಒದಗಿಸುವದರ ಕುರಿತಾದ ಕ್ರಮಗಳು
  - ತಾರತಮ್ಯ, ಹಿಂಸೆ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯ ಕ್ರಮಗಳು
- ಸಮುದಾಯ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳ ಪೋಷಣೆ ಮತ್ತು ರಕ್ಷಣಾ ಅಂಶಗಳು.
- ಮಕ್ಕಳಿಗೆ ನ್ಯಾಯ ವ್ಯವಸ್ಥೆಯನ್ನು ಬಲಪಡಿಸುವುದು.
- ಮಕ್ಕಳು ಮತ್ತು ಮಾಧ್ಯಮ
- ರಕ್ಷಿಸಲ್ಪಟ್ಟ ಮಕ್ಕಳಿಗೆ ಪುನರ್ವಸತಿ ಮತ್ತು ಸಾಮಜಿಕ ಪುನರ್ಮಿಲನ
- ವಿಕೋಪಗಳಿಗೆ ಮತ್ತು ಸಂಘರ್ಷಕ್ಕೆ ಸಿಲುಕಿರುವ ಮಕ್ಕಳು.
- ವಿಶೇಷ ಚೇತನ ಮಕ್ಕಳು
- ಮಾರಣಾಂತಿಕ ರೋಗಗಳಿಗೆ ಒಳಗಾಗಿರುವ ಮಕ್ಕಳು
- ಮನೆ ಕಳೆದುಕೊಂಡ/ಇಲ್ಲದ ಮಕ್ಕಳು
- ಮಕ್ಕಳ ಜಂಡರ್ ಹಕ್ಕುಗಳು
- ಬಾಲ್ಯವಿವಾಹಕ್ಕೆ ಒಳಗಾದ/ಒಳಗಾಗಬಹುದಾದ ಮಕ್ಕಳು
- ಸಾರ್ವಜನಿಕ ನೀತಿಗಳಲ್ಲಿ ಮಕ್ಕಳು
- ಮಕ್ಕಳ ರಕ್ಷಣೆ ಮತ್ತು ತಂತ್ರಜ್ಞಾನ

# ಮೇಲುಸ್ತುವಾರಿ ಮತ್ತು ಮೌಲ್ಯ ಮಾಪನ

- ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ **ಅದರ ಮೇಲುಸ್ತುವಾರಿ ಮತ್ತು ಕಾಲಕಾಲಕ್ಕೆ ಮೌಲ್ಯಮಾಪನ ಮಾಡುವುದು ಅಗತ್ಯ.**
- ಈ ಹಿನ್ನೆಲೆಯಲ್ಲಿ **ಫಲಾನುಭವಿ ಆಧಾರಿತ** (ಪ್ರತಿ ಮಗುವಿಗೆ ಅವರ ಹಕ್ಕುಗಳನ್ನು ಅನಭವಿಸಲು ನೀತಿ ಅಥವಾ ಕಾಯ್ದೆಗಳು ಪೂರಕವಾಗಿರುವಂತೆ ಕ್ರಮವಹಿಸುವುದು)
- ಮತ್ತು **ಅನುಷ್ಠಾನ ಆಧಾರಿತ** (ಮಕ್ಕಳ ಹಕ್ಕುಗಳ ಅನುಷ್ಠಾನದ ಕುರಿತು ಅನುಪಾಲನೆ ಅಥವಾ ಟ್ರಾಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸುವುದು) **ಮೇಲುಸ್ತುವಾರಿ ಮತ್ತು ಮೌಲ್ಯಮಾಪನ ಕ್ರಮಗಳನ್ನು** ಸೂಚಿಸಲಾಗಿದೆ.
- ಇವುಗಳೊಂದಿಗೆ **ಹಣಕಾಸು ವ್ಯವಸ್ಥೆಗಳ ಟ್ರಾಕಿಂಗ್** ವ್ಯವಸ್ಥೆಯನ್ನು ಜಾರಿಗೊಳಿಸುವುದು.
- **ಮಕ್ಕಳನ್ನೂ ಮೇಲುಸ್ತುವಾರಿ ಮತ್ತು ಮೌಲ್ಯಮಾಪನ ಕ್ರಮದಲ್ಲಿ ಭಾಗವಹಿಸುವಂತೆ ಮಾಡಲಾಗುವುದು.**

# ಸಂಪನ್ಮೂಲ ಒದಗಿಸುವುದು/ಹಂಚಿಕೆ ಮತ್ತು ಬಳಕೆ

- ಈ ನೀತಿಯನ್ನು ಸಮಗ್ರವಾಗಿ ಜಾರಿಗೆಗಾಗಿ ಹಣಕಾಸು, ಸಾಮಾಗ್ರಿ ಮತ್ತು ಮಾನವ ಸಂಪನ್ಮೂಲಗಳು ಅಗತ್ಯವಾಗಿ ಬೇಕಾಗಿದೆ ಮತ್ತು ಅನುಷ್ಠಾನ ಸಂಸ್ಥೆಗಳಿಗೆ ನಿಗಡಿಪಡಿಸಿದ ಕಾಲಮಿತಿಯಲ್ಲಿ ಮತ್ತು ಪಾರದರ್ಶಕವಾಗಿ ಹಂಚಿಕೆಯಾಗಬೇಕಾಗಿದೆ.
- ಕೇಂದ್ರ ಮತ್ತು ರಾಜ್ಯದ ಆಯವ್ಯಯದಲ್ಲಿ ಶೇ.10ರಷ್ಟು ಹಣಕಾಸನ್ನು ಮಕ್ಕಳ ಅಭಿವೃದ್ಧಿ, ರಕ್ಷಣೆ ಮತ್ತು ಕ್ಷೇಮಕ್ಕಾಗಿ ಮೀಸಲಿಡಬೇಕು.
- ಮಕ್ಕಳ ಆಯವ್ಯಯವು (ಚೈಲ್ಡ್ ಬಡ್ಜೆಟಿಂಗ್) ಎಲ್ಲಾ ಆಯವ್ಯಯ ಮತ್ತು ಯೋಜನೆಗಳ ಭಾಗವಾಗಬೇಕು.
- ಸಂಪನ್ಮೂಲಗಳ ಹಂಚಿಕೆಯ ಅನುಪಾಲನೆ.
- ಮಕ್ಕಳ ರಕ್ಷಣೆ, ಅಭಿವೃದ್ದಿ ಮತ್ತು ಪೋಷಣೆಯು ಸಿ.ಎಸ್.ಆರ್ (ಕಂಪೆನಿ ಕಾಯ್ದೆಯ ಸೆಡ್ಯೂಲ್ 7ರ) ಭಾಗವಾಗಬೇಕಾಗಿದೆ.
- ಡೇಟಾ ಮ್ಯಾನೆಜ್‌ಮೆಂಟ್ ಸಿಸ್ಟಮ್ ಸಂಪನ್ಮೂಲ ಸಂಗ್ರಹಣೆ ಮತ್ತು ಹಂಚಿಕೆಯ ಬಾಗವಾಗಬೇಕು, ಇದರೊಂದಿಗೆ ಸಾಧನೆ ಮತ್ತು ಸುಧಾರಣೆಯನ್ನೆ ಅಳವಡಿಸಿಕೊಳ್ಳಬೇಕು.
- ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ತ್ರೈಮಾಸಿಕವಾಗಿ ಅನುದಾನ ಹಂಚಿಕೆ ಮತ್ತು ಬಳಕೆಯ ಕುರಿತು ಚರ್ಚೆಗಳು ನಡೆಯಬೇಕು.

# ಹೊಣೆಗಾರಿಕೆ ಮತ್ತು ಪಾರದರ್ಶಕತೆ

- ನೀತಿಯ ಅನುಷ್ಠಾನಕ್ಕಾಗಿ ಸರ್ಕಾರವು **ನಿಗದಿತ ಅನುದಾನ ಮತ್ತು ನಿಗದಿತ ಕಾಲಮಿತಿಯ ಯೋಜನೆ**ಗಳನ್ನು ಮತ್ತು ಇಲಾಖೆ/ಸಂಸ್ಥೆಗಳನ್ನು ಅಳವಡಿಸಿಕೊಂಡು ಜಾರಿ ಮಾಡಬೇಕು.
- ನೀತಿಯ ಸಮಗ್ರ ಸಾಧನೆಯ ಮೇಲುಸ್ತುವಾರಿಗಾಗಿ **ತಂತ್ರಜ್ಞಾನದ ಅಳವಡಿಕೆಗೆ** ಆದ್ಯತೆ ನೀಡಲಾಗಿದೆ.

# ನೀತಿಯ ಪರಾಮರ್ಶೆ

- ನೀತಿಯ ಪರಾಮರ್ಶೆಗಾಗಿ **ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.**
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ರಾಜ್ಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಇವರೊಂದಿಗೆ ಸಮಿತಿಯಲ್ಲಿ ಕಾರ್ಮಿಕ ಇಲಾಖೆ, **ಶಿಕ್ಷಣ ಇಲಾಖೆ**, ಆರೋಗ್ಯ, ಗೃಹ ಇಲಾಖೆ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿದಿಗಳು ಕಾರ್ಯನಿರ್ವಹಿಸುತ್ತಾರೆ.
- ಸಮಿತಿಯು **ಪ್ರತೀ 6 ತಿಂಗಳಿಗೊಮ್ಮೆ ಸಭೆ ಸೇರಿ ಇಲಾಖಾವಾರು ಅನುಷ್ಠಾನವನ್ನು ಪರಿಶೀಲಿಸಬೇಕಾಗಿದೆ.**
- ಪ್ರತೀ ವರ್ಷಕ್ಕೊಮ್ಮೆ ನೀತಿಯ ಅನುಷ್ಠಾನದ ವರದಿಯನ್ನು ಸರ್ಕಾರದ ಮುಖ್ಯಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾಗಿದೆ.
- ನೀತಿಯು ಜಾರಿಯ ನಂತರ 3 ವರ್ಷಗಳ ನಂತರ ನೀತಿಯನ್ನು ಸಮಗ್ರ ಪರಾಮರ್ಶೆಗೆ ಒಳಪಡಿಸಲಾಗುವುದು.

# ಅನುಸರಣೆ

- ನೀತಿಯ ಅನುಸರಣೆಗಾಗಿ ಸರ್ಕಾರವು ಎಲ್ಲಾ ಭಾಗೀದಾರರಿಗೆ **ಸಾಮರ್ಥ್ಯಾಭಿವೃದ್ಧಿ,** ಲಿಖಿತ ಮಾದರಿ ಕರಡು ನೀತಿಗಳನ್ನು ರಚಿಸಿ ಪ್ರಚಾರ ಪಡಿಸುವ ನಿಟ್ಟಿನಲ್ಲಿ ಈ ಕೆಳಗಿನ ತಂತ್ರವನ್ನು ಅನುಸರಿಸುತ್ತದೆ:-
  - **ಆಡಳಿತದಲ್ಲಿ ಮಗು ಸ್ನೇಹಿ ಪ್ರಕ್ರಿಯೆ ಮಾತ್ರ** ಮಕ್ಕಳ ರಕ್ಷಣೆಯ ಕಾರ್ಯತಂತ್ರವಾಗಬೇಕು.
  - **ಉತ್ತರದಾಯಿತ್ವವನ್ನು ಪ್ರತಿಪಾದಿಸುವುದು: ನೀತಿಯ ಅನುಷ್ಠಾನ ಮತ್ತು ನೀತಿಯನುಸಾರ ಅನುಸರಿಸದಿದ್ದರೆ, ನಿರ್ಲಕ್ಷಿಸಿದರೆ ಕ್ರಮಗಳು – ಮುಖ್ಯವಾಗಿ ದಂಡವಿಧಿಸುವುದು, ಅನುಮತಿಯನ್ನು ರದ್ದುಪಡಿಸುವುದು ಮತ್ತು ಕಾನೂನು ಕ್ರಮಗಳನ್ನು ಜಾರಿಗೊಳಿಸುವುದು.**
- ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ರಚನೆಯಾದ ಶಿಕ್ಷಣ ಸಂಸ್ಥೆಗಳಿಗಾಗಿ ರೂಪಿಸಲಾದ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳ **ಅನುಷ್ಠಾನವನ್ನು 6 ತಿಂಗಳಿಂದ 1 ವರ್ಷದೊಳಗೆ ನೀತಿಯನ್ನು ಅನುಷ್ಠಾನಗೊಳಿಸಲು ವಿಫಲರಾದರೆ ಅಂಥಹ ಶಿಕ್ಷಣ ಸಂಸ್ಥೆಗಳ ಅನುಮತಿಯನ್ನು ರದ್ದುಪಡಿಸಬಹುದಾಗಿದೆ / ಕಾನೂನು ಕ್ರಮಗಳನ್ನು ಜಾರಿಗೊಳಿಸುವುದು.**





# ಯಾರು ಹೊಣೆ???

# 1.3.2 ಸುರಕ್ಷಾ ವಿಧಾನಗಳ ಸ್ಥಾಪನೆ:

ಸುರಕ್ಷತೆಯನ್ನು ಖಾತರಿಪಡಿಸುವ ವಿಧಾನಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

a. ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸಿ ಅಧಿಸೂಚನೆ ಹೊರಡಿಸುವುದು (EICPP).

b. ಹೊಂದಿಕೆಯಾಗಿರುವ ಮಾದರಿ ಸುರಕ್ಷಾ ಗಮನಿಕೆ ಪಟ್ಟಿಯನ್ನು ಹೊಂದಿರುವುದು.

c. ವಿಪತ್ತಿನ ಅಪಾಯವನ್ನು ತಗ್ಗಿಸುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವಿಕೆ.

d. ಮಕ್ಕಳ ಹಕ್ಕುಗಳ ಕ್ಲಬ್ ರಚನೆ.

e. ಸಿಬ್ಬಂದಿಗಳ ಮೌಲ್ಯಮಾಪನದಲ್ಲಿ ಮಗುವಿನ ಸುರಕ್ಷತೆಯ ಸೇರ್ಪಡೆ.

f. ಅರಿವು, ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ ಕಾರ್ಯಕ್ರಮಗಳ ಆಯೋಜನೆ.

g. ವರದಿ ಮಾಡುವ ವಿಧಾನಗಳನ್ನು ಸೃಜಿಸುವುದು.

# 2.2 ಮಕ್ಕಳ ರಕ್ಷಣಾ ನೀತಿ ಅನ್ವಯಿಸುವಿಕೆ:

- ಈ ಮಾರ್ಗಸೂಚಿಗಳು ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಅನ್ವಯವಾಗಲಿದ್ದು, ಕೆಳಗಿನ ಸನ್ನಿವೇಶ ಮತ್ತು ಸಂದರ್ಭಗಳನ್ವಯ ವ್ಯಾಖ್ಯಾನಿಸಲಾಗಿದೆ.

ಅ. ಶೈಕ್ಷಣಿಕ ಸಂಸ್ಥೆಯ ಆವರಣದೊಳಗೆ, ಮಕ್ಕಳು ಒಳಗೊಳ್ಳುವ ಎಲ್ಲಾ ಅವಧಿಗಳಲ್ಲಿ, ಶೈಕ್ಷಣಿಕ ಸಂಸ್ಥೆಗೆ ಸಂಬಂಧಿಸಿದ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷವಾದ ಚಟುವಟಿಕೆಗಳಿಗೆ ಸಂಬಂಧಿಸಿದ, ಶಾಲಾ ಪೂರ್ವ ಮತ್ತು ನಂತರದ ಅವಧಿಗಳು ಮತ್ತು ರಜಾದಿನಗಳು ಸೇರಿರುತ್ತವೆ.

ಆ. ಶೈಕ್ಷಣಿಕ ಸಂಸ್ಥೆಯ ವಿಸ್ತರಗೊಂಡ ಪರಿಸರದಲ್ಲಿ ಒಂದು ವೇಳೆ ಶೈಕ್ಷಣಿಕ ಸಂಸ್ಥೆಯೊಂದಿಗೆ ಯಾವುದೇ ಸಂಬಂಧವಿರುವ, ಉದಾ: ನಿಲುಗಡೆ ಪ್ರದೇಶಗಳು, ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯಕ್ರಮಗಳ ಸ್ಥಳಗಳು ಅಥವಾ ಪ್ರವಾಸಗಳು, ಸಂಸ್ಥೆಗೆ ಸಂಬಂಧಿಸಿದ ಪ್ರಯಾಣ ಮತ್ತು ಸಾರಿಗೆ ವ್ಯವಸ್ಥೆಗಳನ್ನು ಶೈಕ್ಷಣಿಕ ಸಂಸ್ಥೆಯು ಮಕ್ಕಳಿಗೆ ಏರ್ಪಡಿಸಿದಲ್ಲಿ.

ಈ ಮಾರ್ಗಸೂಚಿಗಳು ಮೇಲೆ ತಿಳಿಸಿರುವ ಸಂದರ್ಭಗಳಲ್ಲಿ, ಮಕ್ಕಳೊಂದಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂಪರ್ಕದಲ್ಲಿರುವ ಎಲ್ಲಾ ವ್ಯಕ್ತಿಗಳಿಗೂ ಸಹ ಅನ್ವಯವಾಗುತ್ತವೆ.

ಅ. ಶೈಕ್ಷಣಿಕ ಸಂಸ್ಥೆಯ ಆಡಳಿತ ಮಂಡಳಿ ಮತ್ತು ನಿರ್ವಹಣಾ ಸಮಿತಿ

ಆ. ಖಾಯಂ, ತಾತ್ಕಾಲಿಕ ಮತ್ತು ಗುತ್ತಿಗೆ ಸಿಬ್ಬಂದಿ.

ಇ. ಸ್ವಯಂಸೇವಕರು, ಸಮಾಲೋಚಕರು, ತಜ್ಞರು, ಹೊರಗುತ್ತಿಗೆ ಸಂಸ್ಥೆಗಳ ಕೆಲಸಗಾರರು, ಸೇವೆಯನ್ನುಒದಗಿಸುವವರು ಮತ್ತು ಶೈಕ್ಷಣಿಕ ಸಂಸ್ಥೆಗೆ ಸೇವೆ ಹಾಗೂ ಸಾಮಗ್ರಿಗಳನ್ನು ಪೂರೈಸುವವರು.

ಈ. ಶೈಕ್ಷಣಿಕ ಸಂಸ್ಥೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಗಳು ಮತ್ತು ಸಂಪರ್ಕದಲ್ಲಿರುವವರು.

ಉ. ಶೈಕ್ಷಣಿಕ ಸಂಸ್ಥೆಯೊಂದಿಗೆ ಸಂಬಂಧವಿರುವ ಯಾವುದೇ ವ್ಯಕ್ತಿ ಹಾಗೂ ಮಗುವಿನ ಮೇಲೆ ಅಧಿಕಾರ ಹೊಂದಿರುವ ಮತ್ತು/ಅಥವಾ ಸಂಪರ್ಕದಲ್ಲಿರುವ ವ್ಯಕ್ತಿ ಮತ್ತು/ಅಥವಾ ಮಗುವಿನ ನಂಬಿಕೆಗಳಿಸಿರುವ ಇತರೆ ಯಾವುದೇ ವ್ಯಕ್ತಿ

ಊ. ಪ್ರಸ್ತಾವಿತ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಯಾವುದೇ ಇತರೆ ವ್ಯಕ್ತಿಯನ್ನು ಒಳಗೊಂಡಿರುತ್ತದೆ.

**ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಪ್ರಮುಖ ತತ್ತ್ವಗಳೊಂದಿಗೆ ಹೆಚ್ಚುವರಿಯಾಗಿ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಒಳಗೊಂಡಿರುವುದು.**

ಅ.ಮಕ್ಕಳ ರಕ್ಷಣೆಯನ್ನು **ಗುರುತಿಸುವುದು ಮತ್ತು ಸುರಕ್ಷಿತ ಪರಿಸರಕ್ಕೆ** ಬದ್ಧರಾಗಿರುವುದು.

ಆ.**ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಅಪಾಯಕಾರಿ ಸನ್ನಿವೇಶಗಳು** ಮತ್ತು ಮಕ್ಕಳಿಗೆ ಸಂಭವಿಸಬಹುದಾದ ಅಪಘಾತಗಳನ್ನು ಕಡಿಮೆಗೊಳಿಸುವುದು.

ಇ.ಮಕ್ಕಳ ರಕ್ಷಣಾ ವಿಷಯಗಳನ್ನು ನಿರ್ವಹಿಸುವಲ್ಲಿ **ಗೌಪ್ಯತಾ ಅವಶ್ಯಕತೆಗಳಿಗೆ ಗೌರವ ನೀಡುವುದು.**

**ಈ.**ಸಿಬ್ಬಂದಿಗಳು, **ಬೋಧಕರು** ಮತ್ತು **ಆಡಳಿತ ನಿರ್ವಾಹಕರ ಮೇಲೆ ಬರುವ ತಪ್ಪು ಆಪಾದನೆಗಳನ್ನುತಪ್ಪಿಸಲು ಸುರಕ್ಷತಾ ವಿಧಾನಗಳನ್ನು ಜಾರಿಗೊಳಿಸುವುದು.**

ಉ.ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನೀತಿಗಳು, ಆಚರಣೆಗಳು ಮತ್ತು ಶಿಕ್ಷಣ ಸಂಸ್ಥೆಯ ಚಟುವಟಿಕೆಗಳಾದ ಸಿಬ್ಬಂದಿಯ ನೀತಿ ಸಂಹಿತೆ, ಬೆದರಿಕೆ ವಿರೋಧಿ ನೀತಿ (Anti–bullying policy), ಸೈಬರ್ ಸಂರಕ್ಷಣಾ ನೀತಿ ಮುಂತಾದವುಗಳನ್ನು ಪಟ್ಟಿ ಮಾಡುವುದು.

**ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಕೆಳಕಂಡ ಅಂಶಗಳನ್ನು ಖಾತರಿಪಡಿಸಿಕೊಳ್ಳುವುದು.**

ಅ.ಶಿಕ್ಷಣ ಸಂಸ್ಥೆಗಳು ಮಕ್ಕಳ ರಕ್ಷಣಾ ನೀತಿಯ ಪ್ರತಿಯನ್ನು ಸುಲಭವಾಗಿ ಲಭ್ಯವಿರುವ ಸ್ಥಳದಲ್ಲಿರಿಸುವುದು.

ಆ. ಮಕ್ಕಳ ರಕ್ಷಣಾ ನೀತಿಯನ್ನು ಶಾಲಾ ದಿನಚರಿ, ಶಾಲೆಯ ಸೂಚನಾ ಫಲಕ, ಓದುವ ಸ್ಥಳಗಳು, ಯಾವುದೇ ಮಾಹಿತಿ ಕೇಂದ್ರ ಮತ್ತು ತನ್ನ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ ಶಿಕ್ಷಣ ಸಂಸ್ಥೆಯುಪ್ರಚಾರ ಮಾಡುವುದು.

ಇ. ಶಿಕ್ಷಣ ಸಂಸ್ಥೆಯ ತನ್ನ ಎಲ್ಲಾ ಸಿಬ್ಬಂದಿ, ಗುತ್ತಿಗೆ ನೌಕರರಿಗೆ ಮತ್ತು ಸಂಬಂಧಿಸಿದ ಎಲ್ಲಾ ಇತರೆ ಭಾಗಿದಾರರಿಗೆ ಮಕ್ಕಳ ರಕ್ಷಣಾ ನೀತಿಯ ಪಾಲನೆ ಬಗ್ಗೆ ಅಧಿಸೂಚನೆ ಹೊರಡಿಸುವುದು ಮತ್ತು ಲಭ್ಯವಾಗುವಂತೆ ನೋಡಿಕೊಳ್ಳುವುದು.

ಈ. ಮಕ್ಕಳ ರಕ್ಷಣಾ ನೀತಿಯ ಮಾಹಿತಿ ಮತ್ತು ಅದನ್ನು ಪಾಲಿಸಲು ಬದ್ದವಾಗಿರುವ ಬಗ್ಗೆ ಶಿಕ್ಷಣ ಸಂಸ್ಥೆಗಳು ಲಿಖಿತವಾಗಿ ಘೋಷಣೆಯನ್ನು ಪಡೆದುಕೊಳ್ಳುವುದು.

ಉ.ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಮೂರು ತಿಂಗಳಿಗೊಮ್ಮೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ತಿಳುವಳಿಕೆ ನೀಡುವುದು.

ಊ.ಮಕ್ಕಳ ರಕ್ಷಣಾ ನೀತಿಯನ್ನು, ಶಿಕ್ಷಣ ಸಂಸ್ಥೆಗಳ ಆಡಳಿತ (ಸರ್ಕಾರೇತರ ಶಿಕ್ಷಣ ಸಂಸ್ಥೆಗಳಿಗೆ ಆಡಳಿತ ಮಂಡಳಿ ಅಥವಾ ಬೋರ್ಡ್ ಆಫ್ ಟ್ರಸ್ಟೀಸ್, ಸರ್ಕಾರಿ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು) ಮಂಡಳಿಯು ಆಗಾಗ್ಗೆ ಪರಿಶೀಲಿಸಿ ಮಾರ್ಪಾಟುಗಳನ್ನು ಮಾಡುವುದು.

ಋ. ಪ್ರಸ್ತಾವಿತ ಮಾರ್ಗಸೂಚಿಗಳಲ್ಲಿ ಸ್ವ–ಮೌಲ್ಯಮಾಪನದ ಗಮನಿಕೆ ಪಟ್ಟಿಯನ್ನು ಅಳವಡಿಸುವುದು.

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016
# ಹಕ್ಕು ಆಧಾರಿತ ಮಕ್ಕಳ ರಕ್ಷಣೆ
# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ
# ಶಿಕ್ಷಣಸಂಸ್ಥೆಗಳಿಗಾಗಿ ರೂಪಿಸಲಾಗಿರುವ
# ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು
# ಕಾರ್ಯವಿಧಾನಗಳು.

# ಅನುಬಂಧ ಸಂಖ್ಯೆ : 2–ಶಾಲೆಗಳಿಗೆ ಮಾದರಿ ಮಕ್ಕಳ ರಕ್ಷಣಾ ನೀತಿ– ಶಾಲೆಗಳಿಗೆ ಮಾದರಿ ಮಕ್ಕಳ ರಕ್ಷಣಾ ನೀತಿ

1. ನೀತಿಯ ದೃಷ್ಟಿಕೋನ ಮತ್ತು ಗುರಿಯ ವ್ಯಾಖ್ಯೆ:
2. ಬದ್ಧತೆಯ ವ್ಯಾಖ್ಯಾನ :
3. ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಎಲ್ಲಾ ಬಗೆಯ ಮಕ್ಕಳ ಸುರಕ್ಷತಾ ಉಲ್ಲಂಘನೆಯನ್ನು ಗುರುತಿಸುವುದು. ಹಾನಿ, ನಿರ್ಲಕ್ಷ್ಯ, ಭಾವನಾತ್ಮಕ ಹಲ್ಲೆ, ದೈಹಿಕ ಹಲ್ಲೆ, ಲೈಂಗಿಕ ಹಲ್ಲೆ.
4. ಸುರಕ್ಷತಾ ಕ್ರಮಗಳು : ಅ.ಸುರಕ್ಷಿತ ಮೂಲ ಸೌಕರ್ಯ:

ಆ. ನಿಯಂತ್ರಣದ ಲಭ್ಯತೆ: ಇ. ಶಾಲೆಯ ಹೊರಗಿನ ಚಟುವಟಿಕೆಗಳ ಮಾರ್ಗಸೂಚಿಗಳು: ಈ. ಮಾರ್ಗದರ್ಶನ ಮತ್ತು ಆಪ್ತಸಮಾಲೋಚನಾ ಕೇಂದ್ರಗಳು:

5. ಶಾಲೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಮೇಲ್ವಿಚಾರಣೆಯ ಕ್ರಮಗಳು

# 4.2.1 ಮಕ್ಕಳ ರಕ್ಷಣಾ ಸಮಿತಿ (CPC)

- ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಕೆಳಕಂಡವರನ್ನೊಳಗೊಂಡ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವುದು.
- ಸಂಸ್ಥೆಯ ಮುಖ್ಯಸ್ಥರು ಸಮಿತಿಯ ಅಧ್ಯಕ್ಷರಾಗಿರುವರು
- ಒಬ್ಬರು ಅಥವಾ ಇಬ್ಬರು ಶಿಕ್ಷಕರಲ್ಲಿ, ಒಬ್ಬರನ್ನು ಮಕ್ಕಳ ರಕ್ಷಣಾ ಅಧಿಕಾರಿಯನ್ನಾಗಿ ನಿಯೋಜಿಸುವುದು.
- ಶಿಕ್ಷಣ ಸಂಸ್ಥೆಯ ಸಾಮರ್ಥ್ಯದನ್ವಯ ಇಬ್ಬರು/ಮೂವರು ಪೋಷಕರಲ್ಲಿ ಒಬ್ಬ ಮಹಿಳೆ ಸಮಿತಿಯಲ್ಲಿರುವರು. ಶಾಲಾಆಡಳಿತ ಮಂಡಳಿ/ ಪೋಷಕ–ಶಿಕ್ಷಕರ ಸಂಘವಿದ್ದಲ್ಲಿ (**SDMC/PTA**) ಸದರಿ ಸಮಿತಿಯ ಒಬ್ಬ ಪೋಷಕರನ್ನು ಒಬ್ಬ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು.

- 8ನೇ ತರಗತಿ ಅಥವಾ ಅದಕ್ಕಿಂತ ಉನ್ನತ ತರಗತಿಗಳ ಎರಡು ಅಥವಾ ಹೆಚ್ಚಿನ ವಿದ್ಯಾರ್ಥಿಗಳನ್ನು ಸಮಾನ ಲಿಂಗಾನುಪಾತದನ್ವಯ ಪ್ರತಿನಿಧಿಸುವಿಕೆಯನ್ನು ಹೊಂದಿರುವುದು.
- ಭದ್ರತಾ ಅಧಿಕಾರಿ (ಶಿಕ್ಷಣ ಸಂಸ್ಥೆಯು ಭದ್ರತಾ ಸಿಬ್ಬಂದಿಯನ್ನು ಹೊಂದಿದ್ದಲ್ಲಿ)

## ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸಬೇಕಾದ ಸಾಮಾನ್ಯ ಪಾತ್ರಗಳು ಮತ್ತು ಜವಾಬ್ದಾರಿಗಳು :

- ಮಕ್ಕಳ ರಕ್ಷಣಾ ಸಮಿತಿಯು 3 ತಿಂಗಳಿಗೊಮ್ಮೆ ಮತ್ತು ಸುರಕ್ಷತೆ ಉಲ್ಲಂಘನೆಯಾಗಿರುವ ಬಗ್ಗೆ ವರದಿಯಾದಾಗ ಸಭೆ ಸೇರುವುದು.
- ತ್ರೈಮಾಸಿಕ ಸಭೆಯಲ್ಲಿ ಹಿಂದಿನ ಸಬೆಯಲ್ಲಿ ಚರ್ಚಿಸಲಾದ ಕಾರ್ಯಸೂಚಿಯನ್ನು ಪರಿಶೀಲಿಸುವುದು. ಈ ಅವಧಿಯಲ್ಲಿ ಕಂಡುಬಂದಿರುವ ಯಾವುದೇ ಬೆದರಿಕೆ/ಅಪಾಯಗಳು ಮತ್ತು ಸಂಸ್ಥೆಯಲ್ಲಿ ಮಕ್ಕಳ ರಕ್ಷಣಾ ಕ್ರಮಗಳನ್ನು ಬಲಪಡಿಸಲು ತೆಗೆದುಕೊಳ್ಳಬೇಕಾಗಿರುವ ಹೆಚ್ಚುವರಿ ಕ್ರಮಗಳ ಬಗ್ಗೆ ಚರ್ಚಿಸುವುದು.
- ಮಕ್ಕಳ ರಕ್ಷಣಾ ಸಮಿತಿಯು ಮಗುವಿನ ಸುರಕ್ಷತೆಯಡಿ ಆಗಿರುವ ಉಲ್ಲಂಘನೆಗಳು/ದುರುಪಯೋಗಗಳ ಬಗ್ಗೆ ಬಂದಿರುವ ದೂರುಗಳು/ಶಿಫಾರಸ್ಸುಗಳ ಬಗ್ಗೆ ಮಾತ್ರ ಆದ್ಯತೆ ನೀಡಬೇಕೇ ಹೊರತು ಶಿಕ್ಷಣ ಸಂಸ್ಥೆಯ ಯಾವುದೇ ಆಡಳಿತಾತ್ಮಕ ಸಮಸ್ಯೆಗಳಿಗೆ ಗಮನ ನೀಡುವಂತಿಲ್ಲ.
- ಮಕ್ಕಳ ರಕ್ಷಣಾ ಸಮಿತಿಯು ಕಾಳಜಿಗಳ ಬಗ್ಗೆ ಚರ್ಚಿಸಿ ಅವುಗಳನ್ನು ದಾಖಲಿಸುವುದು ಮತ್ತು ಸೂಕ್ತ ಶಿಫಾರಸ್ಸುಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ ಸಲ್ಲಿಸುವುದು.

- ಮಕ್ಕಳ ರಕ್ಷಣಾ ಸಮಿತಿಯು ಗಮನಿಸಿರುವ ಕಾಳಜಿಗಳನ್ನು ಬಗೆಹರಿಸುವುದು ಮತ್ತು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವುದನ್ನು ಖಾತರಿ ಪಡಿಸಿಕೊಳ್ಳುವುದು.
- ಮಗುವಿನ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಎಲ್ಲಾ ರಿಜಿಸ್ಟರ್‌ಗಳು, ಕಡತಗಳು, ಕಡತ ಕೋಶ ಮತ್ತು ದಾಖಲೆಗಳನ್ನು ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸುವುದು.
- ಅಗತ್ಯವಿರುವಾಗ ಮಕ್ಕಳ ರಕ್ಷಣಾ ಸಮಿತಿಯು ಬಾಹ್ಯ ನಿಪುಣರ ಸಹಾಯವನ್ನು ಪಡೆಯುವುದು.
- ಮಕ್ಕಳ ರಕ್ಷಣಾ ಸಮಿತಿಯ ಅವಧಿ 2 ಶೈಕ್ಷಣಿಕ ವರ್ಷಗಳಾಗಿರುತ್ತದೆ. ಖಾಲಿ ಇರುವ ಹುದ್ದೆಯನ್ನು ಒಂದು ತಿಂಗಳೊಳಗೆ ಅಥವಾ ಶೈಕ್ಷಣಿಕ ವಂಷಂಜದಂ ಆರಂಭದಲ್ಲಿ ಭರ್ತಿಮಾಡುವುದು. ಇವುಗಳಲ್ಲಿ ಯಾವುದು ಮೊದಲು ಅದನ್ನು ಪರಿಗಣಿಸುವುದು.
- ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು.

# ಶಿಕ್ಷಣ ಸಂಸ್ಥೆಗಳ ನೌಕರರು ನೀಡಬೇಕಾಗಿರುವ ಘೋಷಣೆ

- ನಾನು ಇದನ್ನು ಓದಿ, ಅರ್ಥಮಾಡಿಕೊಂಡು ಮತ್ತು *ನೀತಿ ಸಂಹಿತೆಯಲ್ಲಿ ತಿಳಿಸಿರುವಂತೆ ಅನುಸರಿಸಲು ಒಪ್ಪಿರುತ್ತೇನೆ.* ಮಕ್ಕಳ ರಕ್ಷಣೆ, ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ನನ್ನ ಬದ್ಧತೆಗಳು ಮತ್ತು ಜವಾಬ್ದಾರಿಗಳ ಬಗ್ಗೆ ನನಗೆ ಅರಿವಿರುತ್ತದೆ ಮತ್ತು ಶಿಕ್ಷಣ ಸಂಸ್ಥೆಯ ಒಳಗೆ ಮತ್ತು ಹೊರಗೆ ವೃತ್ತಿಪರ ನೈತಿಕತೆಗೆ
  ಬದ್ಧನಾಗಿರುತ್ತೇನೆ.
- ನೌಕರನ ಹೆಸರು : ------------------------------------
- ನೌಕರನ ಪದನಾಮ :------------------------------------
- ನೌಕರನ ಸಹಿ :-----------------------------------------
- ದಿನಾಂಕ :------------------------------------------
- ಸ್ಥಳ :-------------------------------------------

# ಘಟನೆಗೆ ಸಂಬಂಧಿಸಿದಂತೆ ಮಕ್ಕಳ ರಕ್ಷಣಾ ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳು :

- ಪ್ರಕರಣ ವರದಿಯಾದಲ್ಲಿ ಮಕ್ಕಳ ರಕ್ಷಣಾ ಸಮಿತಿಯು ಆದಷ್ಟು ಬೇಗನೆ ನಿಯಮಿತ ಅನುಸರಣೆಯೊಂದಿಗೆ ಪ್ರಕರಣ ಅಂತ್ಯಗೊಳ್ಳುವರೆಗೆ ಸಭೆಸೇರುವುದು. ಕಲಂ 5 ರಲ್ಲಿ ಪರಿಶೀಲನಾ ಕಾರ್ಯವಿಧಾನಗಳನ್ನು ವಿವರಿಸಲಾಗಿದೆ.
- 2. ಘಟನೆಯು ವರದಿಯಾದಾಗ ಮಕ್ಕಳ ರಕ್ಷಣಾ ಸಮಿತಿ ಮತ್ತು ಶಿಕ್ಷಣ ಸಂಸ್ಥೆಯ ಆಡಳಿತವು ಮಗುವಿನ ಹಿತಾಸಕ್ತಿಯನ್ನು ಕಾಪಾಡಲು ಅವರ ಸುರಕ್ಷತೆ, ಭದ್ರತೆ, ಗೌಪ್ಯತೆ ಮತ್ತು ಏಕಾಂತತೆಯ ಹಕ್ಕನ್ನು ಗಮನದಲ್ಲಿಟ್ಟುಕೊಂಡು ತನಿಖೆ ನಡೆಯುವಾಗ ಪೊಲೀಸ್, ನ್ಯಾಯಾಂಗ ಮತ್ತು ಸ್ಥಳೀಯ ಆಡಳಿತದೊಂದಿಗೆ ಕಾನೂನುಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ಸಹಕರಿಸುವುದು.
- 3. ಮಕ್ಕಳ ರಕ್ಷಣಾ ಸಮಿತಿಯು ಘಟನೆಯಿಂದ ಇತರೆ ಮಕ್ಕಳು, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ವಯಸ್ಕರು ಮತ್ತು ಶಿಕ್ಷಣ ಸಂಸ್ಥೆಯ ಮೇಲಾಗುವ ಪರಿಣಾಮಗಳನ್ನು ನಿರ್ಣಯಿಸುವುದು ಮತ್ತು ಬಗೆಹರಿಸುವುದು.
- 4. ಮಕ್ಕಳ ರಕ್ಷಣಾ ಸಮಿತಿಯು ತನ್ನ ಅನುಭವದ ಆದಾರದ ವಿಶ್ಲೇಷಣೆಯನ್ನಾಧರಿಸಿ ಮಕ್ಕಳ ಮೇಲಿನ
- ಹಲ್ಲೆಗೆ ಅಥವಾ ನಿಂದನೆಗೆ ಕಾರಣವಾದ ಅಂಶಗಳನ್ನು ಅರ್ಥಮಾಡಿಕೊಂಡು ತನ್ನ ಜ್ಞಾನದ ಹಿನ್ನೆಲೆಯಲ್ಲಿ ಶಿಕ್ಷಣ ಸಂಸ್ಥೆಗೆ (ವಯಸ್ಕರು, ವಿದ್ಯಾರ್ಥಿಗಳು, ಮಕ್ಕಳು, ಆಡಳಿತ ಮಂಡಳಿ, ಸೇವಾ ಪೂರೈಕೆದಾರರು) ಪುನಶ್ಚೇತನ ತರಬೇತಿಯನ್ನು ಶಿಫಾರಸ್ಸುಮಾಡುವುದು.

# ಅಧ್ಯಕ್ಷರು ಮತ್ತು ಮಕ್ಕಳ ರಕ್ಷಣಾಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳು :

- ಅಧ್ಯಕ್ಷರು : ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರು/ಸಂಸ್ಥೆಯ ಮುಖ್ಯಸ್ಥರು ಮಕ್ಕಳ ರಕ್ಷಣಾ
- ಸಮಿತಿಯ ಅಧ್ಯಕ್ಷರಾಗಿರುವರು ಮತ್ತು ಅವರು ಕೆಳಕಂಡ ಜವಾಬ್ದಾರಿಗಳನ್ನು ನಿರ್ವಹಿಸುವರು.
- ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸುವುದು ಮತ್ತು ಸದರಿ ಮಾರ್ಗಸೂಚಿಗಳನ್ನು ಪಾಲಿಸುವುದು.
- ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲಾ ಸಿಬ್ಬಂದಿಗಳೊಂದಿಗೆ ಸಹಕರಿಸಿ ಮತ್ತು ಮಾರ್ಗಸೂಚಿಗಳನ್ವಯ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತಾ ಉಲ್ಲಂಘನೆಗಳನ್ನು ಅಧಿಕೃತ ನಮೂನೆಯಲ್ಲಿ ದಾಖಲಿಸುವುದು.
- ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಹಮ್ಮಿಕೊಳ್ಳುವುದು.
- ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಹಕಾರದೊಂದಿಗೆ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಅನುಷ್ಠಾನದ ವಾರ್ಷಿಕ ಪರಿಶೀಲನೆಯನ್ನು ನಡೆಸುವುದು ಮತ್ತು ಮಕ್ಕಳ ರಕ್ಷಣಾ ಸಮಿತಿ, ಸಂಬಂಧಿಸಿದ ಸಿಬ್ಬಂದಿಗಳು ಮತ್ತು ಸಂಸ್ಥೆಗಳನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯೊಂದಿಗೆ ಪ್ರತಿ ಮೂರು ವರ್ಷಗಳಿಗೊಮ್ಮೆ ಪರಿಶೀಲಿಸುವುದು.

- <u>ಮಕ್ಕಳ ರಕ್ಷಣಾಧಿಕಾರಿ :</u> ಸಮಿತಿಯ ಅಧ್ಯಕ್ಷರಿಗೆ ಸಹಕಾರವನ್ನು ನೀಡಲು ಶಿಕ್ಷಣ ಸಂಸ್ಥೆಯಲ್ಲಿನ ಬೋಧನಾ ಸಿಬ್ಬಂದಿಯಲ್ಲಿ ಒಬ್ಬರನ್ನು ಮಕ್ಕಳ ರಕ್ಷಣಾಧಿಕಾರಿಯನ್ನಾಗಿ ನೇಮಿಸುವುದು. ಮಕ್ಕಳ ರಕ್ಷಣಾಧಿಕಾರಿಯು ಸಂಸ್ಥೆಯ ಶಾಶ್ವತ ಸಿಬ್ಬಂದಿಯಾಗಿರುವುದು ಮತ್ತು ಮಹಿಳಾ ಸಿಬ್ಬಂದಿಯನ್ನು ನೇಮಿಸಲು ಒತ್ತುನೀಡುವುದು ಹಾಗೂ ಇವರು ಕನಿಷ್ಠ ಐದು ವರ್ಷಗಳ ಅನುಭವವನ್ನು ಹೊದಿರುವುದು. ಮಕ್ಕಳ ರಕ್ಷಣಾಧಿಕಾರಿಯ ಪಾತ್ರ ಮತ್ತು ಜವಾಬ್ದಾರಿಗಳು ಕೆಳಕಂಡಂತಿವೆ.
- ಮೌಖಿಕ ಅಥವಾ ಲಿಖಿತವಾಗಿ ಸ್ವೀಕರಿಸಲಾದ ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆಯ ಪ್ರಕರಣಗಳನ್ನು ನೋಂದಾಯಿಸಿಕೊಳ್ಳುವುದು ಮತ್ತು ಅದರ ಗೌಪ್ಯತೆಯನ್ನು ಕಾಪಾಡುವುದು.
- ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಮತ್ತು ಕಡತಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.
- ಮಗುವಿನ ದುರುಪಯೋಗವೂ ಸೇರಿದಂತೆ, ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳನ್ನು ಕಾನೂನು ಸಮ್ಮತವಾಗಿ ವರದಿ ಮಾಡುವುದು, ಪೋಲಿಸ್ ಮತ್ತು ಇತರೆ ಸ್ಥಳೀಯ ಆಡಳಿತದೊಂದಿಗೆ ಸಹಕರಿಸುವುದು ಹಾಗೂ ಘಟನೆಯನ್ನು ಮರೆಮಾಚುವ ಪ್ರಯತ್ನ ಮಾಡುವುದು ಅಥವಾ ಮಕ್ಕಳ ಪೋಷಕರು ಅಥವಾ ಇತರೆ ಪ್ರಾಧಿಕಾರಗಳ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳುವುದು.
- ಶಾಲೆಯ ಮುಖ್ಯಸ್ಥರು ಮತ್ತು ಸಮಿತಿಯ ಅಧ್ಯಕ್ಷರ ವಿರುದ್ಧ ಮಕ್ಕಳ ಸುರಕ್ಷತೆಯ ಉಲ್ಲಂಘನೆ ಅಥವಾ ಮಕ್ಕಳ ದುರುಪಯೋಗದ ಆಪಾದನೆಗಳು ಕಂಡುಬಂದಲ್ಲಿಯೂ ಸಹ ನಿಯಮಗಳ ಅನುಸಾರ ಕ್ರಮಕೈಗೊಳ್ಳುವುದು.
- ಶಿಕ್ಷಣ ಸಂಸ್ಥೆಯ ಮಕ್ಕಳ ಸಂರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಸಂಯೋಜಿಸುವುದು.

## 4.2.2 ಶಾಲಾ ನಿರ್ವಹಣಾ ಸಮಿತಿ (SDMC) ಅಥವಾ ಪೋಷಕ–ಶಿಕ್ಷಕರ ಸಂಘ (PTA)

- ಸೂಕ್ತ ಪ್ರಾಧಿಕಾರದಿಂದ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ವಯ ಶಾಲಾ ನಿರ್ವಹಣಾ ಸಮಿತಿ ಅಥವಾ ಪೋಷಕ–ಶಿಕ್ಷಕರ ಸಂಘವನ್ನು ರಚಿಸುವುದು.
- ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲಾ ರಕ್ಷಣಾ ಮತ್ತು ಸುರಕ್ಷತಾ ಅಂಶಗಳು, ಎಲ್ಲಾ ಸಿಬ್ಬಂದಿಗಳ ನಡವಳಿಕೆ ಮತ್ತು ಮನೋಭಾವ, ವಿದ್ಯಾರ್ಥಿಗಳು ಮತ್ತು ಪೋಷಕರ ಸುರಕ್ಷತಾ ಅಂಶಗಳ ಬಗ್ಗೆ ಚರ್ಚಿಸಲು ಶಾಲಾ ನಿರ್ವಹಣಾ ಸಮಿತಿ ಅಥವಾ ಪೋಷಕ ಶಿಕ್ಷಕರ ಸಂಘಗಳು ನಿಯಮಿತವಾಗಿ ಸಭೆಗಳನ್ನು ನಡೆಸುವುದು.

# 4.2.3 ಸಲಹಾ ಪೆಟ್ಟಿಗೆ

- ಶಿಕ್ಷಣ ಸಂಸ್ಥೆಯು **ಮಕ್ಕಳಿಗಾಗಿ ಸಲಹಾ ಪೆಟ್ಟಿಗೆಯನ್ನು ಹೊಂದಿರುವುದು.** ಮಕ್ಕಳು ಸಂಭವಿಸಿದ ಘಟನೆಯನ್ನು ವಯಸ್ಕರಿಗೆ ವರದಿಮಾಡುವ ಬದಲು, ತಮ್ಮ ಕಾಳಜಿಗಳು/ದೂರುಗಳು/ಸಲಹೆಗಳನ್ನು ಸಲಹಾ ಪೆಟ್ಟಿಗೆಯಲ್ಲಿ ಹಾಕಲು ಇಚ್ಛಿಸಬಹುದು. ಈ ವ್ಯವಸ್ಥೆಯನ್ನು ಪರಿಣಾಮಕಾರಿ ಪ್ರತಿಕ್ರಿಯೆಯ ವ್ಯವಸ್ಥೆಯನ್ನಾಗಿ ಬಳಸಲು ಮತ್ತು ಸದೃಢಗೊಳಿಸಲು
- ಶಿಫಾರಸ್ಸು ಮಾಡಿರುವ ಅಂಶಗಳು ಕೆಳಕಂಡಂತಿವೆ:
- **ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಯಲ್ಲಿ ಒಂದಕ್ಕಿಂತ ಹೆಚ್ಚು ಸಲಹಾ ಪೆಟ್ಟಿಗೆಗಳನ್ನು ಮಕ್ಕಳು ಗೌಪ್ಯತೆಯಿಂದ ಬಳಸಲು ಅನುಗುಣವಾಗಿ ವಿವಿಧ ಸ್ಥಳಗಳಲ್ಲಿ ಲಭ್ಯವಿರುವಂತೆ ಇಡುವುದು.**

# ಅ. ಸಲಹಾ ಪೆಟ್ಟಿಗೆಯಲ್ಲಿನ ಶಿಫಾರಸುಗಳು/ದೂರುಗಳಿಗೆ ಪ್ರತಿಕ್ರಿಯೆ ನೀಡುವಿಕೆ :

- ಮಕ್ಕಳ ರಕ್ಷಣಾಧಿಕಾರಿಯು, ಶಿಫಾರಸುಗಳು/ದೂರುಗಳನ್ನು ಮಕ್ಕಳ ಪ್ರತಿನಿಧಿಯ ಸಮ್ಮುಖದಲ್ಲಿ ಓದುವುದು ಮತ್ತು ಅವುಗಳನ್ನು ಸೂಕ್ತ ಕ್ರಮಕ್ಕಾಗಿ ಸುರಕ್ಷತಾ ಉಲ್ಲಂಘನೆಗಳು ಮತ್ತು ಅಸುರಕ್ಷಿತ ಉಲ್ಲಂಘನೆಳೆಂಬುದಾಗಿ ವಿಂಗಡಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಮಗುವಿನ ದುರುಪಯೋಗವು ಸೇರಿದಂತೆ ಮಕ್ಕಳ ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳಿದ್ದಲ್ಲಿ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ಹೇಳಿರುವ ಪ್ರಕ್ರಿಯೆಯನ್ನು ಅನುಸರಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಸಲಹೆಗಳ ಪುಸ್ತಕವನ್ನು ನಿರ್ವಹಿಸುವುದು ಮತ್ತು ದೂರುಗಳೊಂದಿಗೆ ಸಲಹೆಗಳು ಮತ್ತು ತೆಗೆದುಕೊಂಡಿರುವ ಕ್ರಮದ ವರದಿಯನ್ನು ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುವುದು ಹಾಗೂ ಇದನ್ನು ಮಕ್ಕಳ ರಕ್ಷಣಾ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸುವುದು.

ವಿಜಯ ಕರ್ನಾಟಕ
VIJAY KARNATAKA
VK Namma Koppal / 25.12.2024

### ವಸತಿ ಶಾಲೆಯ ವಿದ್ಯಾರ್ಥಿನಿಯರ ಗಾಂಧಿಗಿರಿ | ಜಾಗೃತಿಯ ಸದ್ಬಳಕೆಯಲ್ಲಿ ಮಾದರಿ

# ಲೈಂಗಿಕ ಶೋಷಣೆ ಬಿಚ್ಚಿಟ್ಟ ಪೆಟ್ಟಿಗೆ!

■ **ಶ್ರೀಕಾಂತ ಅಕ್ಕಿ** ಕೊಪ್ಪಳ
shreekanta.akki@timesofindia.com

ಅಡುಗೆ ಸರಿಯಿಲ್ಲ, ಕುಡಿವ ನೀರು, ಶೌಚಾಲಯ ವ್ಯವಸ್ಥೆ ಸಮರ್ಪಕವಾಗಿಲ್ಲ, ಸೊಳ್ಳೆಗಳ ಕಾಟ, ಸ್ವಚ್ಛತೆಯಿಲ್ಲ... ಇಂತಹ ಸಮಸ್ಯೆಗಳ ಬಗ್ಗೆ ಬೆಳಕುಚೆಲ್ಲುತ್ತಿದ್ದ ಸಲಹಾ ಪೆಟ್ಟಿಗೆ, ವ್ಯಕ್ತಿಯೊಬ್ಬರು ನೀಡಿದ ಲೈಂಗಿಕ ಶೋಷಣೆಯನ್ನು ಮೊದಲ ಬಾರಿ ಬಿಚ್ಚಿಟ್ಟಿದೆ!

ಜಿಲ್ಲೆಯ ವಸತಿ ಶಾಲೆಯೊಂದರಲ್ಲಿ ವಿದ್ಯಾರ್ಥಿನಿಯರು ಎದುರಿಸುತ್ತಿದ್ದ ಅನೈಸರ್ಗಿಕ, ಅಸಹನೀಯ ಸ್ಪರ್ಶ, ಲೈಂಗಿಕ ಶೋಷಣೆಯನ್ನು ಈ ಚೀಟಿಗಳು ಎಳೆಎಳೆಯಾಗಿ ಬಿಚ್ಚಿಟ್ಟ ಪರಿಣಾಮವಾಗಿ ವಸತಿ ಶಾಲೆಯ ಅಡುಗೆ ಸಹಾಯಕನೊಬ್ಬ ಸದ್ಯ ಪೊಲೀಸರ ಅತಿಥಿಯಾಗಿದ್ದಾನೆ.

ಹೊರಗುತ್ತಿಗೆಯಡಿ ಕೆಲಸ ಮಾಡುತ್ತಿದ್ದ ಈತ ಹಲವು ದಿನಗಳಿಂದ ವಿದ್ಯಾರ್ಥಿನಿಯರಿಗೆ ಮುಜುಗರವಾಗುವಂತೆ ಸ್ಪರ್ಶಿಸುತ್ತಿದ್ದ. ಓದುವಾಗ, ಬರೆಯುವಾಗ ಪಕ್ಕದಲ್ಲಿ ಕೂಡುತ್ತಿದ್ದ, ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದ ಎಂಬ ಸಂಗತಿ ಬಹಿರಂಗವಾಗಿದೆ. ಮಕ್ಕಳ ಸುರಕ್ಷತಾ ನೀತಿಯ ಭಾಗವಾದ ಸಲಹಾ ಪೆಟ್ಟಿಗೆ, ಸಂತ್ರಸ್ತ ವಿದ್ಯಾರ್ಥಿನಿಯರ ಪಾಲಿಗೆ ಹೋರಾಟದ ಪ್ರಮುಖ ಅಸ್ತ್ರವಾಗಿದೆ.

ಜಿಲ್ಲೆಯಲ್ಲಿರುವ ಎಲ್ಲ ಶಾಲಾ ಕಾಲೇಜು ಹಾಗೂ ವಸತಿ ನಿಲಯಗಳಲ್ಲಿರುವ ಮಕ್ಕಳಿಗೆ ಸುರಕ್ಷತೆ ಭರವಸೆ ಒದಗಿಸುವ ದೃಷ್ಟಿಯಿಂದ ಮಕ್ಕಳ ಸುರಕ್ಷತೆ ನೀತಿ ಕುರಿತು ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ. ಜಿಲ್ಲೆಯ ವಸತಿ ಶಾಲೆಯೊಂದರಲ್ಲಿ ವಿದ್ಯಾರ್ಥಿನಿಯರ ಮೇಲೆ ನಡೆಯುತ್ತಿದ್ದ ಶೋಷಣೆ ಬೆಳಕಿಗೆ ಬಂದಿರುವುದಕ್ಕೆ ಈ ಕುರಿತು ಜಾಗೃತಿ ಕಾರಣವಾಗಿದೆ. ವಸತಿ ಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಅಡುಗೆ ಸಹಾಯಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

**-ನಲೀನ್ ಅತುಲ್** ಜಿಲ್ಲಾಧಿಕಾರಿ, ಕೊಪ್ಪಳ




## ಏನಿದು ಸಲಹಾ ಪೆಟ್ಟಿಗೆ?

ಶಾಲಾ-ಕಾಲೇಜು, ವಸತಿ ನಿಲಯಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ಜಿಲ್ಲಾಡಳಿತ ಕಳೆದ ಹಲವು ದಿನಗಳಿಂದ ನಿರಂತರ ಪ್ರಯತ್ನಿಸುತ್ತಿದೆ. ಶಾಲಾ-ಕಾಲೇಜುಗಳು, ವಸತಿ ನಿಲಯಗಳಿಗೆ ತೆರಳುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು, ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಲೈಂಗಿಕ ಶೋಷಣೆ, ಅಸುರಕ್ಷಿತ ಸ್ಪರ್ಶದ ಕುರಿತು ತಿಳಿವಳಿಕೆ ನೀಡುತ್ತಿದ್ದಾರೆ. ಇಂತಹ ಸಂದರ್ಭಗಳನ್ನು ಹೇಗೆ ಎದುರಿಸಬೇಕು? ಎಂಬ ಮಾರ್ಗವನ್ನೂ ತಿಳಿಸಲಾಗುತ್ತದೆ. ಸುರಕ್ಷತೆ ನೀತಿಯಡಿ ಬರುವ ಮಕ್ಕಳ ಸಹಾಯವಾಣಿ, ಸಲಹಾ ಪೆಟ್ಟಿಗೆ, ಮಕ್ಕಳ ಹಕ್ಕುಗಳ ಸಮಿತಿ ರಚನೆ ಕುರಿತು ಮಾಹಿತಿ ನೀಡಲಾಗಿದೆ. ಅಧಿಕಾರಿಗಳ ಮಾಹಿತಿಯಿಂದ ಜಾಗೃತರಾದ ವಸತಿ ನಿಲಯದ ವಿದ್ಯಾರ್ಥಿನಿಯರು, ಸಲಹಾ ಪೆಟ್ಟಿಗೆಯಲ್ಲಿ ಸಾಮೂಹಿಕವಾಗಿ ದೂರುಗಳನ್ನು ಬರೆದು ಹಾಕಿದ್ದಾರೆ. ತಮಗಾದ ಲೈಂಗಿಕ ಶೋಷಣೆ ಕುರಿತು ದೂರಿನಲ್ಲಿ ವಿವರಿಸಿದ್ದಾರೆ. ಮಕ್ಕಳ ಸುರಕ್ಷತೆ ನೀತಿ ಅರಿತ ವಿದ್ಯಾರ್ಥಿನಿಯರು ಸಲಹಾ ಪೆಟ್ಟಿಗೆಯಲ್ಲಿ ದೂರುಗಳ ಗುಚ್ಛವನ್ನು ಹಾಕಿದ್ದಾರೆ. ವಿದ್ಯಾರ್ಥಿನಿಯರು ಮೌನವಹಿಸಿದ್ದರೆ ಲೈಂಗಿಕ ಕಿರುಕುಳದ ಪ್ರಕರಣ ಬಯಲಿಗೆ ಬರುತ್ತಿರಲಿಲ್ಲ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ತಿಳಿಸಿದ್ದಾರೆ.

## ಪ್ರಕರಣ ದಾಖಲು, ಆರೋಪಿ ಬಂಧನ

ಒಂದು ಹಂತದಲ್ಲಿ ವಿದ್ಯಾರ್ಥಿನಿಯರು ಎದುರಿಸಿದ ಲೈಂಗಿಕ ಶೋಷಣೆಗೆ ಸಂಬಂಧಿಸಿದ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ತೆರೆಮರೆಯಲ್ಲಿ ಜೋರಾಗಿ ನಡೆದಿತ್ತು ಎನ್ನಲಾಗಿದೆ. ಮಕ್ಕಳ ಹಕ್ಕುಗಳ ಆಯೋಗ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ನೊಂದ ವಿದ್ಯಾರ್ಥಿನಿಯರಿಗೆ ಬೆಂಗಾವಲು ಆದವು. ಈ ಅಧಿಕಾರಿಗಳು ತುಂಬಿದ ಮಾನಸಿಕ ಸ್ಥೈರ್ಯದಿಂದ ವಸತಿ ಶಾಲೆಯ ಪ್ರಾಚಾರ್ಯರು ಪೊಲೀಸ್ ಠಾಣೆಗೆ ದೂರು ನೀಡಲು ಮುಂದಾದರು. ವಸತಿ ನಿಲಯದ ಅಡುಗೆ ಸಹಾಯಕನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಕಾರಟಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿ, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು, ವಿಚಾರಣೆ ಮುಂದುವರಿದಿದೆ.

ಗುರುವಾರ, 14 ಅಕ್ಟೋಬರ್ 2021
www.vijaykarnataka.com
VK
ವಿಜಯ ಕರ್ನಾಟಕ
PRIDE OF YOUNG KARNATAKA

ಲಖೀಮ್‌ಪುರ ಹಿಂಸಾಚಾರ: ಅಜಯ್ ಮಿಶ್ರಾ ವಜಾಕ್ಕೆ ಆಗ್ರಹಿಸಿ ರಾಷ್ಟ್ರಪತಿ ಭೇಟಿ ಮಾಡಿದ ಕಾಂಗ್ರೆಸ್

43 ವಿಜಯ ಕರ್ನಾಟಕ ಇಂದು 43 ಪುಟಗಳ ಭರಪೂರ ಸಂಚಿಕೆ

ಅಂತಾರಾಷ್ಟ್ರೀಯ ಫುಟ್ಬಾಲ್‌ನಲ್ಲಿ 10 ಬಾರಿ ಹ್ಯಾಟ್ರಿಕ್ ಗೋಲ್ ಬಾರಿಸಿ ರೊನಾಲ್ಡೊ ವಿಶ್ವದಾಖಲೆ P09

# ಕೃಷಿ ಹೊಂಡ, ಬಾವಿಗಳಿಗೆ ತಡೆಗೋಡೆ

## ಸುರಕ್ಷತೆಗಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ನಿರ್ದೇಶನ

■ **ವಿಜಯ್ ಕುಮಾರ್ ಆರ್.**

**ಗಜ್ಜರಹಳ್ಳಿ** ತುಮಕೂರು

ಕೃಷಿ ಹೊಂಡ, ಕೆರೆ-ಕಟ್ಟೆ ಮೊದಲಾದ ಜಲಮೂಲಗಳಿಗೆ ಬಿದ್ದು ಮಕ್ಕಳು ಸಾವನ್ನಪ್ಪಿರುವ ಪ್ರಕರಣಗಳು ಹೆಚ್ಚುತ್ತಿವೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಸುರಕ್ಷತಾ ಕ್ರಮಗಳ ಮಾರ್ಗಸೂಚಿ ಹೊರಡಿಸಿದೆ.

ಮಕ್ಕಳು ಮತ್ತು ಮೂಕ ಪ್ರಾಣಿಗಳು ಕೃಷಿ ಹೊಂಡ, ಬಾವಿ ಮತ್ತಿತರ ತೆರೆದ ಜಲಮೂಲಗಳ ಕಡೆಗೆ ಹೋಗದಂತೆ ಸುತ್ತಲೂ ಮುಳ್ಳುತಂತಿ ಅಥವಾ ತಡೆಗೋಡೆ ನಿರ್ಮಿಸಬೇಕು ಎಂದು ಮಾರ್ಗಸೂಚಿಯಲ್ಲಿ ನಿರ್ದೇಶನಾಲಯವು ಹೇಳಿದೆ.

ರಾಜ್ಯಾದ್ಯಂತ ಕೆರೆ, ಕಟ್ಟೆ, ಕೃಷಿ ಹೊಂಡ ಮುಂತಾದ ತೆರೆದ ಜಲಮೂಲಗಳ ಸಮೀಪದಲ್ಲಿ ಮಕ್ಕಳು ನೀರಲ್ಲಿ ಆಟವಾಡುವಾಗ, ಅಥವಾ ಸೆಲ್ಫಿ ತೆಗೆಯಲು ಹೋಗಿ ನೀರು ಪಾಲಾಗುತ್ತಿದ್ದಾರೆ. ಕಳೆದ ಐದು ವರ್ಷಗಳಲ್ಲಿ ತುಮಕೂರು ಜಿಲ್ಲೆಯೊಂದರಲ್ಲೇ 328 ಮಕ್ಕಳು ಜಲಮೂಲಗಳಿಗೆ ಬಿದ್ದು ಸಾವನ್ನಪ್ಪಿದ್ದಾರೆ. ಇದಕ್ಕೆ ಪುಷ್ಟಿ ನೀಡುವಂತೆ ಇತ್ತೀಚೆಗೆ ತಿಪಟೂರು ತಾಲೂಕಿನ ಬೊಮ್ಮಲಾಪುರ ಗ್ರಾಮದಲ್ಲಿ ಜಾನುವಾರು ತೊಳೆಯಲು ಹೋಗಿ ಕೃಷಿ ಹೊಂಡಕ್ಕೆ ಬಿದ್ದು ಸಹೋದರರಿಬ್ಬರು ಸಾವನ್ನಪ್ಪಿದ್ದರು. ರಾಜ್ಯದಲ್ಲಿ ಪ್ರತಿ ವರ್ಷ ಇಂತಹ ನೂರಾರು ದುರ್ಘಟನೆಗಳು ವರದಿಯಾಗುತ್ತಿದ್ದು, ಸುರಕ್ಷಾ ಕ್ರಮಗಳಿಗೆ ಒತ್ತಾಯಿಸಿ ರಾಷ್ಟ್ರೀಯ ಯುವಜನ ಅಭಿವೃದ್ಧಿ ನಿಧಿ ಸದಸ್ಯ ಕೆ.ಟಿ.ತಿಪ್ಪೇಸ್ವಾಮಿ ಅವರು ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆದಿದ್ದರು. ಅವರ ಪತ್ರದ ವಿಚಾರ ನಮೂದಿಸಿ ಮಕ್ಕಳ ರಕ್ಷಣಾ ನಿರ್ದೇಶನಾಲಯ ಸುತ್ತೋಲೆ ಹೊರಡಿಸಿದ್ದು, ಸೂಕ್ತ ಕ್ರಮಕ್ಕೆ ಜಿಲ್ಲಾಡಳಿತಗಳು ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿದೆ.

''ಮಕ್ಕಳ ಸಾವು ಗಂಭೀರ ವಿಚಾರವಾಗಿದ್ದು, ಪೋಷಕರು ಎಚ್ಚೆತ್ತುಕೊಳ್ಳಬೇಕಿದೆ. ಮಕ್ಕಳ ರಕ್ಷಣೆ ನಿಟ್ಟಿನಲ್ಲಿ ಸರಕಾರ ಮಹತ್ವದ ನಿರ್ಣಯ ಕೈಗೊಂಡಿದೆ. ಸುತ್ತೋಲೆ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಇಲಾಖೆಗಳ ಪಾತ್ರ ಮುಖ್ಯವಾಗಿದ್ದು, ಕೂಡಲೇ ಸುತ್ತೋಲೆ ಕಾರ್ಯರೂಪಕ್ಕೆ ಬರಬೇಕಿದೆ,'' ಎಂದು ಕೆ.ಟಿ.ತಿಪ್ಪೇಸ್ವಾಮಿ ತಿಳಿಸಿದ್ದಾರೆ.

**ಎಲ್ಲೆಲ್ಲಿ ಕ್ರಮಗಳು?:** ಕೆರೆ, ಕಟ್ಟೆ, ಮ್ಯಾನ್ ಹೋಲ್, ಕೃಷಿ ಹೊಂಡ, ತೆರೆದ ಬಾವಿಗಳು, ಕಲ್ಯಾಣಿಗಳು, ಕೊಳವೆ ಬಾವಿಗಳು, ಕೊಳಚೆ ಚರಂಡಿಗಳು, ನೀರ್ಗಾಲುವೆಗಳು, ನದಿ-ಜಲಪಾತಗಳ ತೀರ, ಸಂಪು, ಕಲ್ಲು ಕ್ವಾರಿಗಳು, ಈಜುಕೊಳ, ಶಾಲಾ ಪರಿಮಿತಿ ಮುಂತಾದ ಕಡೆಗಳಲ್ಲಿ ಮಕ್ಕಳ ಸಂರಕ್ಷಣಾ ದೃಷ್ಟಿಯಲ್ಲಿ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಸೂಕ್ತವೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



### ಸುತ್ತೋಲೆಯಲ್ಲಿ ಏನಿದೆ?



- ಕೃಷಿ ಹೊಂಡ, ಬಾವಿ ಮತ್ತಿತರ ತೆರೆದ ಜಲಮೂಲಗಳ ಕಡೆಗೆ ಹೋಗದಂತೆ ಸುತ್ತಲೂ ಮುಳ್ಳುತಂತಿ ಅಥವಾ ತಡೆಗೋಡೆ ನಿರ್ಮಿಸಬೇಕು.
- ಮುನ್ನೆಚ್ಚರಿಕೆಗಾಗಿ 'ಆಳವಿದೆ', 'ಮೊಸಳೆಗಳಿವೆ' ಎಂಬಿತ್ಯಾದಿ ಅಪಾಯ ಸೂಚನಾ ಫಲಕಗಳನ್ನು ಅಳವಡಿಸಬೇಕು.
- ಶಾಲಾ-ಕಾಲೇಜು, ಅಂಗನವಾಡಿಗಳಲ್ಲಿ ಹಾಗೂ ಗ್ರಾಪಂಗಳಲ್ಲಿ ಪೋಷಕರ ಸಭೆ ಕರೆದು ಮಕ್ಕಳ ರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು.





ಯಾರು ಹೊಣೆ???


ಮಕ್ಕಳ ಬಲಿಗೆ
ಕಾದು ಕುಳಿತ
ಹೊಂಡಗಳು

ವಿಜಯವಾಣಿ ನಂ. 1

# ವಿದ್ಯುತ್ ತಂತಿ ತೆರವುಗೊಳಿಸಿ

## ಎಸ್ಕಾಂಗಳಿಗೆ ಹೈಕೋರ್ಟ್ ನಿರ್ದೇಶನ | ವಿದ್ಯಾರ್ಥಿ ಸಾವು ಪ್ರಕರಣ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ತುಮಕೂರು ತಾಲೂಕಿನ ಕರೀಕೆರೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಗಾಗಿ ಧ್ವಜಸ್ತಂಭ ಅಳವಡಿಸುವ ವೇಳೆ ವಿದ್ಯುತ್ ಪ್ರವಹಿಸಿ ವಿದ್ಯಾರ್ಥಿಯೊಬ್ಬ ಮೃತಪಟ್ಟ ಹಿನ್ನೆಲೆಯಲ್ಲಿ, ರಾಜ್ಯಾದ್ಯಂತ ಶಾಲೆಗಳ ಮೇಲೆ ಹಾದುಹೋಗಿರುವ ಎಲ್ಲ ವಿದ್ಯುತ್ ತಂತಿಗಳ ತೆರವಿಗೆ ಹೈಕೋರ್ಟ್ ಆದೇಶಿಸಿದೆ.



» **ಶಾಲೆಗಳ ಮೇಲೆ ಹಾದು ಹೋಗಿರುವ ತಂತಿಗಳ ತೆರವಿಗೆ ತಾಕೀತು**

ಕೊಪ್ಪಳ ನಗರದ ಬನ್ನಿಕಟ್ಟಿ ಬಳಿಯ ಬಿಸಿಎಂ ಹಾಸ್ಟೆಲ್‌ನಲ್ಲಿ 2019ರ ಆ.15ರಂದು ಧ್ವಜಸ್ತಂಭ ತೆರವುಗೊಳಿಸುವ ವೇಳೆ ವಿದ್ಯುತ್ ತಂತಿ ತಗುಲಿ ಐವರು ವಿದ್ಯಾರ್ಥಿಗಳು ಮೃತಪಟ್ಟ ಪ್ರಕರಣ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಂಡಿದೆ.

ಸೋಮವಾರ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಸಿಜೆ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಪಿಐಎಲ್ ಸಂಬಂಧ ಕೆಪಿಟಿಸಿಎಲ್ ಹಾಗೂ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂ) ನೋಟಿಸ್ ಜಾರಿಗೊಳಿಸಿ ರಾಜ್ಯದಲ್ಲಿ ಶಾಲೆಗಳ ಮೇಲೆ ಹಾದುಹೋಗಿರುವ ವಿದ್ಯುತ್ ಮಾರ್ಗಗಳನ್ನು ತೆರವುಗೊಳಿಸುವಂತೆ ಆದೇಶಿಸಿತು.

**ಜಿಲ್ಲಾಧಿಕಾರಿ ವರದಿಗೆ ಆಕ್ಷೇಪ:** ತುಮಕೂರು ಅವಘಡಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಸಲ್ಲಿಸಿದ್ದ ವರದಿಯಲ್ಲಿ, ಮಕ್ಕಳೇ ಉತ್ಸಾಹದಿಂದ ಧ್ವಜಾರೋಹಣಕ್ಕೆ ಮುಂದಾಗಿದ್ದರು ಎಂದು ಹೇಳಿರುವುದಕ್ಕೆ ನ್ಯಾಯಪೀಠ ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಪ್ರಾಂಶುಪಾಲರು ಅಥವಾ ಶಿಕ್ಷಕಕರ ನಿರ್ದೇಶನವಿಲ್ಲದೆ ಇಂಥ ಕೆಲಸಗಳನ್ನು ಮಕ್ಕಳು ಮಾಡುವುದಿಲ್ಲ. ವರದಿ ಗಮನಿಸಿದರೆ ಜಿಲ್ಲಾಧಿಕಾರಿಗಳು ಶಾಲಾ ಅಧಿಕಾರಿಗಳ ಜತೆ ಶಾಮೀಲಾಗಿ ಘಟನೆಗೆ ಬೇರೆ ಬಣ್ಣ ನೀಡಲು ಯತ್ನಿಸಿರುವಂತಿದೆ ಎಂದು ಹೇಳಿತು.

### ಸಮೀಕ್ಷಾ ವರದಿ ಸಲ್ಲಿಸಿ

ಪ್ರಕರಣದ ಅಮಿಕಸ್ ಕ್ಯೂರಿಯಾಗಿರುವ ವಕೀಲೆ ಬಿ.ವಿ. ವಿದ್ಯುಲ್ಲತಾ ವಾದ ಮಂಡಿಸಿ, ರಾಜ್ಯದ ಎಲ್ಲ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳಲ್ಲಿನ ಸ್ಥಿತಿಗತಿ ಕುರಿತು ಸಮಗ್ರ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿತ್ತು. ಆದರೆ, ಈವರೆಗೂ ವರದಿ ಸಲ್ಲಿಸಿಲ್ಲ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಅದನ್ನು ಗಂಭೀರವಾಗಿ ಪರಿಗಣಿಸಿದ ಪೀಠ, ಮುಂದಿನ ವಿಚಾರಣೆ ವೇಳೆ ಸಮಗ್ರ ಸಮೀಕ್ಷಾ ವರದಿ ಸಲ್ಲಿಸಬೇಕೆಂದು ಸರ್ಕಾರಕ್ಕೆ ನಿರ್ದೇಶಿಸಿತು.

### ಸಮಾನ ಪರಿಹಾರ ನೀಡಿ

ಕರೀಕೆರೆ ಗ್ರಾಮದ ಶಾಲೆಯಲ್ಲಿ ಧ್ವಜಸ್ತಂಭ ಅಳವಡಿಸುವ ವೇಳೆ ವಿದ್ಯುತ್ ಪ್ರವಹಿಸಿ ಮೃತಪಟ್ಟ ವಿದ್ಯಾರ್ಥಿ ಚಂದನ್ ಪಾಲಕರಿಗೆ 1 ಲಕ್ಷ ರೂ. ಪರಿಹಾರ ನೀಡಿರುವುದಕ್ಕೆ ನ್ಯಾಯಪೀಠ ಆಕ್ಷೇಪ ವ್ಯಕ್ತಪಡಿಸಿತು. 2019ರ ಕೊಪ್ಪಳದ ದುರ್ಘಟನೆಯಲ್ಲಿ ಮೃತರಾಗಿದ್ದ 5 ವಿದ್ಯಾರ್ಥಿಗಳ ಪಾಲಕರಿಗೆ ಒಟ್ಟು 10 ಲಕ್ಷ ರೂ. ಪರಿಹಾರ ನೀಡಲಾಗಿದೆ. ಅದೇ ರೀತಿ ಈ ಪ್ರಕರಣದಲ್ಲೂ ಸಮಾನ ಪರಿಹಾರ ಮೊತ್ತವನ್ನು ಮೃತರ ಕುಟುಂಬಕ್ಕೆ ಪಾವತಿಸಬೇಕು. ಜತೆಗೆ, ಗಾಯಗೊಂಡಿರುವ ಪವನ್ ಹಾಗೂ ಶಶಾಂಕ್ ಎಂಬ ಮತ್ತಿಬ್ಬರು ವಿದ್ಯಾರ್ಥಿಗಳಿಗೂ ಪರಿಹಾರ ಪಾವತಿಸಬೇಕು ಎಂದು ಸರ್ಕಾರಕ್ಕೆ ನಿರ್ದೇಶಿಸಿತು.

Bengaluru Edition
Sep 7, 2021 Page No. 6
Powered by : eReleGo.com








ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದೊಯ್ಯುವ ವಿವಿಧ ಬಗೆಯ ಒಪ್ಪಂದದ ವಾಹನಗಳಾದ ಮೋಟಾರು ಕ್ಯಾಬ್/ ಮ್ಯಾಕ್ಸಿ ಕ್ಯಾಬ್/ ಓಮಿನಿ ಬಸ್‌ಗಳು ಕಡ್ಡಾಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು

ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ (Civil) 13029 of 1985 ರಲ್ಲಿ ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದೊಯ್ಯುವ ಶಾಲಾ ವಾಹನಗಳಲ್ಲಿ ವಹಿಸಬೇಕಾದ ಕ್ರಮಗಳ ಬಗ್ಗೆ ವಿಸ್ತಾರವಾದ ಸೂಚನೆಗಳನ್ನು ನೀಡಿದೆ. ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಶಾಲಾ ಮಕ್ಕಳನ್ನು ಕರೆದೊಯ್ಯುವ ವಿವಿಧ ಬಗೆಯ ಒಪ್ಪಂದದ ವಾಹನಗಳಾದ ಮೋಟಾರು ಕ್ಯಾಬ್/ ಮ್ಯಾಕ್ಸಿ ಕ್ಯಾಬ್/ ಓಮಿನಿ ಬಸ್‌ಗಳು ಕಡ್ಡಾಯವಾಗಿ ಪಾಲಿಸಲು, ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. ವಾಹನವು 'ಪ್ರಯಾಣಿಕರ ಸಾರಿಗೆ ವಾಹನ' ಎಂಬುದಾಗಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಸೂಕ್ತ ಪರವಾನಗಿಯನ್ನು ಹೊಂದಿರಬೇಕು.

2. ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಮುಂಬಾಗ ಮತ್ತು ಹಿಂಬಾಗದಲ್ಲಿ 'ಶಾಲಾ ಕರ್ತವ್ಯದ ಮೇರೆಗೆ' ಎಂದು ಶಾಶ್ವತವಾಗಿ ಬರೆಸುವುದು.

3. ಶಾಲಾ ವಾಹನವು ಪರವಾನಗಿ ನೀಡಲಾದ ಆಸನ ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯತಕ್ಕದ್ದಲ್ಲ. ಯಾವುದೇ ಮಗು ಬೇರೆಯವರ ತೊಡೆಯ ಮೇಲೆ ಕೂರದಂತೆ ನೋಡಿಕೊಳ್ಳುವುದು.

4. ವಾಹನದಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡುವುದು.

5. ಸಾಧ್ಯವಿರುವೆಡೆ ಆಸನ ಬೆಲ್ಟ್‌ಗಳನ್ನು ಕಡ್ಡಾಯವಾಗಿ ಜೋಡಿಸುವುದು.

6.ವಾಹನದಲ್ಲಿ ಶಾಲೆಯ ಹೆಸರು ಮತ್ತು ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂಧಿಸುವುದು.

7.ಶಾಲಾ ವಾಹನವನ್ನು ಚಾಲನೆಮಾಡುವ ಚಾಲಕ ಅಂತಹ ವಾಹನಗಳ ಚಾಲನೆಯಲ್ಲಿ Minimum~ 05 year ಅನುಭವ ಹೊಂದಿರುವುದು ಮತ್ತು ಆತನ ಮೇಲೆ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವ ಅಪರಾಧಗಳು ವರದಿಯಾಗಿರಬಾರದು.

8.ಶಾಲಾ ಮಕ್ಕಳನ್ನು ಕರೆದೊಯ್ಯುವ ಒಪ್ಪಂದದ ವಾಹನಗಳನ್ನು ಬಳಸುವಾಗ, ವಾಹನದ ಮಾಲೀಕರು ವಾಹನ ಚಾಲಕನ ಹೆಸರು ಮತ್ತು ವಾಹನದ ವಿವರಗಳನ್ನು ಸ್ಥಳೀಯ ಪೋಲಿಸ್ ಠಾಣೆಯ ಪಿ.ಸಿ ಮತ್ತು ಡಿಸಿ (ಟ್ರಾಫಿಕ್)/ ಜಿಲ್ಲೆಯ ಎಸ್‌ಪಿರವರಿಗೆ ನೀಡುವುದು.

9.ಮಕ್ಕಳು ಸುರಕ್ಷಿತವಾಗಿ ಪ್ರಯಾಣಿಸುವಂತೆ ನೋಡಿಕೊಳ್ಳಲು ಮತ್ತು ಅವರು ಕ್ಷೇಮವಾಗಿ ವಾಹನವನ್ನು ಹತ್ತುವುದಕ್ಕೆ ಮತ್ತು ಇಳಿಯುವುದಕ್ಕೆ ನೆರವು ನೀಡಲು ವಾಹನದಲ್ಲಿ ಒಬ್ಬರು ಸಹಾಯಕರನ್ನು ನೇಮಿಸುವುದು.

# ರಾಜ್ಯ ಮಟ್ಟದ ಸಂಪರ್ಕಗಳು

- ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ–080–22867381.
- ರಾಜ್ಯ ಮಕ್ಕಳ ರಕ್ಷಣಾ ಆಯೋಗ – 080–22115291/47181177.
- ರಾಜ್ಯ ಬಾಲ್ಯ ವಿವಾಹ ನಿಷೇಧ ಕೋಶ– 080–22351098.
- ರಾಜ್ಯ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ಕೋಶ– 080–22453549
- ರಾಷ್ಟ್ರೀಯ ಸೈಬರ್ ಅಪರಾಧ ತಡೆ – 1800–425–6235
- ಮನಸಿಕ ಆರೋಗ್ಯ ಸಲಹೆ –18005990019
- **ಪೊಲೀಸ್ ಸಹಾಯವಾಣಿ: 112**
- (ERSS- Emergency Response System Support)




**Dr. K Raghavendra Bhat**
**Regional Coordinator**
PH: 9845699735

GOK-Unicef Child Protection Project
O/o District Administration Building
Koppal-583231